# ಮಹಾಸಾಮಂತ ಗೂಳಿಯ ಬಾಚಿದೇವ

ತುಮಕೂರು ಜಿಲ್ಲೆ ಅದೇ ತಾಲ್ಲೂಕಿನ, ಗೂಳೂರು ಹೋಬಳಿಯ ಕೈದಾಳವು ಪ್ರಸಿದ್ಧವಾದ ಐತಿಹಾಸಿಕ ಮಹತ್ವದ ಸ್ಥಳ. ಜಿಲ್ಲಾ ಕೇಂದ್ರವಾದ ತುಮಕೂರಿನಿಂದ ದಕ್ಷಿಣಕ್ಕೆ ಏಳು ಕಿ.ಮೀ. ದೂರದಲ್ಲಿರುವ ಕೈದಾಳವು, ಹನ್ನೆರಡನೆಯ ಶತಮಾನದಲ್ಲಿ, ಒಬ್ಬ ಆದರ್ಶ ಜೈನ ಶ್ರಾವಕ ಮಹಾಸಾಮಂತನಿಂದ ಪ್ರಸಿದ್ಧಿ ಪಡೆಯಿತು.

ಕ್ರಿ.ಶ. ಹನ್ನೆರಡನೆಯ ಶತಮಾನದಲ್ಲಿ ಈಗಿನ ಕೈದಾಳ ಮತ್ತು ಅದರ ಸುತ್ತ ಮುತ್ತಲಿನ ಪ್ರದೇಶಕ್ಕೆ 'ಮರುಗರೆ ನಾಡು' ಎಂಬ ಹೆಸರಿತ್ತು. ಈ ಮರುಗರೆ ನಾಡಿಗೆ ಕೈದಾಳವು ಮುಖ್ಯ ಪಟ್ಟಣವಾಗಿತ್ತು. ಈ ಮರುಗರೆ ನಾಡನ್ನು, ಅದಕ್ಕೆ ನೆಲೆ ವೀಡಾದ ಕೈದಾಳದಿಂದ, ಮಹಾಸಾಮಂತನೂ ಸಾಹಸಿಯೂ ಜಿನಭಕ್ತನೂ ಆದ ಗೂಳಿಯ ಬಾಚಿದೇವ ಎಂಬಾತನು ಆಳುತ್ತಿದ್ದನು. ಆತನ ಒಲವಿನ ಮಡದಿ ಭೀಮವೆನಾಯಕಿತಿ ಎಂಬಾಕೆ–

ಜಿನಪತಿ ದೆಯ್ವಂ ತಂದೆ ಕಲಿಯಾದ್ಧರೆ ನಾಕನೊಳ್ಪನಾಂತ ತ
ಜ್ಜನನಿ ವಿನೂತೆ ಬಿಂಬಲೆ ಮಹಾಸತಿ ಗೂಳಿಯ ಬಾಚಿದೇವ ಸ
ಜ್ಜನ ನುತ ವೀರ ತನ್ನ ಪತಿಯೊಂದೊಡೆ ಪೋಲ್ವರಾರ್ ಧಾತ್ರಿಯೊಳ್
ವನಿತೆಯಣ ಭೀಮಲೆಯೊಳೊರ್ಜ್ಜಿತ ಪುಣ್ಯ ಗುಣಾಭಿರಾಮೆಯೊಳ್ ||

ಈ ಚಂಪಕ ಮಾಲೆ ವೃತ್ತ ಪದ್ಯವು ಭೀಮಲೆ (ಭೀಮನ) ನಾಯಕಿತಿಯ ಮನೆತನವನ್ನು ಪರಿಚಯಿಸುತ್ತದೆ. ಭೀಮಲೆಯ ಪೂಜಿಸುವ ಮನೆದೇವರು ಜಿನಪತಿ (ಅರ್ಹಂತ–ತೀರ್ಥಂಕರ), ಈಕೆಯ ತಂದೆ ಕಲಿಯಾದ ನಾಕನು (ನಾಗದೇವ–ನಾಗಮಯ್ಯ), ಈಕೆಯ ತಾಯಿ ಸಜ್ಜನರಿಂದ ಹೊಗಳಿಸಿಕೊಂಡಿರುವ ವೀರನಾದ ಬಾಚಿ ದೇವ–ಎಂದ ಮೇಲೆ, ತನ್ನ ಗುಣಗಳಿಂದಲೇ ಸುಂದರಳಾದ ಪುಣ್ಯವಂತೆ, ಭೀಮಲೆ ಯನ್ನು ಈ ಭೂಮಿಯಲ್ಲಿ ಹೋಲುವಂತಹವರು ಬೇರೆಯಾರಿದ್ದಾರೆ? ಇಂತಹ ಊರ್ಜಿತ ಪುಣ್ಯ ಗುಣಾಭಿರಾಮೆಯಾದ ಭೀಮಲೆಯು, ಮಹಾಸಾಮಂತನಾದ ಗೂಳಿಯ ಬಾಚಿದೇವನ ಹೆಂಡತಿಯಾದ ಮೇಲೆ ಈ ದಂಪತಿಗಳು ಕೈದಾಳವಲ್ಲೂ, ತಮ್ಮ ನಾಡಾದ ಮರುಗರೆಯಲ್ಲೂ ದಾನ ಧರ್ಮಗಳಿಂದ ಸತ್ಕಾರ್ಯ ನಿರತರಾದರು. ಎಪಿಗ್ರಾಫಿಯ ಕರ್ನಾಟಕದ ಹನ್ನೆರಡನೆಯ ಸಂಪುಟದಲ್ಲಿ, ತುಮಕೂರು ಒಂಬತ್ತನೆಯ ಸಂಖ್ಯೆಯ ಶಾಸನ ಈ ಬಾಚಿದೇವನ ಜನಮುಖಿ ಚಿಂತನೆ, ಜನೋಪ ಯೋಗಿ ಕಾರ್ಯ ಚಟುವಟಿಕೆಗಳನ್ನು ಪ್ರತಿಬಿಂಬಿಸಿದೆ: ಈ ಶಾಸನದ ತೇದಿ ಕ್ರಿ.ಶ. ೧೧೫೧ [ಎ.ಕ. ೧೨. ತು. ೯. ೧೧೫೧. ಪು. ೧೩–೧೫. ಕೈದಾಳ (ತುಜಿ/ತಾ)].

ಗೂಳಿಯ ಬಾಚಿದೇವನು ತನ್ನ ಕಾಲದ ಎಲ್ಲ ಮತ ಧರ್ಮಗಳನ್ನೂ ಸ್ವಧರ್ಮನಿಷ್ಠೆಯಿಂದ ಸಮಭಾವದಿಂದ ಗೌರವಿಸಿ ಉಳಿದ ಪ್ರಜೆಗಳಿಗೆ ಮೇಲ್ಪಂಕ್ತಿ ಹಾಕಿದ್ದನು:

ಧರೆಗೆಸೆವ ನಾಲ್ಕು ಸಮೆಯದ
ಸಿರಿ ಕಲ್ಪಾವನಿರುಹಂ ಬುಧಜನ (ನಿವಹ) ಕೇ
ದೊರೆವೆತ್ತ ಪೆಂಪಿನಿಂದಂ
ಪಿರಿಯಂ ಧರ್ಮ್ಮಾವತಾರ ಗಂಗನ ಪುತ್ರಂ ||

ಬಲ್ಲಿದರ ಪಾಲಿಗೆ ಬೇಡಿದುದನ್ನು ನೀಡುವ ಕಲ್ಪವೃಕ್ಷವಾಗಿದ್ದ ಈ ಬಾಚಿದೇವನು ನಾಲ್ಕೂ ಧರ್ಮಗಳಿಗೆ ಲಕ್ಷ್ಮಿಯಾಗಿದ್ದನು, ತನ್ನ ಹಿರಿಮೆಯಿಂದಾಗಿ ಧರ್ಮವೇ ಮನುಷ್ಯರೂಪಿನಿಂದ ಬಂದ ಹಾಗಿದ್ದನು; ನಾಲ್ಕೂ ಸಮಯವೆಂದರೆ ಮತಧರ್ಮ ಕುಲ ಸಮಾಜಗಳು. ಆಯಾ ಕುಲದವರ ನಂಬಿಕೆ ನಿಷ್ಠೆ ಪೂಜೆಗಳಿಗೆ ತಕ್ಕ ದೇಗುಲಗಳನ್ನೂ ತಾನೇ ಕಟ್ಟಿಸಿಕೊಟ್ಟನು:

ಉದ್ಧರಿಸಿ ಜೈನ ಭವನಮ
ನುದ್ಧರಿಸಿ ಶಿವಾಲಯಂಗಳಂ ಮುದದಿಂದ
ನ್ನುದ್ಧರಿಸಿ ವಿಷ್ಣುಗೇಹಮ
ನುದ್ಧರಿಸಿದ ನಲ್ತೆ ಬಾಚಿ ಜಸದುಂನತಿಮಂ ||

ಸೊಗಯಿಪ ಕಾಮಧೇನು ಜಿನಶಾಸನಲಕ್ಷ್ಮಿಗೆ ಕಲ್ಪ ಭೂರುಹಂ
ಮೃಗಧರ ಭೂಷಣಾಗಮ ತಪಸ್ವಿಗೆ ಸಿಧ್ಧರಸ ಪ್ರವಾಹಮೇಂ
ನೆಗೆದುದು ಬುದ್ಧ ಕೋಟಿಗೆನೆ ಚಿನ್ತಿಸದೀವ ಮಹಾಂಶುರತ್ನದಾ
ನಗಧರನಾಗಮಜ್ಞರ್ಗಿಗವೆಂದೊಡೆ ಬಾಚಿಯದೇಂ ಕೃತಾರ್ತ್ಥನೋ ||

ತನ್ನ ಆಳ್ವಿಕೆಯ ನೆಲದಲ್ಲಿ ಜಿನಭವನ, ಶಿವಾಲಯ, ವಿಷ್ಣು ಮಂದಿರಗಳನ್ನು ಮಾಡಿಸಿ ತನ್ನ ಯಶಸ್ಸನ್ನು ಹೆಚ್ಚಿಸಿದನು ಜಿನ ಶಾಸನಲಕ್ಷ್ಮಿಗೆ (ಜೈನಧರ್ಮ ಪ್ರಸಾರಕ್ಕೆ) ಚೆಲುವಾದ ಕಾಮಧೇನು. ಚಂದ್ರಶೇಖರ ಸ್ವಾಮಿಯ ಆಗಮ ತಪಸ್ವಿಗಳು (ಶೈವಾಗಮ ಪಲಕರ) ಪಾಲಿಗೆ ಕಲ್ಪವೃಕ್ಷ, ಬೌದ್ಧ ಧರ್ಮವನ್ನು ಅನುಸರಿಸುವವರಿಗೆ ಸಿದ್ಧರಸದ ಹೊನಲು, ಗೋವರ್ಧನಗಿರಿಧಾರಿಯಾದ ಕೃಷ್ಣನ ಭಕ್ತರಾದ ವೈಷ್ಣವರಿಗೆ ಸಂತೋಷದಿಂದ ಇಷ್ಟಾರ್ಥಗಳನ್ನು ಕೊಡುವ ಚಿಂತಾಮಣಿ–ಎಂದೆನಿಸಿ ಬಾಚಿದೇವನು ಧನ್ಯನಾಗಿದ್ದನು. ಅದರಿಂದ ಆ ಎಲ್ಲ ಮತಧರ್ಮಗಳ ಮೂಲ ದೈವಗಳು

ಚೆಲುವನಾದ ಬಾಚಿಗೆ ಚಂದ್ರನೂ ಕುಲಪರ್ವತಗಳೂ ಇರುವವರೆಗೂ ಜಯಪರಂಪರೆಯನ್ನು ಕರುಣಿಸಿಲೆಂದು ಪ್ರಾರ್ಥಿಸಲಾಗಿದೆ.

ಜಿನಪತಿ ಕೂರ್ತ್ತು ಬೇಳ್ಪ ಸುಖಸಂಪದಮಂ ಹರನೊಲ್ದು ಕೀರ್ತ್ತಿಯಂ
ಕನಕ ಸರೋದ್ಭವಂ ವರಚಿರಾಯುವನಿಂಬಿನಲೀಗಳಚ್ಯುತಂ
ಮನವೊಸೆದೊಪ್ಪುತಿಪ್ಪುತಿರ್ಪ್ಪಸಿರಿಯಂ ವರಬುದ್ಧ ಜಯಾಭಿವೃದ್ಧಿಯಂ
ಮನಸಿಜರೂಪ ಬಾಚಿ ನಿನಗೀಗೆ ಶಶಾಂಕ ಕುಳಾದ್ರಿಯುಳ್ಳಿನಂ ||

ಜಿನಪತಿ, ಹರ, ಬ್ರಹ್ಮ, ಅಚ್ಯುತ, ವರಬುದ್ಧ ಈ ಐವರನ್ನೂ ನುತಿಸುತ್ತಲೇ ಅವರು ಬಾಚಿಗೂ ಬೇಡುವ ಸುಖಸಂಪತ್ತು ಕೀರ್ತಿ ಆಯಸ್ಸು ಐಶ್ವರ್ಯ ಗೆಲುವು-ಇವನ್ನು ಕೊಡಲಿ ಎಂದು ಆಶಿಸಿರುವುದು ಈ ಪದ್ಯದ ವೈಶಿಷ್ಟ್ಯ. ಹೀಗೆ ನಾಲ್ಕೂ ಮತಧರ್ಮಗಳವರನ್ನು ಉದ್ಧರಿಸುವ ಹೊಣೆಗಾರಿಯನ್ನು ಹೊತ್ತು ನಿತ್ತರಿಸಿದ ಗುಣದೊಡೆಯನಾದ ಶ್ರೀಮಾನ್ ಮಹಾಸಾಮಂತ-ಗೂಳಿ-ಬಾಚಿದೇವನು ಮರುಗರೆನಾಡಿನಲ್ಲಿ ಅನೇಕ ದೇವಾಲಯ ಬಸದಿ ವಿಷ್ಣು ಗೃಹಗಳನ್ನಷ್ಟೇ ಅಲ್ಲದೆ ದೊಡ್ಡ ಕೆರೆಗಳನ್ನೂ ಕಟ್ಟಿಸಿದನು. ತನ್ನ ಒಲವಿನರಸಿ ಮಿಡಿದಿ ಭೀಮವೆ ನಾಯಕಿತಿ ಸತ್ತ ನಿಮಿತ್ತವಾಗಿ, ಪರೋಕ್ಷ ವಿನಯವೆಂದು ಆಕೆಯ ಹೆಸರಿನಲ್ಲಿ, 'ಭೀಮಜಿನಾಲಯ' ಎಂಬ ಬಸದಿಯನ್ನು ಮಾಡಿಸಿದನು, 'ಭೀಮಸಮುದ್ರ' ವೆಂದು ಒಂದು ಕೆರೆಯನ್ನು ಕಟ್ಟಿಸಿದನು, ಅನೇಕ ದಾನದತ್ತಿ ಇತ್ತನು.

ಮರುಗರೆ ನಾಡಿನ ಆಧಾರವಾದ ಊರುಗಳಾದ ಕೈದಾಳ ಗೂಳೂರುಗಳಲ್ಲಿ ಈಗ ಜೈನ-ಬೌದ್ಧ ದೇವಾಲಯಗಳು ಉಳಿದು ಬಂದಿಲ್ಲ. ಗೂಳೂರು ಎಂಬ ಹೆಸರು ಬಂದಿರುವುದು ಈ ಗೂಳಿಯ ಬಾಚಿದೇವನಿಂದಲೇ; ಗೂಳಿಯ (ಬಾಚಿಯ) ಊರು ಗೂಳೂರು. ಗೂಳೂರು-ಕೈದಾಳ ಎರಡೂ ಸೇರಿ ಅಂದು ಒಂದೇ ದೊಡ್ಡ ಪಟ್ಟಣ ವಾಗಿದ್ದು ರಾಜಧಾನಿ ಆಗಿತ್ತು. ಕೈದಾಳ ಎಂಬ

ಕನ್ನಡ ಹೆಸರನ್ನು ಸಂಸ್ಕೃತಕ್ಕೆ ಪರಿವರ್ತಿಸಿ ಕ್ರೀಡಾಪುರ' ಎಂದೂ ಮಾಡಿದ್ದಾರೆ. ಕೈದಾಳದಲ್ಲಿ ಇಂದಿಗೂ ಇರುವ ಶ್ರೀ ಚನ್ನಕೇಶವ ದೇವಾಲಯವು ದ್ರಾವಿಡಶೈಲಿಯದಾಗಿದ್ದು ಇದು ಗೂಳಿಯ ಬಾಚಿ ದೇವನು ಮಾಡಿಸಿದ್ದಾಗಿದೆ. ಎರಡೂವರೆ ಅಡಿ ಎತ್ತರದ ಪೀಠದ ಮೇಲೆ ನಿಂತಿರುವ ಐದೂವರೆ ಅಡಿ ಆಳೆತ್ತರದ ಶ್ರೀ ಚನ್ನಕೇಶವ ದೇವರ ಪ್ರಭಾವಳಿಯಲ್ಲಿ ಹತ್ತು ಅವತಾರಗಲ ಶಿಲ್ಪವಿದೆ. ಈ ದೇಗುಲದ ಮಹಾದ್ವಾರದ ಬಲಗಡೆಯ ಒಂದು ಕಂಬದ ಮೇಲೆ ಒಂದೂಕಾಲು ಅಡಿ ಎತ್ತರದ ವಿಗ್ರಹವು ನೋಡತಕ್ಕದ್ದು. ಕೈಗಳನ್ನು ಮುಗಿಯುತ್ತಿರುವ ಹಾಗೆ ಜೋಡಿಸಿ, ಹೆಗಲ ಮೇಲೆ ಉತ್ತರೀಯ ಹೊದ್ದು, ಸೊಂಟದಲ್ಲಿ ಬಾಕು ಇರುಕಿಸಿ ನಿಂತಿರುವ ಈ ಉಬ್ಬು ಶಿಲ್ಪದ ವ್ಯಕ್ತಿಯೇ ಗೂಳಿಯ ಬಾಚಿದೇವ. ಇದನ್ನು ಮುಕ್ಕಾಗದಂತೆ, ಚೊಕ್ಕವಾದ ಉಳಿಯುವಂತೆ ಕಾಪಾಡಬೇಕಾಗಿದೆ. ಇದೊಂದು ಸಾಮಂತ ಐತಿಹಾಸಿಕ ಮಹತ್ವದ ವ್ಯಕ್ತಿಯೊಬ್ಬನ ಪ್ರತಿರೂಪ ಎಂಬ ಕಾರಣಕ್ಕಾಗಿ.

ಗೂಳಿಯ ಬಾಚಿದೇವ ಎಂಬ ಹೆಸರಿನ ಆದಿಯಲ್ಲಿ ಇರುವ ರೂಪವಾದ 'ಗೂಳಿ' ಎಂಬುದು ಅರ್ಥ ಮನನೀಯ. ಸಾಮಾನ್ಯವಾಗಿ ಶ್ರೇಷ್ಠ ಎಂಬರ್ಥಸೂಚಕವಾಗಿ ವೃಷಭವನ್ನು ಹೇಳುವುದುಂಟು; ಪರಾಕ್ರಮಿ ಎಂಬರ್ಥದಲ್ಲಿ ಬಳಸಲಾಗಿರಲೂ ಬಹುದು. ಆದರೆ ಕೈದಾಳದ ಆಸುಪಾಸಿನಲ್ಲಿ ಆಗಿಹೋದ ಸಗರಮಣಲೆಯರ ಮನೆತನದಲ್ಲಿ ಬರುವ 'ಪರಮಗೂಳ' ಎಂಬ ನಾಮರೂಪಗಳನ್ನೂ ಗಮನಿಸಬೇಕು. ಪಲ್ಲವಾಧಿರಾಜನ ಮಗಳಾದ ಕುಂದಾಚ್ಚಿಯ ಗಂಡ, ನಿರ್ಗುಂದದ ರಾಜ, ಪರಮಗೂಳ [ಎ.ಕ.೪ ನಮಂ. ೮೫.ಪು. ೧೩೫; ರೈಸ್, ಬಿ. ಎಲ್., ಮೈಸೂರ್ ಅಂಡ್ ಕೂರ್ಗ್, ಪು. ೩೯]. ಆ ಪರಮಗೂಳನೂ ಜೈನನಾಗಿದ್ದನು, ಆತನ ವಂಶಕ್ಕೆ ಸೇರಿದ ಜ್ಞಾತಿಗಳಾಗಿ ಇದ್ದ ಮನೆತನವಾಗಿ ಗೂಳಿಯ ಬಾಚಿ ದೇವನು ಬಾಳಿದನೆ ಎಂಬುದು ಪರಿಭಾವನೀಯ.

ಆದರೆ ಗೂಳಿಯ ಬಾಚಿದೇವನದು ಅದಳ ವಂಶ; ಈತನನ್ನು ಅದಳಕುಳ ಕಮಳಹಂಸ ಎಂದೂ, ಅದಳವಂಶ ಕುಳಾಂಬರ ಬಾನು ಎಂದೂ ಶಾಸನ ನಮೂಡಿಸಿದೆ [ಎ.ಕ. ೧೨.ತು. ೯.ಪು. ೧೩. ಸಾಲು: ೧೫-೧೬ ಮತ್ತು ೧೮]. ಇಲ್ಲಿಯೇ ಹೇಳಬೇಕಾದ ಮತ್ತು ಈ ಅದಳವಂಶಕ್ಕೆ ಸಂಬಂಧಿಸಿದ ಬಹುಮುಖ್ಯವಾದ ಪೂರಕ ವಿಚಾರವೂ ಇದೆ. ಅದಳ ವಂಶದವರಿಗೆ ಈಗಿನ ಶಿವಗಂಗೆಯೂ ಸೇರಿತ್ತು. ಶಿವಗಂಗೆಯಲ್ಲಿ ಅದಳವಂಶದವರು ಕಟ್ಟಿಸಿಕೊಟ್ಟ ಅದಳಜಿನಾಲಯಗಳು ಇದ್ದುವೆಂದು ಶಾಸನದಲ್ಲಿ ದಾಖಲೆಯಿದೆ [ಎ.ಕ.೯. ನೆಮಂ. ೮೪ ೧೧೪೦. ಸಿವಗಂಗೆ]. ಅದಳವಂಶ ಶಿಖಾಮಣಿಯಾಗಿದ್ದ ವಿಷ್ಣುವರ್ಧನನು ಇದನ್ನು ಮಾಡಿಸಿದನು. ಪಟ್ಟಮಹಿಷಿಯಾದ ಶಾಂತಲಾದೇವಿಯು ಶಿವಗಂಗೆಯಲ್ಲಿ ಜೈನ ಸಲ್ಲೇಖನ ವ್ರತಧಾರಿಯಾಗಿ ಮುಡಿಪಿದಳೆಂದು ಶಾಸನಗಳು ಹೇಳಿವೆ [ಎ.ಕ. ೨(ಪ.) ೧೭೬(೧೪೩) ೧೧೩೧.ಪು. ೧೩೧. ಸಾಲು: ೮೭-೯೬]. ಈ ರೀತಿ ವಾಂಶಿಕ ಸಂಬಂಧಗಳ ಹಿನ್ನೆಲೆಯಲ್ಲಿ ಚಾರಿತ್ರಿಕ ಸಂಗತಿಗಳನ್ನು ಅನ್ವೇಷಿಸಿ ಸತ್ಯವನ್ನು ಸ್ಫೋಟಿಸುವ ಕೆಲಸ ಇನ್ನಷ್ಟು ಆಗಬೇಕಾಗಿದೆ. ಅತ್ತಕಡೆಗೆ ತೋರು ಬೆರಳು ಮಾಡಿರುವುದು ಈ ಸಂಪ್ರಬಂಧದ ಪ್ರಯತ್ನ.

## ಶಾಸನಗಳಲ್ಲಿ ವಾಜಿವಂಶ ವಲ್ಲರಿ

### ಪೀಠಿಕೆ

ಧಾರವಾಡ ಜಿಲ್ಲೆಯ ಗದಗ ತಾಲ್ಲೂಕಿಗೆ ಸೇರಿದ ಲಕ್ಕುಂಡಿಯ ೫೨ ನೆಯ ಸಂಖ್ಯೆಯ ಶಿಲಾಶಾಸನ ಕರ್ನಾಟಕದ ಚರಿತ್ರೆಯಲ್ಲಿ ಮಹತ್ವವನ್ನು ಪಡೆದಿದೆ [ಸೌ.ಇ.ಇ. ೧೧-೧, ೫೨-೫೩. ೧೦೦೭-೦೮]. ಈ ಶಾಸನವನ್ನು ಮಹಾಕವಿ ರನ್ನನ ರಚನೆಯೆಂದು ಮಾನ್ಯ ಮಡಾಲಾಗಿದೆ. ಲಕ್ಕುಂಡಿಯ ಶಾಸನದ ಆಧಾರದಿಂದ ತೈಲಪ ಚಕ್ರವರ್ತಿಯ ಸಾಮ್ರಾಜ್ಯ ವಿಸ್ತರಣೆಗೆ ಕಾರಣರಾದ ಮತ್ತು ಆರಂಭ ಘಟ್ಟದಲ್ಲಿ ಸುಭದ್ರವಾದ ತಳಪಾಯ ಹಾಕಿಕೊಟ್ಟ ಮಹಾವೀರರ, ಮಹಾತ್ಯಾಗಿ ರಾಷ್ಟ್ರಭಕ್ತರ ವಿವರಗಳನ್ನು ತಿಳಿಯಬಹುದು. ತರ್ದವಾಡಿಯ ಮಹಾಸಾಮಂತನಾಗಿದ್ದ ತೈಲಪನು

ಚಾಳುಕ್ಯ ಸಾಮ್ರಾಜ್ಯವನ್ನು ಕಟ್ಟುವ ಸಾಹಸದಲ್ಲಿ ನಿರತನಾದಾಗ, ಆತನಿಗೆ ಭುಜಾದಂಡವಾಗಿ ನಿಂತವರಲ್ಲಿ ದಲ್ಲಪಯ್ಯ ಮತ್ತು ಮಲ್ಲಪಯ್ಯ ಹಾಗೂ ಇವರಿಬ್ಬರ ಇಡೀ ಮನೆತನದ ಕಲಿಗಳು ಪ್ರಮುಖರು

ವೆಂಗಿ ವಿಷಯದ ಕಮ್ಮೆನಾಡಿನ ಪುಂಗನೂರಿನಲ್ಲಿ ಪ್ರತಿಷ್ಠಿತವಾದ ಮನೆತನ ನಾಗಮಯ್ಯನದು, ಪುಂಗನೂರು ಪುರವರಾಧೀಶನಾದ ನಾಗಮಯ್ಯನು ದಾನಿಯಾಗಿ, ಜನಹಿತ ಕಾರ್ಯನಿರತನಾಗಿ, ಜ್ಞಾನಿಯಾಗಿ, ಜೈನ ಆಗಮ ಶಾಸ್ತ್ರ ನಿಪುಣನಾಗಿ ಹಿರಿಮೆ ಗಳಿಸಿದ್ದನು, ಅವನ ಮಗಂದಿರಾದ ಮಲ್ಲಪ್ಪಯ್ಯ ಪುನ್ನಮಯ್ಯರು ಶಸ್ತ್ರ-ಶಾಸ್ತ್ರ ವಿದ್ಯಾ ಕುಶಲರು. ಕೌಂಡಿನ್ಯಕುಲ ಪ್ರದೀಪನಾದ ಮಲ್ಲಪಯ್ಯನು ರಾಜ ನೀತಿ ವಿಶಾರದನಾಗಿ ಶೌರ್ಯಾವಷ್ಟಂಬದಿಂದ ತೈಲಪನ ಸಾಮ್ರಾಜ್ಯ ಲಕ್ಷ್ಮೀ ಪ್ರವರ್ಧಮಾನಕ್ಕೆ ಕಾರಣವಾಗಿದ್ದನು. ಮಲ್ಲಪ್ಪಯ್ಯನ ತಮ್ಮನಾದ ಪುನ್ನಮಯ್ಯನು ಚಾಳುಕ್ಯರ ಸೈನ್ಯಾಧಿಪತಿಯಾಗಿ, ತೈಲಪನಿಗಾಗಿ ಸಾಹಸದಿಂದ ಕಾವೇರಿ ಸರಿತ್ತೀರದಲ್ಲಿ ಹೋರಾಡುತ್ತಿರುವಾಗ ಶತ್ರುಗಳಿಂದ ಹತನಾಗಿ ಸುರಲೋಕದ ಅತಿಥಿಯಾದನು.

ಮಲ್ಲಪನ ಮಡದಿ ಜಿನಪಾದ ಪಯೋಜ ಭೃಂಗಿಯಾದ ಅಪ್ಪಕಬ್ಬೆ. ಆಕೆ ಅನೂನಗುಣ ಸಂಪನ್ನನಾದ ನಾಗಮಯ್ಯನ ಮತ್ತು ವಿನಯಮತಿ ನಾಗಿಯಬ್ಬೆಯ ಮಗಳು. ಮಲ್ಲಪ್ಪಯ್ಯನ ತಂದೆಯ ಹೆಸರೂ ನಾಗಮಯ್ಯ, ತಂದೆಗೆ ಸಮಾನರಾದ ಮಾವನ ಹೆಸರೂ ನಾಗಮಯ್ಯ. ಮಲ್ಲಪಯ್ಯ-ಅಪ್ಪಕಬ್ಬೆ ದಂಪತಿಗಳಿಗೆ ಮಕ್ಕಳು ಎಂಟು ಜನ. ಅವರಲ್ಲಿ ಮಗಂದಿರು ಐವರು ಮಗಳುದಿರು ಮೂವರು. ಹೆಣ್ಣು ಮಕ್ಕಳಲ್ಲಿ ಅತ್ತಿ ಮಬ್ಬೆ-ಗುಂಡಮಬ್ಬೆ ಎಂಬ ಅಕ್ಕತಂಗಿಯರನ್ನು ಸಚಿವೋತ್ತಮನಪ್ಪ ದಲ್ಲಪಯ್ಯನ ಹಿರಿಯ ಮಗನಾದ ನಾಗದೇವನಿಗೆ ಕೊಟ್ಟು ಮದುವೆ ಮಾಡಲಾಗಿತ್ತು.

ಅತ್ತಿಮಬ್ಬೆಯ ಮಾವನಾದ ದಲ್ಲಪಯ್ಯನು ತೈಲಪ ಚಕ್ರವರ್ತಿಗೆ ಭುಜಾದಂಡವಾಗಿದ್ದನು. ದಲ್ಲಪಯ್ಯನಿಗೂ ತೈಲಪನಿಗೂ ಇದ್ದ ಮೈತ್ರಿ ಎಷ್ಟು ಮಧುರತಮವಾಗಿತ್ತೆಂದರೆ, ಅದು ಅರಸ-ಆಳು ಎಂಬ ರೀತಿಯದಾಗಿರಲಿಲ್ಲ. ಪ್ರಭುವೂ ಪ್ರಜೆಯೂ ಗಾಢವಾದ ಸ್ನೇಹದ ಬೆಸುಗೆಯಿಂದ ಪರಸ್ಪರರು ಅನ್ಯೋನ್ಯವಾಗಿದ್ದರು. ದಲ್ಲನಿಗೂ ಅಹಮಲ್ಲನಿಗೂ ಸಿಂಹಾಸನವೊಂದು ಭೇದವೇ ಹೊರತು ಉಳಿದುದೆಲ್ಲ ಸಮಾನವೆಂಬಂಥ ಸಖ್ಯ.

ಇಷ್ಟು ಹಿರಿಮೆಯುಳ್ಳ ದಲ್ಲಪನನ್ನು ಶಾಸನದಲ್ಲಿ, ಮಂಡಳ ಸಿದ್ಧಿ ಮತ್ತು ವಿವೇಕ ಬೃಹಸ್ಪತಿ ಎಂಬ ಎರಡು ವಿಶೇಷಣಗಳಿಂದ ನಿರ್ದೇಶಿಸಲಾಗಿದೆ. ಇದು ಆಲೋಚನೀಯ ವಿಷಯ ಕ್ರಿ.ಶ. ೯೭೩-೭೪ ರಲ್ಲಿ ತೈಲಪನು ತಾನು ಸರ್ವತಂತ್ರ ಸಾಮ್ರಾಟನೆಂದು ಘೋಷಿಸಿದನು. ಇದಕ್ಕೆ ಮೊದಲು ಆತನು ರಾಷ್ಟ್ರಕೂಟರ ಮಹಾ ಸಾಮಂತನಾಗಿದ್ದನು. ದಲ್ಲಪಯ್ಯನು ತೈಲಪನಿಗೆ ಸಹಾಯಕನಾಗಿ ಸೇರಿದ್ದು ಯಾವಾಗ ಎಂಬ ಸೂಚನೆಗಳು ಸ್ಪಷ್ಟವಾಗಿ ಕಾಣುವುದಿಲ್ಲ. ತೈಲಪ-ದಲ್ಲಪರಲ್ಲಿ ಅಧಿಕಾರದ ಆಚೆಗೂ ಚಾಚಿಕೊಂಡ ಅನ್ಯೋನ್ಯತೆ ಆತ್ಮಿಯತೆಯನ್ನು ಕಂಡಾಗ, ಅವರಿಬ್ಬರೂ ಮೊದಲಿಗೆ ತರ್ದವಾಡಿಯ ಪರಿಸರದಲ್ಲಿ ಇದ್ದಾಗಿನಿಂದ ಒಂದು ಗೂಡಿರಬೇಕೆನಿಸುತ್ತದೆ. ಮಹ ಸಾಮಂತನಾಗಲೂ, ಅದರಲ್ಲಿ ಯಶಸ್ವಿಯಾಗಲೂ, ಸ್ವತಂತ್ರನೆಂದು ಘೋಷಿಸಿಕೊಳ್ಳಲೂ, ಮುಂದೆ ಚಕ್ರಾಧಿಪತ್ಯ ಸ್ಥಾಪನೆ-ವಿಸ್ತರಣೆಗೂ ತೈಲಪನಿಗೆ 'ಕೆಳೆಯ ತತ್ವಜ್ಞಾನಿ ಮಾರ್ಗದರ್ಶಿ' ಯಾಗಿದ್ದವನು ದಲ್ಲಪ. ಘಲ್ಲಪನು ತೈಲಪನ ಚಮೂಪನಾಗಿ ಯುದ್ಧಗಳಲ್ಲಿ ಜತೆಗೆ ನಿಂತು ಭುಜಕ್ಕೆ ಭುಜಕೊಟ್ಟು ಹೋರಾಡಿದನು. ತೈಲಪನಿಗೆ ನೆಚಿವಿನ ನೇಹಿಗನಾದನು. ಆ ಕಾರಣಗಳಿಗಾಗಿ, ಋಣಕ್ಕಾಗಿ ತೈಲಪನು ದಲ್ಲಪನಿಗೆ ಮಂಡಳಸಿದ್ಧಿ ವಿವೇಕ ಬೃಹಸ್ಪತಿ ಎಂಬ ರಾಜ ಪ್ರಶಸ್ತಿಗಳನ್ನಿತ್ತು ಸಂಮಾನಿಸಿದನು.

ದಲ್ಲಪನು ದೊರೆ ತೈಲಪನಿಗೆ ಆಡಳಿತ ನಿರ್ವಹಣೆಯಲ್ಲಿ ಸಭಾ ಸಂವಾಸವಾಗಿ ಸೂಕ್ತ ಸಕಾಲಿಕ ವಿವೇಕಯುಕ್ತ ಮಾರ್ಗದರ್ಶಕ ಆಗಿದ್ದನೆಂಬುದನ್ನು ಶಾಸನ ದಾಖಲಿಸಿದೆ. ದಲ್ಲಪನು

ತೈಲಪ ಚಕ್ರವರ್ತಿಯ ಅಖಿಳ್ ರಾಜ್ಯಭರ ನಿರೂಪಿತ ಮಹಾ ಮಂತ್ರಾಕ್ಷ ಪಟಳಕ್ಕೆ ಅಧಿಪತಿ ಎನಿಸಿದ್ದ ಎಂಬುದು ವಿಶೇಷ ಗಮನಿಕೆ ಅರ್ಹವಾಗಿದೆ. ಸಮಸ್ತ ರಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ನಿರೂಪಣೆ ಆಗುತ್ತಿದ್ದ ಪ್ರಮುಖ ರಾಜತೀರ್ಪು, ರಾಜಾಜ್ಞೆಗಳ ಮೂಲ ತಾಮ್ರ ದಾಖಕೆ ಪ್ರತಿಗಳ ರಾಜ ಪತ್ರಾಗಾರಕ್ಕೆ, ರಾಜಕೋಶಕ್ಕೆ ದಲ್ಲಪನು ಮುಖ್ಯನು. ರಾಜ್ಯಾಡಳಿತದಲ್ಲಿ ನ್ಯಾಯ ಸಂಬಂಧದ ದಾಖಲೆಗಳು ಇರುವ ಭಂಡಾರವೇ ಅಕ್ಷಪಟಲ. ಈ ಅಂಶವು, ತೈಲಪ ಚಕ್ರವರ್ತಿಯು ದಲ್ಲಪನಲ್ಲಿ ಇಟ್ಟಿದ್ದ ನಂಬಿಕೆಗೆ ಸಾಕ್ಷಿ ಪಟಲವೂ ಆಗಿದೆ. ದಲ್ಲಪನು ಎಷ್ಟು ಜನಪ್ರಿಯನಾಗಿದ್ದನೆಂದರೆ ಆತನ ಹೆಸರಿನ ನಾನಾ ರೂಪಗಳು ಪ್ರಚಲಿತವಾಗಿವೆ: ದಲ್ಲ, ಧಲ್ಲ, ದಲ್ಲಪ, ಧಲ್ಲಪ, ದಲ್ಲಪಯ್ಯ, ಧಲ್ಲಪಯ್ಯ.

ತೈಲಪ ಚಕ್ರಿಯು ದಲ್ಲಪನನ್ನು ಇಷ್ಟೊಂದು ಹತ್ತಿರವಾಗಿಟ್ಟು ಗೌರವಿಸಲು ಇದ್ದ ಇನ್ನೊಂದು ಪ್ರಬಲವಾದ ಕರಣ, ದಲ್ಲಪನು ತೋರಿದ ಯುದ್ಧ ನೈಪುಣ್ಯ, ಅಹವಶೌಂಡನಾದ ದಲ್ಲಪನ ಪರಾಕ್ರಮದ ಉಗ್ಗಡಣೆಗೆ ಲಕ್ಕುಂಡಿಯ ಶಾಸನ ಅಗ್ರಾಸನ ಕೊಟ್ಟಿದೆ:

ಮಲ್ಲಾಮಲ್ಲಿಯೊಳಾನ್ತರಿ
ಮಲ್ಲ್ರನಾಹವದೊಳೊತ್ತಿ ಗೋಳ್ಮುರಿಗೊಳ್ವೀ
ಬಲ್ಲಾಳ್ತನದಿನ್ದಾಹವ
ಮಲ್ಲಮನ ಭುಜಾದಣ್ಡಮೆನಿಸಿ ಧಲ್ಲಂ ನೆಗೆೞ್ದಂ ||

ಪೂಣರ್ದ್ದಿದಿರಾಗಿ ತಾಗಿದೊರನಾನೆಯೊಳೊಕ್ಕುವೆನೆಂದು ಬೆಚ್ಚಿಕೊಂ
ಕಣಮಟ್ಟ್ದಿಯಿಕ್ಕೆ ಬೆಂಗಿ ಬೆಱಗಾಗೆ ತಿವುಳ್ಳೆಲನಳ್ಕೆ ಮಾಳವ
ಮಣೆಯಂ ಪೊದಳ್ದುದಿರ್ಕ್ಕೆಲದ ಮುಂದ್ಣ ಪಿಂದಣ ಮಣ್ಡಲಕ್ಕೆ ಭೀ
ಷಣಮತಿರೌದ್ರಮದ್ಭುತಮಗುರ್ವ್ವಿನೆ ತೇಜದಳುರ್ಕ್ಕೆ ಧಲ್ಲನ ||

ಧಲ್ಲಂಗಂ ನೆಗೆಟ್ಟಾಹವ
ಮಲ್ಲಂಗಂ ಭೇದಮುಂಟೆ ವಿಭವದೊಳದನೇ
ನೆಲ್ಲರುಮರಿಯರೆ ಧರಣೀ
ವಲ್ಲಭ ಸಿಂಹಸನ್ಯೈಕ ಭೇದಮೆ ಭೇದಂ ||

ಮೇಲಿನ ಮೂರು ಪದ್ಯಗಳನ್ನು ತೈಲಪನನ್ನೂ, ಚಾಲುಕ್ಯ ಸಾಮ್ರಾಜ್ಯದ ಇತಿಹಾಸವನ್ನೂ ಕುರಿತು ಬರೆಯುವ ಚರಿತ್ರಕಾರರು ಅವಶ್ಯ ಗಮನಿಸಬೇಕು. ಗಂಗರ ಸೇನಾನಿ ಸಚಿವ ಚಾವುಂಡರಾಯನು ಕೈಗೊಂಡ ಹಲವು ಯುದ್ಧಗಲಲ್ಲಿ 'ಅಲ್ಲ' ಎಂಬುವನ ವಿರುದ್ಧ ಹೂಡಿದ ಯುದ್ಧವೂ ಒಂದು. ಈ 'ಅಲ್ಲ' ನನ್ನು ಜೆ.ಎಫ್. ಫ್ಲೀಟರು ಸರಿಯಾಗಿ ಗುರುತಿಸಲು ಆಗಿರಲಿಲ್ಲ. ರೈಸರು ಈ ಹೆಸರಿನ ರೂಪ ಕುರಿತು 'ದಲ್ಲ' ಎಂದಿದ್ದಾರೆ. ಹೀಗಾಗಿ ದಲ್ಲನು ತೈಲಪನ ಪರವಾಗಿ ರಾಷ್ಟ್ರಕೂಟರ ಮತ್ತು ಗಂಗರ ವಿರುದ್ಧ ಯುದ್ಧವೆಸಗಿದ್ದಕ್ಕೆ ಅನ್ಯಾನ್ಯ ಆಧಾರ ಉಂಟು [ಎ.ಇ. **V.p.** ೧೭೦. **Note** ೨; ಎ.ಕ. ೨(೧೯೭೩) ಪೀಠಿಕೆ, ಪು. ೩].

ಪಂಪಯ್ಯನ ಪ್ರವೇಶ

ಈ ರೀತಿ ನಾಡಿನಲ್ಲಿ ಗಣ್ಯನಾಗಿದ್ದ ದಲ್ಲಪನ ಮಗನಾದ ನಾಗದೇವನು ತನ್ನ ತಂದೆಯಂತೆಯೇ ಮಹಾಪರಕ್ರಮಿಯಾಗಿದ್ದನು. ತೈಲಪ ಚಕ್ರವರ್ತಿ ಈ ನಾಗದೇವನ ಸಾಹಸವನ್ನು ಮನಗಂಡು ಅವನನ್ನು ತನ್ನ ಸೈನ್ಯಕ್ಕೆ ಸೇನಾಧಿಪತಿಯನ್ನಾಗಿ ನೇಮಿಸಿ ದನು. ನಾಗದೇವನು ಅನೇಕ ಸಂಗ್ರಾಮಗಳಲ್ಲಿ ಭಾಗವಹಿಸಿ ಚಾಳುಕ್ಯ ಸಾಮ್ರಾಜ್ಯಕ್ಕೆ ಸುಭದ್ರವಾದ ಅಡಿಪಾಯ ಹಾಕಿದನು. ತೈಲಪನ ಆಡಳಿತ ನಿಷ್ಕಂಟವಾಗುವಂತೆ ಹಗೆಗಳೊಂದಿಗೆ ನಾಗದೇವನು ನಡೆಸಿದ ಚರಿತ್ರಾರ್ಹ

ಸಮರಗಳನ್ನು ಶಾಸನ ಕಂಡಿರಿಸಿದೆ. ಅಹವದಕ್ಷತೆಯಿಂದ ಸೆಣಸುತ್ತ ರಣ ಭೂಮಿಯಲ್ಲೇ, ತನ್ನ ಚಿಕ್ಕ ಮಾವ ಪುನ್ನಮಯ್ಯನಂತೆ ಹತನಾದ. ನಾಗದೇವ-ಅತ್ತಿಮಬ್ಬೆಯಗ ಮಗನಾದ ಅಣ್ಣಿಗ ದೇವನೂ ತನ್ನ ತೆಂದೆ ತಾತಂದಿರಂತೆಯೇ ಅಹವರಂಗವನ್ನೆರಿದ. ಅಹವ ದುರ್ಜಯನೆನಿಸಿ ಸಾಹಸವನ್ನೂ ದಕ್ಷತೆಯನ್ನೂ ರಾಷ್ಟ್ರಪ್ರೇಮವನ್ನೂ ಪ್ರಕಟಿಸಿದ. ಈ ಅಣ್ಣಿಗದೇವನನ್ನು ಮೆಚ್ಚಿದ ತೈಲಪನೂ, ತೈಲಪನ ಮಗನಾದ ಇರಿವ ಬೆಡಂಗ ಸತ್ಯಾಶ್ರಯನೂ ಅನೇಕ ಪ್ರಶಸ್ತಿಗಳ್ ಮಾಲೆ ತೊಡಿಸಿದರು; ಚಕ್ರವರ್ತಿ ಸನ್ಮಾನ ಮಾಡಿ ಗೌರವಿಸಿದರು. ಚಾಳುಕ್ಯ ಚಕ್ರವರ್ತಿಯು ಸೈನ್ಯಾಧೀಶನಾದ ಅಣ್ಣಿಗ ದೇವನಿಗೆ ಪಡೆವಳ ತೈಲಪ, ಆಳ್ದನ ಚಕ್ರಂ, ನನ್ನಿ ನಾರಾಯಣ, ಕರ್ಪೂರ ವರ್ಷ, ಗುಣಮೇರು, ಆಯುಧಾಚಾರ್ಯ, ಪತಿಮೆಚ್ಚೆ ಗಂಡ, ಚತುರ ಚತುರಾನನ-ಎಂಬ ರಾಜಬಿರುದು ಗಳನ್ನು ಇತ್ತುದಕ್ಕೆ ಶಾಸನಾಧರವಿದೆ.

ಅಣ್ಣಿಗದೇವನನ್ನು ಲಕ್ಕುಂಡಿಯ ಶಾಸನದಲ್ಲಿ ಶ್ರೀಮತ್ ಪಡೆವಳ-ತೈಲಪಯ್ಯ ಎಂದು ಪರಿಚಯಿಸಲಾಗಿದೆ. ಈತನನ್ನು ಮಾಸಮಾಡಿ ನೂಱನಾಲ್ವತ್ತು ಪ್ರದೇಶಕ್ಕೆ ಬೀಳವೃತ್ತಿಯಿಂದ ಆಳುವಂತೆ ನೇಮಿಸಲಾಯಿತು. ಬೀಳವೃತ್ತಿ ಮತ್ತು ಅಣುಗವೃತ್ತಿಯನ್ನು ರಾಜರು ತಮ್ಮ ಮಕ್ಕಳಿಗೆ, ಯುವರಾಜರಿಗೆ ಮಾತ್ರ ಕೊಡುವ ಅಧಿಕಾರ ಗೌರವ. ಅಪರೂಪಕ್ಕೊಮ್ಮೆ ರಾಜರು ತಮ್ಮ ಆಪ್ತರೂ ಬಹುಸಮರ್ಥರೂ ಆದಂಥ ನಿಷ್ಠಾವಂತ ಮೇಧಾವಿಗಳಿಗೆ ಈ ವೃತ್ತಿ ಪ್ರತಿಪತ್ತಿಯನ್ನಿತ್ತು ತಮ್ಮ ವಿಶ್ವಾಸವನ್ನು ಸಾರ್ವಜನಿಕವಾಗಿ ಪ್ರಕಟಿಸುತ್ತಿದ್ದರು. ಅಣ್ಣಿಗದೇವನಿಗೆ ಈ ನಂಬಿಕೆಯ ವಿಶಿಷ್ಟ ಗೌರವ ಸಂದಿತ್ತು ಎಂಬುದು ಗಮನಾರ್ಹ. ಹೀಗೆ ಅಣ್ಣಿಗದೇವನ ಮೇಲೆ ಚಕ್ರವರ್ತಿಯ ವಾತ್ಸಲ್ಯವು ವರ್ಷಿತವಾಗಲು ಮುಖ್ಯ ಕಾರಣ, ಈ ಮನೆತನದಲ್ಲಿ ಹೆಪ್ಪುಗಟ್ಟಿದ ದೇಶಪ್ರೇಮ ಮತ್ತು ರಾಜನಿಷ್ಠೆ, ಅಣ್ಣಿಗದೇವನ ತಾಯಿಯ ಮತ್ತು ತಂದೆಯ ಎರಡೂ ಮನೆತನಗಳಲ್ಲಿ ಪ್ರಭುಭಕ್ತಿ ಕೆನೆಕಟ್ಟಿತ್ತು. ಮಲ್ಲಪಯ್ಯನ ಕುಟುಂಬದಲ್ಲಿ ಈ ರಾಜಭಕ್ತಿಯ ಪರಾಕಾಷ್ಠಾ ಸ್ಥಿತಿಯಾಗಿ, ಆತ ತನ್ನ ಒಬ್ಬ ಮಗನಿಗೆ ತೈಲಪನ ಬಿರುದುಗಳಲ್ಲಿ ಒಂದಾದ 'ಅಹವಮಲ್ಲ' ಎಂಬುದನ್ನೇ ಹೆಸರಾಗಿಟ್ಟು, ನಾಮಕರಣ ಮಾಡಿ ಆ ಪರಂಪರೆಯನ್ನು ಉದ್ಘಾಟಿಸಿದನು. ಅತನ ಒಡಹುಟ್ಟಿದ ತಮ್ಮನಾದ

ಪನ್ನಮಯ್ಯನು ಅರಾತಿ ಸೇನೆಯಿಂದ ರಣಭೂಮಿಯಲ್ಲೇ ಹತನಾದ ದುರ್ಘಟನೆ ನಡೆದಿದ್ದರೂ, ತಾನೂ ಮಗಂದಿರೂ ಅಳಿಯನೂ ಮೊಮ್ಮಗನೂ ಅಹವಾಂಗಣದಲ್ಲಿಯೇ ಆಯುಸ್ಸು ಸಮೆಸಿದರು; ರಾಷ್ಟ್ರರಕ್ಷಣೆಗೇ ಅರ್ಪಿತ ಬುದ್ಧಿಯುಳ್ಳವರಾದರು.

ಅಣ್ಣಿಗದೇವನನ್ನು, ಆತನ ತಂದೆಯ ನಿಧನಾನಂತ್ರ, ಮಾಸಮಾಡಿ ೧೪೦ ಕಂಪಣ ವಿಭಾಗಕ್ಕೆ ಬೀಳವೃತ್ತಿಯಿಂದ ಆಳುವಂತೆ ನೇಮಿಸಲಾಯಿತೆಂಬುದು ಸರಿಯೆ. ಆದರೆ ಬಹು ವಿಸ್ತಾರವಾದ ಚಳುಕ್ಯ ಸಾಮ್ರಾಜ್ಯದಲ್ಲಿ, ಬೇರೆ ಎಲ್ಲಾ ಭಾಗಗಳನ್ನು ಬಿಟ್ಟು, ಮಾಸಮಾಡಿ ಪ್ರದೇಶಕ್ಕೆ ನೇಮಿಸಿದ್ದು ಏಕೆ? ಅಣ್ಣಿಗನ ತಾತ ಮುತ್ತಾತಂದಿರು ಆಳಿ ಬಾಳಿ ಉಚ್ಛ್ರಾಯಕ್ಕೇರಿದ ವೆಂಗಿ ವಿಷಯವೊ ಕಮ್ಮೆನಾಡೊ ಪುಂಗನೂರೊ ಆಗ ಬಹುದಿತ್ತಲ್ಲವೆ? ನೆಲೆವೀಡು ಮಳಖೇಡದ ನೆರೆಹೊರೆಯಲ್ಲೆ ಒಂದು ಪ್ರದೇಶವನ್ನು ಕೊಡಬಹುದಿತ್ತು ಅಲ್ಲವೆ? ಇಂತಹ ಕೆಲವು ಸಂಶಯಗಳು ಪ್ರಶ್ನೆಗಳಾಗಿ ಎದುರು ನಿಲ್ಲುತ್ತವೆ. ಈ ಸವಾಲುಗಳಿಗೆ ಚರಿತ್ರೆಯ ಒಡಲಿನಲ್ಲಿಯೇ ನಿಂತು ಉತ್ತರಗಳನ್ನು ಕಂಡುಕೊಳ್ಳಬೇಕಾಗಿದೆ.

ಅಣ್ಣಿಗದೇವನಿಗೆ ತಾಯಿಯ ಕಡೆಯಿಂದ ಇದ್ದ ಅಜ್ಜಪಜ್ಜರೆಲ್ಲಾ ವೆಂಗಿ ಮಂಡಲದ ಕಡೆಯವರೆಂಬುದು ನನ್ನಿ. ಆದರೆ ಅವನಿಗೆ ತಂದೆಯ ಕಡೆಯಿಂದ ಇದ್ದ ತಾತಂದಿರು ಯಾವ ಕಡೆಯ ಸ್ಥಳಮೂಲದವರು ಎಂಬುದು ಚಿಂತನೀಯವಾಗಿದೆ. ಈ ದಿಕ್ಕಿನ ಜಿಜ್ಞಾಸೆಗೆ ತೊಡಗಿದಾಗ ಕೆಲವು ಬೆಳಕಿನ ಕಿರಣಗಳು ಬೀಳುತ್ತವೆ. ಅಣ್ಣಿಗೆ ದೇವನ ತಂದೆಯಾದ ನಾಗದೇವನನ್ನು ಲಕ್ಕುಂಡಿಯ ಶಾಸನವು 'ವಾಜಿಕುಳತಿಳಕ' ನೆಂದಿದೆ. ಹಾಗೆಯೇ ಇನ್ನೊಂದೆಡೆಯಲ್ಲಿ ಆತನನ್ನು 'ಮಹೀದೇವಕುಳ ಗಗನ ಗಭಸ್ತಿಮಾಳಿ' ಎಂದು ವಿಶೇಷಣಿಸಿದೆ. ಮಹಿದೇವ ಎಂದರೆ ಭೂಸರ (ಬ್ರಾಹ್ಮಣ)ರು ಎಂದರ್ಥ. ಅವರು ಜೈನ ಬ್ರಾಹ್ಮಣರಾಗಿದ್ದರು: ವಾಜಿಕುಳವು ಜೈನ ಬ್ರಾಹ್ಮಣ ಕುಲವಾಗಿತ್ತು.

ದಲ್ಲಪಯ್ಯನ ಬೀಗರಾದ ಮಲ್ಲಪ್ಪಯನ ಮನೆತನವೂ ಇದೇ ರೀತಿ ಜೈನ ಬ್ರಾಹ್ಮಣ ವಂಶವಾಗಿತ್ತು. ಮಲ್ಲಪಯ್ಯ-ಪುನ್ನಮಯ್ಯ ಒಡಹುಟ್ಟುಗರು. ಇವರ ತಂದೆಯಾದ ನಾಗಮಯ್ಯನನ್ನು ಪೊನ್ನಕವಿ ತನ್ನ ಶಾಂತಿಪುರಾಣಂ ಕಾವ್ಯದಲ್ಲಿ ಹೀಗೆ ಪರಿಚಯಿಸಿದ್ದಾನೆ:

ಅತಿವಿಖ್ಯಾತಿಯ ಕಮ್ಮೆನಾಡನುದಾತ್ತಂ ಕಾವನೀವಂ ದ್ವಿಜೋ
ನ್ನತ ವಿದ್ಯಾನಿಧಿಗಳ್ಗನೂನನುಪಮಾತೀತ ಧೈರಂ ಬಹು
ಶ್ರುತನಾಜ್ಞಾನಿಧಿ ಯಜ್ಞವಲ್ಕ್ಯ ಸದೃಶಂ ಕೌಂಡಿನ್ಯಗೋತ್ರಂ ನಿರಾ
ಕೃತದೋಷಸ್ಥಿತಿ ನಾಗಮಯ್ಯನನಘಂ ಶ್ರೀ ಭೂಮಿದೇವೋತ್ತಮಂ || (೧-೪೪)

ಪೊನ್ನನ ತರುವಾಯ ಈ ದೊಡ್ಡ ಕುಟುಂಬವನ್ನು ಪರಿಚಯಿಸುವ ಪರಂಪರೆಯನ್ನು ಮುಂದುವರಿಸಿದವನು ರನ್ನಕವಿ. ರನ್ನನು ಅಜಿತ ಪುರಾಣ ಕಾವ್ಯದಲ್ಲಿ ಮಲ್ಲಪನನ್ನು ಕೌಂಡಿನ್ಯ ಕುಲ ಪ್ರದೀಪನೆಂದೂ (೧-೨೪), ಕೌಂಡಿನ್ಯ ಗೋತ್ರ ಮಂಡನ ಎಂದೂ (೧-೩೫) ತಿಳಿಸಿದ್ದಾನೆ. ಪೊನ್ನಕವಿ ಮುಂದುವರಿದು ಮಲ್ಲಪ-ಪುನ್ನಮರನ್ನು 'ಭೂಮಿ ದೇವತನಯರ್ (೧-೪೬) ಎಂದಿದ್ದಾನೆ. ಮಲ್ಲಪನನ್ನು ಬಭ್ರುವರಾಹ ಮಿಹಿರ ಶೌನಕ ಸುನಂದ ಗಾರ್ಗ್ಯ- ಇವರಿಗೆ ಸಮಾನನೆಂದಿದ್ದಾನೆ (೧-೪೭); ಅಲ್ಲದೆ

ಈ ನೆಲದೊಳ್ ಮಲ್ಲಪನ ಸ
ಮಾನರ್ ನರರೀಗಳಿಲ್ಲ ಮುನ್ನುಳ್ಳೊಡೆ ಕಾ
ನೀನಂ ದಧೀಚಿ ಶಿಬಿ ವೃಷ
ಸೇನಂ ಯಮತನಯನಕ್ಕುಮಲ್ಲದೊನಲ್ಲಂ || (೧-೪೯)

ಎಂದು ಪರಿಚಯಿಸಿದ್ದಾನೆ. ಬಭ್ರು ವರಾಹಮಿಹಿರ ಶೌನಕ ಸುನಂದ ಗರ್ಗ್ಯರು ಯಾರೂ ಜೈನರಲ್ಲ; ಕರ್ಣ ದಧೀಚಿ ಶಿಬಿ ವೃಷಸೇನ ಧರ್ಮಜ– ಇವರೂ ಅಜೈನರು, ಪೌರಾಣಿಕರು. ಈ ಹೋಲಿಕೆಯಲ್ಲಿ ಮತ್ತು ೧–ಳಳ ರಲ್ಲಿರುವ ಯಾಜ್ಞವಲ್ಕ್ಯರೊಂದಿಗೆ ಸಾದೃಶ್ಯ ಕಲ್ಪಿಸಿರುವುದರಲ್ಲಿ ಬ್ರಾಹ್ಮಣಪರವಾದ ವೈದಿಕ ವಿವರಣೆಯಿದೆ. ಇದರಿಂದ ಇವರು ನಾಗಮಯ್ಯನಿಗಿಂತ ಒಂದೆರಡು ತಲೆಮಾರು ಹಿಂದೆಯಷ್ಟೇ ಬ್ರಾಹ್ಮಣತ್ವದಿಂದ ಜೈನತ್ವಕ್ಕೆ ಸರಿದಂತೆ, ಮತಾಂತ್ರ ಮಾಡಿದಂತೆ ಕಾಣುತ್ತದೆ. ಈ ಚರ್ಚೆಯನ್ನು ಮತ್ತೆ ಕೈಗೆತ್ತಿಕೊಳ್ಳಬಹುದು.

ಈ ಹಿನ್ನೆಲೆಯಲ್ಲಿ ಚರ್ಚಿಸಬೇಕಾದ ಮುಖ್ಯ ವಿಷಯವೆಂದರೆ, ದಲ್ಲಪಯ್ಯನ ಮನೆತನದ ಮೂಲ ಸ್ಥಳ ಯಾವುದೆಂಬುದು. ಈ ಪ್ರಶ್ನೆಯ ಗಂಟನ್ನು ಬಿಡಿಸಲು ಬೇಕಾದ ಸುಳಿವು ರೋಣದ ಒಂದು ಶಾಸನದಲ್ಲಿ ಸಿಗುತ್ತದೆ. ರಾಷ್ಟ್ರಕೂಟ ಚಕ್ರವರ್ತಿ ಕನ್ನರ ದೇವನ (ಕೃಷ್ಣ೩) ಭಾವನೂ, ಮಹಾಮಂಡಲಿಕನೂ ಆದ ಇಮ್ಮಡಿ ಬೂತಗ ಪೆರ್ಮಾಡಿಯು ಗಂಗವಾಡಿ ೯೬,೦೦೦ ಬೆಳ್ವೊಲ–೩೦೦ ಮತ್ತು ಪುಲಿಗೆರೆ ೩೦೦ ಪ್ರದೇಶವನ್ನು ಆಳುತ್ತಿದ್ದನು. ಆಗ ಭತಾಯ (ಕಪ್ಪ)ವನ್ನು ಕೊಡಲೊಲ್ಲದ ಪಂಪಯ್ಯ ಎಂಬಾತನನ್ನು ರೋಣದಲ್ಲಿ ಎದುರಿಸಿ ಭೂತಯ್ಯನು ಕೊಂದನು. ಮಹಾಮಾಣ್ಡಲಿಕ ಬೂತಾರ್ಯ (ಬೂತಯ–ಬೂತಗ) ನಿಗೆ ತಾನೊಂದು ಅಕ್ಷತೆಯನಪ್ಪಂದಮೀಯೆನೆನ್ದು ತಱಿಸನ್ದ ಮಾನ್ಯ ಪಂಪಯ್ಯನು ವಾಜಿಕುಳಕ್ಕೆ ಮತ್ತು ಕೌಂಡಿಲ್ಯ ಗೋತ್ರಕ್ಕೆ ಸೇರಿದವನೆಂಬುದು ಮುಖ್ಯವಾಗಿ ಪರಿಶೀಲಿಸಬೇಕಾದ್ದು.

ತಱಿಸಂದೆಮ್ಮೊಡೆ ರೋಣಮಂ ಕಿಡಿಸಿ ತಾ ಬೂತಾರ್ಯ ಪೆರ್ಮ್ಮಾಡಿ (ನಿ)  
ರ್ವ್ವಱಿಸುತ್ತಿಱ್ದೊಡೆ ತನ್ನನನ್ದಿಱಿದು ಮೇ  
ಣ್ನೆಱಿ ಕಾದು(ತ್ರಸಿ) ವೆತ್ತು ಸತ್ವನಧಿಕಂ ಪಂಪಯ್ಯನುದ್ದಾಮ ಸದ್  
ಗುಱುಕಂ ವಾಜಿಕುಳೋದಯಂ ಬುಧನುತಂ ಕೊಣ್ಡಿಲ್ಲ್ಯ ಗೋತ್ರೋನ್ನತಮ್ ||

ಧರೆಯೆಲ್ಲಂ ಪೊಗೞ್ವಿ

ನ್ನಿರೆ ಪುರಿಗೆಱೆಯೊಳಗುರ್ತ ರೋಣಮಂ ಕಾದ

ಮರೇಶ್ವರ ಪುರಮನೆಯ್ದ್ದಿ ಪೆ

ಸರಿಂ ಕೀರ್ತ್ತಿಶ್ರೀಪತಾಕನಭಿನುತಂ ಪಂಪಯ್ಯಂ ||

[ಸೌ.ಇ.ಇ. ೧೧-೧] ೩೬ ಕ್ರಿ.ಶ. ೯೪೨, ರೋಣ (ಧಾರವಾಡ ಜಿಲ್ಲೆ) ಪುಟ. ೨೨]

ರೋಣದ ಶಾಸನದಲ್ಲಿ ಪ್ರಸ್ತಾಪಿತನಾಗಿರುವ ಸಾಹಸಿ, ಪ್ರತಿಭಟನಕಾರ ಮತ್ತು ಬೂತುಗನೊಂದಿಗೆ ಸೆಣಸಿ ಸತ್ತ ಪಂಪಯ್ಯನು ವಾಜಿಕುಳೋದಯನೂ, ಕೌಂಡಿನ್ಯ ಗೋತ್ರದ ಉನ್ನತನೂ ಆಗಿದ್ದನೆಂಬುದು ಪ್ರಸ್ತುತ ಚರ್ಚೆಗೆ ಜೀವ ತುಂಬಿದೆ. ಈ ಶಾಸನದ ಕಾಲ ಕ್ರಿ.ಶ. ೯೪೨. ಪಂಪಯ್ಯನು ದಲ್ಲಪಯ್ಯನ ತಂದೆಯೂ, ಹಿರಿಯ ಸೋದರನೊ ಆಗಿರುವ ಸಾಧ್ಯತೆಯನ್ನು ಸುಲಭವಾಗಿ ತಳ್ಳಿಹಾಕಲು ಬರುವುದಿಲ್ಲ: ಪ್ರಾಯಃ ತಂದೆಯೇ ಆಗಿರುವ ಸಂಭವವಿದೆ. ತನ್ನ ತಂದೆ ಅಥವಾ ಸೋದರ ಪಂಪಯ್ಯನಂತೆ, ಯುದ್ಧ ನಿಪುಣನೂ ಸಾಹಸಿಯೂ ಆಗಿದ್ದ ದಲ್ಲಪನನ್ನು ತೈಲಪನು ತನ್ನವನನ್ನಾಗಿಸಿಕೊಂಡನು. ರಾಷ್ಟ್ರಕೂಟರ ಕನ್ನರದೇವನ ಮಹಾಸಾಮಂತನಾಗಿ ಕ್ರಿ.ಶ. ೯೬೫ ರಲ್ಲಿ ತರ್ದವಾಡಿಯನ್ನು ಆಳುತ್ತಿದ್ದಾಗ ತೈಲಪನು, ಈ ದಲ್ಲಪನನ್ನು ಗುರುತಿಸಿ ತನ್ನೊಂದಿಗೆ ಸೇರಿಸಿಕೊಂಡಿರುವುದು ಸಾಧ್ಯವಿದೆ. ಅಲ್ಲಿಂದ ಮುಂದೆ ತೈಲಪನು ಚಕ್ರವರ್ತಿಯಾದಾಗ ದಲ್ಲಪನು, ತನ್ನ ಬಂಧು ಪಂಪಯ್ಯನನ್ನು ಹಿಂದೆ ಕೊಂದಿದ್ದ ಗಂಗ ದೊರೆಗಳ ಮೇಲೆ ಸೇಡಿದಾಗಿ ಹಾತೊರೆದು ನುಗ್ಗಿ ಬಂದಾಗ, ಚಾವುಂಡರಾಯನೊಂದಿಗೆ ಕದನ ಮಾಡಿದನು. ಚಾವುಂಡರಾಯನಿಗೂ ಪ್ರತೀಕಾರವಿತ್ತು: ತನ್ನ ದೊರೆ ಬೂತುಗನ ಮೇಲೆ ಕತ್ತಿ ಹಿರಿದ ಪಂಪಯ್ಯನ ರಕ್ತ ಸಂಬಂಧಿಯ ಮೇಲೆ ಹಗೆ. ಈ ಕಾರ್ಯ ಕಾರಣ ಸಂಬಂಧದ ಸರಪಳಿಯನ್ನು ಹಿಡಿದಾಗ (ಅಲ್ಲ) ದಲ್ಲ ಮತ್ತು ಚಾವುಂಡರಾಯರು ಯುದ್ಧದಲ್ಲಿ ಯಾಕೆ ಮುಖಾಮುಖಿಯಾಗಿ ನಿಂತರು ಎಂಬುದು ನಿಚ್ಚಳವಾಗುತ್ತದೆ. ಒಬ್ಬ ಪಂಪಯ್ಯನು, ಗೊಟ್ಟಿಗೆಗಳಿ ಭಾಗವನ್ನು ರಾಷ್ಟ್ರಕೂಟ ಚಕ್ರವರ್ತಿ ಯಾದ

ಮುಮ್ಮಡಿ ಕೃಷ್ಣನು (೯೩೯-೬೭) ಆಳುತ್ತಿರುವಾಗ, ನೋಡಿಕೊಳ್ಳುತ್ತಿದ್ದನೆಂದು ಒಂದು ಶಾಸನದಿಂದ ತಿಳಿದುಬರುತ್ತದೆ: ಕಾಲ, ಸು. ೯೪೦

೧. ಸ್ವಸ್ತಿ ಕನ್ನರದೇವ ರಾಜ್ಯ ಡ [೦]

೨. ಗೆಯ್ಯೆಯಾ ಬನವಸಿ

೩. ದೇಸಮ [ನಾಲ್ವತ್ತಿ] ರೆಗ

೪. [ವ್ವಿ] ನ್ದರ (ನಾ)ಳೆ ಗೊಟ್ಟೆಗ

೫. ಳಿಯ ಪಂಪಯ್ಯ (ನಾ) ಳೆ

೬. [ನಾ] ಗವರ್ಮ್ಮ೦ [೦] ನಾಲ್ಗಾವೊಣ್ಡು

೭. ಗೆಯ್ಯೆಬ (ಸದಿ) ಗೆ ಪದಿನ

೮. ಯ್ದು ಮತ್ತಕೆಯೂಮೆರ (ಡು)

೯. ಗಾಣಮು (೦) ನಡೆದು ಮಾ

೧೦. [ದೆ] ಯ್ಯಿಂಬೆಯ ಮಗಳ ಮ

೧೧. ಗ ಕಣ್ಡಮ್ಮನವರ ಪೆಸರನೆ

೧೨. ೞ ಸಲ್ವರಸಿ ನಿಱಿಸಿದ

೧೩. ಧರ್ಮ್ಮ ಈದನಟ್ಟಿರವರ

[ಸೌ.ಇ.ಇ. ೧೮, ೩೨. ಅತೇದಿ. ನಿಟಪಳ್ಳಿ (ಧಾರವಾಡ ಜಿಲ್ಲೆ, ರಾಣಿಬೆನ್ನೂರು ತಾಲ್ಲೂಕು) ಪು. ೨೦. ಈ ಶಾಸನದ ಏಳನೆಯ ಪಾದದಲ್ಲಿರುವ ಬಳರಿಗೆ, ಎಂಬುದು 'ಭಟಾರಿ' ಎಂಬ (ದೇವತೆಯ) ಹೆಸರಿನ ತಪ್ಪು ಪ್ರಯೋಗ ವಿರಬಹುದೆಂದು ಸಂಪುಟದ ಸಂಪದಕರು ಊಹಿಸಿದ್ದಾರೆ. ನಾನು ಅದು 'ಬಸದಿಗೆ' ಎಂದಿರಬಹುದೆಂದು ಊಹಿಸಿದ್ದೇನೆ] ಈ ಪಂಪಯ್ಯನಿಗೆ ಸಂಬಂಧಿಸಿದ ಇನ್ನೂ ಒಂದು ಶಾಸನ ದೊರೆತಿದೆಯೆಂದು ತಿಳಿದು ಬಂದಿದೆ.

ದಲ್ಲಪ ಮತ್ತು ಪಂಪಯ್ಯ, ಒಂದೇ ವಂಶದ ಕುಡಿಗಳೆಂಬ ಈ ಸಮೀಕರಣವನ್ನು ದೃಢಪಡಿಸುವ ಸಾಧಕಾಂಶಗಳನ್ನು, ಅಂತರ ಬಾಹ್ಯ ಪ್ರಮಾಣಗಳನ್ನು ಸಂಚಯಿಸಿ ಹೀಗೆ ಹರಳುಗೊಳಿಸಿ ಹೇಳಬಹುದು:

೧. ಇಬ್ಬರೂ ವಾಜಿಕುಳಕ್ಕೆ ಸೇರಿದ ಐತಿಹಾಸಿಕ ವ್ಯಕ್ತಿಗಳು

೨. ಇಬ್ಬರೂ ಕೌಂಡಿನ್ಯ ಗೋತ್ರ ಮಂಡನರು

೩. ಇಬ್ಬರ ನಡುವೆ ಇರುವ ಕಾಲದ ಅಂತರವೂ ಕಾಲೈಕ್ಯಕ್ಕೆ ಅನುಗುಣವಾಗಿದೆ.

೪. ಸ್ಥಳೈಕ್ಯವೂ ಸಮರ್ಪಕವಾಗಿದೆ.

೫. ದಲ್ಲಪಯ್ಯ–ಪಂಪಯ್ಯ ಎಂಬ ನಾಮ ಸಾದೃಶ್ಯವೂ ಕಂಡು ಬರುತ್ತದೆ.

೬. ದಲ್ಲಪ–ಚಾವುಂಡರಾಯನ ನಡುವೆ ನಡೆದ ಪ್ರತೀಕಾರ ಯುದ್ಧ ಸಕಾರಣವಾಗಿ ಸ್ಥಾಪಿತವಾಗುತ್ತದೆ.

ಮೇಲಿನ ಆರು ಕಾರಣಗಳ ಜತೆಗೆ ಏಳನೆಯ ಅಂಶ ಇನ್ನೊಂದು ಇದೆ.

ಅತ್ತಿಮಬ್ಬೆಯ ಮಗನಾದ ಅಣ್ಣಿಗದೇವನನ್ನು ಮಾಸಮಾಡಿ ೧೪೦ ರ ಪ್ರದೇಶವನ್ನೇ ಆಳಲು ಚಾಳುಕ್ಯ ಚಕ್ರವರ್ತಿಗಳು ಏಕೆ ನಿಯೋಜಿಸಿದರು ಎಂಬುದಕ್ಕೆ ಸಮರ್ಪಕವಾದ ಉತ್ತರ ಇಲ್ಲಿದೆ. ಅಣ್ಣಿಗದೇವನ ಪೂರ್ವಜರು, ತಂದೆಯ ಕಡೆಯ ಹಿರಿಯರು ಈ ಫಿರ್ಕಾದವರು. ಪ್ರಾಯಃ ಲಕ್ಕುಂಡಿಯೇ ಅವರ ಮೂಲಸ್ಥಳ. ಆದ್ದರಿಂದ ಅಣ್ಣಿಗ ದೇವನ ಅಧಿಕಾರ ಉತ್ತರೋತ್ತರ ಪ್ರದೇಶದತ್ತ ದಾಂಗುಡಿ ಯಿಡದೆ, ದಕ್ಷಣೋತ್ತರಕ್ಕೆ ಇಳಿದುಬಂದದ್ದು ಅವರು ಇಲ್ಲಿನ ಮೂಲನಿವಾಸಿಗರೆಂಬ ಕಾರಣಕ್ಕಾಗಿ. ಹೀಗಾಗಿ ಮೇಲೆ ಪ್ರತಿಪಾದಿಸಿದ ಏಳು ಬಾಧಕವಾಗಿರುವ ಒಂದು ಕಾರಣವನ್ನೂ ಮುಂದಿಡಬೇಕು: ದಲ್ಲಪನನ್ನು ಪರಿಚಯಿಸುವಾಗ ಪಂಪಯ್ಯನ ಹೆಸರು ಬಂದಿಲ್ಲ ಎಂಬುದು. ಆದರೆ ಇದು ತಳ್ಳಿಹಾಕಬಹುದಾದ ತೆಳ್ಳನೆಯ ಎಳೆಯಾಗಿದೆ.

## ಕಾಳಿಮಯ್ಯ ದಂಡನಾಯಕ

ತೈಲಪನು ಚಕ್ರವರ್ತಿಯಾಗಿ ಘೋಷಿಸಿಕೊಂಡು ಚಾಳುಕ್ಯ ಸಾಮ್ರಾಜ್ಯವನ್ನು ಮತ್ತೆ ಪುನರುಜ್ಜೀವಿಸಿದನು. ತೈಲಪನು ತನ್ನ ರಾಜಧಾನಿಯಾಗಿ ಆರಿಸಿಕೊಂಡಿದ್ದು, ತಾನು ಸೋಲಿಸಿದ ರಾಷ್ಟ್ರಕೂಟರ ನೆಲೆವೀಡಾಗಿದ್ದ ಮಾನ್ಯಖೇಟವನ್ನೇ. ಪರಮಾರರ ಸೀಯಕ ಹರ್ಷನು ದಾಳಿಯಿಟ್ಟು ಸುಟ್ಟು ಲೂಪಿ ಮಾಡಿಹೋಗಿದ್ದ ಮಾನ್ಯಖೇಟಕ್ಕೆ ಮತ್ತೆ ಮರುಗುಟ್ಟನ್ನು ಕೊಟ್ಟವನು ತೈಲಪ. ತನ್ನ ಎಡಗೈ ಆಗಿ, ಅಂತರಂಗಕ್ಕೆ ಹತ್ತಿರವಾದ ಉನ್ನತ ಅಧಿಕಾರಿಗಳನ್ನಾಗಿ ತೈಲಪನು ಆರಿಸಿಕೊಂಡಿದ್ದು ದಲ್ಲಪ ಮತ್ತು ಮಲ್ಲಪರನ್ನು. ಇತ್ತ ಲಕ್ಕುಂಡಿಯ ಕಡೆಯಿಂದ ದಲ್ಲಪನೂ, ಅತ್ತ ಪುಂಗನೂರಿನಿಂದ ಮಲ್ಲಪನೂ ಬಂದು ತೈಲಪನ ರಾಜಧಾನಿ ಮಳಖೇಡದಲ್ಲಿ ನೆಲೆಸಿದರು. ತೈಲಪ ಚಕ್ರವರ್ತಿ ಸೂಚನೆ–ಸಾಕ್ಷಿಯಾಗಿ ದಲ್ಲಪ–ಮಲ್ಲಪರು ಬೀಗರಾದರು. ಅತ್ತಿಮಬ್ಬೆ–ನಾಗದೇವ ದಂಪತಿಗಳಾದರು. ವಾಜಿಕುಳವು ಕೌಂಡಿನ್ಯ ಗೊತ್ರವೂ ಬೆಸೆದುಕೊಂಡವು.

ಕ್ರಿ.ಶ. ೯–೧೦ ನೆಯ ಶತಮಾನ ಜೈನ ಸಮಾಜಕ್ಕೆ ಶುಕ್ರದೆಸೆಯ ಹೊಂಗಾಲ. ರಾಷ್ಟ್ರಕೂಟ ಚಕ್ರವರ್ತಿಗಳೂ, ಗಂಗಕುಲದ ರಾಜರೂ ಜೈನಧರ್ಮದ ಪಾಲಕರು. ಜಿನಸೇನರು, ಗುಣಭದ್ರರು, ಜಿನಚಂದ್ರರು, ಅಜಿತಸೇನರು–ಮೊದಲಾದ ಮಹಾನ್ ಜೈನ ಆಚಾರ್ಯರು ರಾಷ್ಟ್ರವ್ಯಾಪಿ ಪ್ರಭಾವಿಗಳಾಗಿದ್ದರು. ಚಕ್ರವರ್ತಿಗಳೂ ರಾಜ ಗುರುಗಳೂ ಮಹಾ ಸಾಮಂತ, ಮಹಾಮಂಡಲೇಶ್ವರ, ಮಹಾ ದಂಡನಾಯಕರೂ ಪ್ರಜೆಗಳೂ ಜಿನಧರ್ಮ ವತ್ಸಲರಾಗಿದ್ದರು. ರಾಷ್ಟ್ರಕೂಟ ಸಾಮ್ರಾಜ್ಯದ ಮತ್ತು ದಕ್ಷಿಣ ಭಾರತದ ಮೂರನೆಯ ಒಂದಂಶದಷ್ಟು ಪ್ರಜಾಕೋಟಿ ಜೈನಧರ್ಮೀಯರಿಂದ ಕೂಡಿತ್ತು. ಗಾಢವಾದ ವರ್ಚಸ್ಸಿನ ಜೈನ ಪರಿಸರದಲ್ಲಿ ನೂರಾರು ಪ್ರತಿಷ್ಠಿತ ಬ್ರಾಹ್ಮಣ ಮನೆತನಗಳು ಜೈನ ಧರ್ಮಕ್ಕೆ ಮತಾಂತರಗೊಂಡರು. ಪಂಪನ ತಂದೆ ಭೀಮಪಯ್ಯ,

ಪಂಪನ ತಾಯಿಯ ತಂದೆ (ತಾತ) ಜೋಯಿಸಿಂಘ, ಅತ್ತಿಮಬ್ಬೆಯ ತಾತನಾದ ನಾಗಮಯ್ಯನ ಹಿರಿಯರು, ಅತ್ತಿಮಬ್ಬೆಯ ಮಾವ ದಲ್ಲಪಯ್ಯನ ಮನೆತನ, ಪ್ರಾಕೃತಕವಿ ಪುಷ್ಪದಂತನ ಹಿರಿಯರು– ಹೀಗೆ ಹಲವು ಪ್ರತಿಭೆಗಳು ಸಮವಸರಣ ಸೇರಿದುವು, ದಿವ್ಯಧ್ವನಿಗೆ ಓಗೊಟ್ಟುವು.

ವಾಜಿಕುಳ ಹತ್ತನೆಯ ಶತಮಾನದ ಚಾಳುಕ್ಯ ರಾಜ್ಯದಲ್ಲಿ ಒಂದು ಪ್ರತಿಷ್ಠಿತ ಮನೆತನವಾಗಿ ಪ್ರತಿಷ್ಠಾಪಿತವಾಯಿತು. ಪಂಪಯ್ಯ, ದಲ್ಲಪಯ್ಯ, ನಾಗದೇವ, ಅಣ್ಣಿಗದೇವ– ಈ ನಾಲ್ಕು ತಲೆಮಾರಿನವರು, ರಕ್ತ ಸಂಬಂಧವರು, ಒಬ್ಬರಾದ ಮೇಲೆ ಒಬ್ಬರು ಸೈನ್ಯದಲ್ಲಿ ಪ್ರಮುಖರೆನಿಸಿದರು. ಇವರ ತರುವಾಯವೂ ಈ ವಂಶದ ಕುಡಿಗಳು ಕಾಣಿಸಿಕೊಂಡಿರುವುದನ್ನು ಸಹ ಈ ಸಂಪ್ರಬಂಧದ ಕಕ್ಷೆಯಲ್ಲಿ ಚರ್ಚಿಸಿ ಬಹುದಾಗಿದೆ. ಕರ್ನಾಟಕದ ಶಾಸನಗಳಲ್ಲಿ, ಕಾವ್ಯಗಳಲ್ಲಿ ವಾಜಿಕುಳ ಮತ್ತು ಆ ಕಾಲಕ್ಕೆ ಸೇರಿದ ಪ್ರಮುಖರ ಕೆಲವು ಪ್ರಸ್ತಾಪಗಳಿವೆ. ಅವುಗಳನ್ನು ಕಾಲಾನುಕ್ರಮಣಿಕೆಯಿಂದ ವಿವೇಚಿಸಬಹುದು.

೧. ದಲ್ಲಪ–ನಾಗದೇವ–ಅಣ್ಣಿಗದೇವ ಇವರ ತರುವಾಯ ವಾಜಿಕುಳದ ಮತ್ತು ಇವರ ಮನೆತನದವನೇ ಆದ ಕಾಳಿಮಯ್ಯ ದಂಡನಾಯಕನು ಕಂಡುಬರುತ್ತಾನೆ. ಭುವನೈಕಮಲ್ಲ ಇಮ್ಮಡಿ ಸೋಮೇಶ್ವರನ ಕಾಲದ ಇಬ್ಬರು ಪ್ರಮುಖ ಮಹಾಮಣ್ಡಳೇಶ್ವರರು ಲಕ್ಷ್ಮರಸ ಮತ್ತು ಕಾಳಿಮಯ್ಯ. ಇವರಿಬ್ಬರಲ್ಲಿ ಕಾಳಿಮಯ್ಯನು ಚಾಳುಕ್ಯ ಸಾಮ್ರಾಜ್ಯದ ಉತ್ತರಕ್ಕೂ, ಲಕ್ಷ್ಮನೃಪನು ದಕ್ಷಿಣ ಭಾಗಕ್ಕೂ ತಮ್ಮ ಆಡಳಿತ ನಿರ್ವಹಣೆ ಮಾಡಿರುವುದು ಗಮನಾರ್ಹ. ಕಾಳಿಮಯ್ಯನು ಜಿನಭಕ್ತನಾಗಿ ತನ್ನ ವಂಶದ ಹಿರಿಯರಂತೆ ಜಿನಗೃಹವನ್ನು ಕಟ್ಟಿಸಿದನು. ಅವನನ್ನು ಕುರಿತು ಮಹಾ ರಾಷ್ಟ್ರದ ನಾಂದೇಡು ಜಿಲ್ಲೆಯ ದೇಗಲೂರು ತಾಲ್ಲೂಕಿನ ತಡಕಲ್ಲು ಗ್ರಾಮದ ಶಾಸನ ಪರಿಚಯ ಮಾಹಿತಿಯನ್ನು ಒದಗಿಸಿದೆ:

(ಭದ್ರಂ) ಭೂಯ (ತಾ) ಜ್ಜಿನೇಂದ್ರಾ(ಣಾಂ) (ಶಾಸನಾಯಾ) ಘನಾ (ಶಿನೇ)

ಕುತೀರ್ತ್ಥ (ಧ್ವಾನ್ತಸಂಘಾ) ತ ಪ್ರಭಿನ್ನಘನ (ಭಾಗವೇ)||

(ಸ್ವಸ್ತಿ) ಸಮಸ್ತಭುವನಾಶ್ರಯ ಶ್ರೀ| ಪೃಥಿವೀ ವಲ್ಲಭ ಮಹಾರಾಜಾಧಿರಾಜ

ಪರಮೇಶ್ವರ ಪರಮಭಟ್ಟಾರಕಂ ಸತ್ಯಾಶ್ರ| ಯಕುಳತಿಳಕಂ ಚಾಳುಕ್ಯಾಭರಣಂ

ಶ್ರೀಮದ್ಭು| ವನೈಕಮಲ್ಲದೇವರ ವಿಜಯರಾಜ್ಯಮುತ್ತ | ರೋತ್ತರಾಭಿವೃದ್ಧಿ

ಪ್ರವರ್ದ್ಧಮಾನಮಾಚಂದ್ರಾರ್ಕ್ಕ| ತಾರಂ ಸಲುತ್ತಮಿರೆ ತತ್ಪಾದ ಪದ್ಮೋಪಜೀವಿ

ಸಮಧಿಗತ ಪಂಚಮಹಾಶಬ್ದ ಮಹಾಮ|ಣ್ಡಳೇಶ್ವರನಮರಾವತೀಪುರವರೇ

ಶ್ವರಂ| ಸಂಗ್ರಾಮರಾಮಂ ಭುಜಬಳಭೀಮಂ ನೆರೆವೊಡೆ| ಗಣ್ಡಂ

ವೈರಿಭೇರುಣ್ಡಂ ನಿಗಳಂಕಮಲ್ಲಂ ಕೀರ್ತ್ತಿ| ಗೆ ನಲ್ಲ ಕಟಕದ ಗೋವಂ

ಭಂಟರ ಬಾವಂ ಬಿ| ರುದತ್ರಿನೇತ್ರಂ ಪರಾನಾರೀಪುತ್ರಂ ಸಾಹ|

ಸೋತ್ತುಂಗಣ್ಣನಸಿಂಗ ನಾಮಾದಿ| ಸಮಸ್ತ ಪ್ರಶಸ್ತಿ ಸಹಿ| ತಂ

ಶ್ರೀಮನ್ಮಹಾಮಂಡಳೇಶ್ವರಂ ಕಕ್ಕ |. . . . . . .|

ಕರಗುಡ್ಡ ಸಮಸ್ತ ರಾಜ್ಜಭರನಿರೂ| ಪಿತ ಮಹಾಮಾತ್ಯ ಪದವೀ ವಿರಾ|

ಜಮಾನ ಮಾನೋನ್ನತ ಪ್ರಭುಮಂತ್ರೋ| ತ್ಸಾಹ ಶಕ್ತಿತ್ರಯ ಸಂಪನ್ನಂ ಸುಜನ

ಪ್ರಸನ್ನಂ ಬುನ್ಧುಜನಚಿನ್ತಾಮಣಿ ವಾಜಿಕುಳಾಂ| ಬರದ್ಯುಮಣಿ. . . .

ಸಿಂಗನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ| ಶ್ರೀಮದ್ದಂಡನಾಯಕಂ ಕಾಳಿಮಯ್ಯಂ

ಕರಡಕಲ್ಲೊಳ್ಮಾಡಿಸಿದ ನಿಗಳಂಕಮಲ್ಲ| ಜಿನಾಲಯಕ್ಕೆ ಶಕವರ್ಷ ೯೯೩ ನೆಯ

ಸಾಧಾರಣ ಸಂವತ್ಸರದ ಪುಷ್ಯ ಬಹುಳ| ಪಂಚಮಿ ೫ ಶುಕ್ರವಾರ

ದನ್ದಿನುತ್ತರಾಯಣ| ಸಂಕ್ರಾನ್ತಿ ಪರ್ವ್ವ ನಿಮಿತ್ತದಿಂ ಧಾರಾ| ಪೂರ್ವ್ವಕಂ

ಮಾಡಿ ದೆಯಿಗಾವೆಯ ತಡಕ| ಲ್ಲೆಡೆವೊಲದಲೆರಡೂರ ಪ್ರಜೆಗಳ

ಸನ್ಮತದಿಂ| ಬಿಟ್ಟ ಕರಿಯನೆಲಂ ಮಾವನ ಸಿಂಗಂ ಕೋಲ| ಮತ್ತರೈ

ವತ್ತಂಕದೊಳಂ ಮತ್ತರು ೫೦| ಆಣಲಿಗೆಯೂರ ಮುಂದಣ ಪೊಲ

ಮೇರೆಯ ಪಳ್ಳದ ತಡಿಯಲು ಬಾಯಿಗಾವೆಯ ಪೊಲದಲು ಬಿಟ್ಟ

ಪೂವಿನ ತೋಂಟ ಆ ಕೋಲ ಮತ್ತರು ೧ ತಡಕಲ್ಲು ಪ್ರಭು| ದಣ್ಡನಾಯಕಂ

ನಾಗವರ್ಮ್ಮಯ್ಯನುಮಲ್ಲಿಯ| ಮಹಾಜನಮುಮೂರಿಂ ಮೂಡಲು ನಾಗೇ

ಶ್ವರದೇವರ ತೊಟದಿಂ ಬಡಗಲುಪಳ್ಳದ ತಡಿಯಲ್ಕೊಟ್ಟ ಪೂವಿನ

ತೋಂಟಂ ಮತ್ತರು ೧ ಘಾಣ ೧

**[Inscriptions from Nanded District: No. 8,1071,pp. 18-20lines [1-46]**

ತಡಕಲ್ಲು ಶಾಸನವನ್ನು ಇಷ್ಟು ದೀರ್ಘವಾಗಿ ಉದಾಹರಿಸಿರುವುದಕ್ಕೆ ಕಾರಣವೂ ಔಚಿತ್ಯವೂ ಉಂಟು. ಕಾಳಿಮಯ್ಯನು ವಾಜಿವಂಶದ ಮೇಲಾಳು: ವಾಜಿಕುಳಾಂಬರ ದ್ಯುಮಣಿ (ವಾಜಿಕುಲವೆಂಬ ಆಕಾಶವನ್ನು ಬೆಳಗುವ ಸೂರ್ಯನು). ದಲ್ಲಪನ ಮಗ ನಾಗದೇವನನ್ನು ಲಕ್ಕುಂಡಿಯ ಶಾಸನ ವಾಜಿಕುಳತಿಳಕನುಂ ತೇಜೋ ಭಾಸ್ಕರನಿಂ ಎಂದಿರುವುದನ್ನು ನೆನೆಯಬಹುದು [ಸೌ.ಇ.ಇ. ೧೧-೧,ಕ್ರಿ. ೧೦೦೭, ಸಾಲು ೧೩].

ಕಾಳಿಮ ರ್ಯ್ಯ ನ ವಾಜಿಕು ಳದು ನು ; ಅತ್ತಿ ಮ ಬ್ಬೆರು ಮ ಗನಾದ ಪಿ ಲೆ ಕಾಣ ಪ ಮ ತ್ತೊಬ್ಬ

ಈ ವಾಜಿಪ ಅ ದ ಮಹಾಮ ತ್ಯನೂ ದಂಡ ನಾಯ ಕನೂ ಆಗಿದ್ದಾ ನಿ ಅತ್ತಿ ಮ ಬ್ಬೆ ಲ ಕ್ಕುಂಡಿಯ ಲ್ಲಿ

ಜಿನಾಲ ಯ ಕಟ್ಟಿಸಿದಂತೆ, ಕಾಳಿಮ ರ್ಯ್ಯ ನ ಕರ ಡ್ಕಲ್ ಎಂ ಬಲ್ಲಿ ಜಿನಾಲ ಯ ಕಟ್ಟಿಸಿದ ನು ; ಅದ ಕ್ಕೆ

'ನಿಗ ಳಂಕ ಮಲ್ಲ ಜಿನಾಲ ಯ' ಎಂ ಬ ಹ ೆಸ ರಾಯಿ ತು . ಕಾಳಿಮ ರ್ಯ್ಯನು ಅಣ್ಣಿಗ ಡಿ ಮ ಏನಾಗಬೇಕು

ಎಂ ಬ ದ ಪರಿಶೀಲ ನಾರ್ಹ . ಅಣ್ಣಿ ಗ ಡೆವ ನು ಅಪು ತ್ರಕ ಮ ತ್ತು ಅವಿವಾಹಿತ ನಿಯ ತೀರು ತ್ತ ದಿ.

ಅಜಿತ ತ್ರು ರಾಣದಲ್ಲಿ,ಲಕ್ಕುಂಡಿಯ ಶಾಸನದಲ್ಲಿ ಆತನದಾಂಪತ್ಯ-ಸಂತಾನ ಕುರಿತು ಪ್ರಸ್ತಾಪವಿಲ್ಲ.

ನಾಗದೇವನಿಗೆ ಅಣ್ಣಿಗನ ಪಿರಿಯ ಮಗಂ-ಅಗ್ರಸುತಂ ಆಗಿದ್ದನೆಂದು ಶಾಸನ ಮತ್ತು ಕಾವ್ಯದಿಂದ

ತಿಳಿದು ಬರುತ್ತದೆ. ಹಾಗಾದರೆ ನಾಗದೇವನಿಗೆ ಕಿರಿಯ ಮಗನೊಬ್ಬನಿದ್ದನೆಂದು ಭಾವಿಸಬಹುದು.

ಅದೇ ರೀತಿಯಲ್ಲಿ ದಲ್ಲಪನಿಗೂ ನಾಗ-ದೇವನು ಪಿರಿಯ ಮಗನೆಂದು, ಅದೇ ಲಕ್ಕುಂಡಿಯ

ಶಾಸನದಲ್ಲಿದೆ. ಕಾಳಿಮಯ್ಯನು ದಲ್ಲಪನಿದ್ದ ಕಿರಿಯ ಮಗನ ಮಗನೋ ಇಲ್ಲವೇ ನಾಗದೇವನ

ಕಿರಿಯ ಮಗನೋ ಆಗಿರಬಹುದ.

ತಡಕಲ್ಲು ಶಾಸನದಲ್ಲಿ ಇಪ್ಪತ್ತನೆಯ ಸಾಲು ಸಂಪೂರ್ಣವಾಗಿ ನಶಿಸಿ ಹೋಗಿರುವುದರಿಂದ ಒಂದು ಸಂಶಯಕ್ಕೆಡೆಯಾಗಿದೆ. ಈ ಶಾಸನದ ಹತ್ತನೆಯ ಪಂಕ್ತಿಯಿಂದ ಇಪ್ಪತ್ತನೆಯ ಪಂಕ್ತಿಯವರೆಗೆ ಬರುವ ವಿವರಣೆಯಷ್ಟೂ ಒಬ್ಬ ಮಹಾಮಂಡಲೇಶ್ವರನಿಗೆ ಸಂಬಂಧಪಟ್ಟಿದ್ದು. ಇಪ್ಪತ್ತೊಂದನೆಯ ಪಾದದಿಂದ ಮುಂದಕ್ಕೆ ೪೧ ನೆಯ ಪಾದದವರೆಗೆ ಇರುವ ವರ್ಣನೆ ಮಾತ್ರ ಕಾಳಿಮಯ್ಯ ದಂಡನಾಯಕನದಿರಬಹುದು. ಈ ಸಂಶಯವನ್ನು ಕಳಚಬಹುದಾಗಿದ್ದ ಕೊಂಡಿಯಾದ ೨೦ ನೆಯ ಸಾಲು ಅಳಿಸಿ ಹೋಗಿದೆ. ವಾಜಿವಂಶಜರಂತೆ ಕಾಳಿಮಯ್ಯನೂ ಚಾಳುಕ್ಯರ ದಂಡನಾಯಕನಾಗಿರುವುದು ಕೂಡ ವಿಶೇಷ ಗಮನಿಕೆಗೆ ತಕ್ಕುದಾಗಿದೆ.

ಮೇಲಿನ ಶಾಸನದಲ್ಲಿ ಅಳಿಸಿಹೊಗಿರುವ ಸಾಲಿನಲ್ಲಿ, ಕಳಚಿ ಹೋಗಿರುವ ಕೊಂಡಿಯನ್ನು ಕೂಡಿಸಿ ಸರಿಪಡಿಸಲು ಬೇಕಾದ ಮಾಹಿತಿ ಮತ್ತೊಂದು ಶಾಸನದಲ್ಲಿ ಉಪಲಬ್ಧವಿದೆ. ಅದೇ ನಾಂದೇಡ್ ಜಿಲ್ಲಾ ಶಾಸನ ಸಂಪುಟದಲ್ಲಿರುವ ಎಕ್ಲಾರಾ ಗ್ರಾಮದ ಶಾಸನದಲ್ಲಿ ಹೀಗಿದೆ:

೧೨ ತ್ರೈಳೋಕ್ಯಮಲ್ಲದೇವರ ಮಹಾ ಸಾಮನ್ತ ಅಮರಾವತೀ ಪುರವ

೧೩ ರೇಶ್ವರ ಸಮರಂ ಮಹೇಶ್ವರಂ

೧೪ ..... ಕಾಮಂ ಭುಜಬಳ ಭೀಮಂ

೧೫ ವೈರಿಭೇರುಣ್ಡಂ ನಿಗಳಂಕ ಮಲ್ಲಂ

೧೬ ಕಟಕದ ಗೋವಂ ಅಣ್ಣನ ಸಿಂಗಂ

೧೭ ಶ್ರೀಮತ್ರೈಳೋಕ್ಯಮಲ್ಲದೇವ

೧೮ ರ ಪಾದಪಂಕಜ ಭ್ರಮರ ನಾ

೧೯ ಮಾಡಿ ಸಮಸ್ತ ಪ್ರಶಸ್ತಿ ಸಹಿತ ಶ್ರೀ

೨೦ ಮನ್ಮಹಾ ಸಾಮಾನ್ತಂ ಕರ್ಕ್ಕಪರ

೨೧ ಸ ಸಕವರ್ಷ ೯೮೮ ನೆಯ ಪ

೨೨ ರಾಭವ ಸಂವತ್ಸಾರ. . . . .

**[Inscriptions from Nanded District: (1968). No. 6.1066** ಎಕ್ಲಾರ (ನಂದೇಡ್ ಜಿ. ಮುಖೇಡ್ ತಾ.) ಪು. ೧೫] ಇದೇ ಶಾಸನ ಸಂಕಲನ ಸಂಪುಟ ದಲ್ಲಿರುವ ಕರಡಿಕಲ್ ಶಾಸನದಲ್ಲೂ ಸಹ 'ಶ್ರೀಮನ್ಮಹಾಮಂಡಳೇಶ್ವಂ ಕರ್ಕ್ಕರಸರು' ಎಂದಿದೆ [ಅದೇ: ನಂ. ೧೦.೧೦೭೯ (ನಾಂದೇಡ್ ಜಿಲ್ಲೆ ದೇಗಲೂರು ತಾಲ್ಲೂಕು)]

ಆದ್ದರಿಂದ ತಡಕಲ್ಲು ನಂ. ೮ನೆಯ ಶಾಸನದಲ್ಲಿ ಪ್ರಸ್ತಾಪಿತವಾಗಿರುವ ಕಾಳಿಮಯ್ಯನು ದಂಡನಾಯಕನೇ ಹೊರತು ಮಹಾಮಂಡಲೇಶ್ವನಲ್ಲ. ಆಗ ಆಮರಾವತೀ ಪುರವರೇಶ್ವರನೂ ಮಹಾಮಂಡಲೇಶ್ವರನೂ ಆಗಿದ್ದವನು ಕರ್ಕ್ಕಪರಸ ಅಮರಾವತೀ ಪುರವೆಂಬುದು ಪ್ರಯಃ ನಾಂದೇಡ್ ಜಿಲ್ಲೆಯ ದೇಗಲೂರೇ ಇರಬೇಕು; ದೇಗಲೂರು ಎಂಬುದರ ಸಂಸ್ಕೃತೀಕರಣಗೊಳಿಸಿದ

ರೂಪ ಅಮರಾವತಿಪುರ–ಎಂದು ನನಗೆ ತೋರುತ್ತದೆ.  ದೇಗುಲಗಳ ಊರು ದೇಗಲೂರು; 'ದೇಗುಲ' ಶಬ್ದವು ಸಂಸ್ಕೃತದ 'ದೇವಕುಲ' ದ ತದ್ಭವರೂಪ.  ಸಂಸ್ಕೃತ ಮೂಲದಿಂದ ಬಂದು 'ದೇಗಲೂರು' ಎಂದು ಕನ್ನಡೀಕರಣಗೊಂಡ ರೂಪವೇ ಮತ್ತೆ ಅದರ ಶಬ್ದಾರ್ಥನ್ನು ಅನುಸರಿಸಿ 'ಅಮರಾವತೀಪುರ' ಎಂದು ಸಂಸ್ಕೃತೀಕರಣ ಗೊಂಡಿರುವುದು ವಿಚಿತ್ರವಾದ ಅಥವಾ ಅಸಾಧ್ಯವಾದ ಬೆಳವಣಿಗೆಯೇನಲ್ಲ.

ಈ ಮಹಾಮಂಡಲೇಶ್ವರನ ಅಧಿಕಾರ ವ್ಯಾಪ್ತಿಯಲ್ಲಿ ದಂಡನಾಯಕ ನಾಗಿದ್ದವನು ವಾಜಿಕುಳಾಂಬರದ್ಯುಮಣಿ (ವಾಜಿವಂಶದ ಸೂರ್ಯ) ಕಾಳಿಮಯ್ಯ.  ಈತನು ಅಲ್ಲಿಗೆ ಮಹಾಮತ್ಯಪದವಿಯಿಂದ ವಿರಾಜಮಾನನೂ ಆಗಿದ್ದನು.  ಬಂಧುಜನ ಚಿಂತಾಮಣಿ ಎನಿಸಿದ ಕಾಳಿಮಯ್ಯನು ಕರಡಕಲ್(ಕರಡಿಕಲ್) ಗ್ರಾಮದಲ್ಲಿ ಬಸದಿಯನ್ನು ಕಟ್ಟಿಸಿ, ಅದಕ್ಕೆ ಆ ಭಾಗದ ಆಗಿನ ಮಹಾಮಂಡಲೇಶ್ವನಾದ ಕರ್ಕಪರಸನಿಗೆ ಇದ್ದ 'ನಿಗಳಂಕಮಲ್ಲ' ಬಿರುದಿನಿಂದ 'ನಿಗಳಂಕ ಮಲ್ಲ ಜಿನಾಲಯ' ವೆಂದು ನಾಮಕರಣ ಮಾಡಿದನು:  ಇದು ಕ್ರಿ.ಶ. ೧೦೭೧ ರಲ್ಲಿ ನಡೆದ ಕಾರ್ಯ.

ನಾಂದೇಡು ಜಿಲ್ಲೆಯಲ್ಲಿ ಹಾಳುಬಿದ್ದಿರುವ ಜೈನ ಅವಶೇಷಗಳು ವಿಪುಲವಾಗಿ ಸಿಗುತ್ತವೆ, ಉದಾಹರಣೆಗೆ ಕಂಧಾರ್ (ಖಂಧಾರ್, ಕಂದಹಾರ್)

ಹುಳ್ಳ–ರೇಚಣ

ಹೊಯ್ಸಳರ ಪ್ರಸಿದ್ಧ ಅಧಿಕಾರಿ–ಭಂಡಾರಿ ಹುಳ್ಳನು ವಾಜಿವಂಶ ತಿಳಕನಾದ ಯಕ್ಷರಾಜ (ಜಕ್ಕಿರಾಜ) ನ ಮಗ ಎಂಬುದು ಗಮನಿಕೆಗೆ ತಕ್ಕುದಾಗಿದೆ:

ಅಕಳಂಕಂ ಪಿತೃವಾಜಿವಂಶ ತಿಳಕ ಶ್ರೀಯಕ್ಷರಾಜಂ ನಿಜಾಂ
ಬಿಕೆ ಲೋಕಾಂಬಿಕೆ ಲೋಕವಂದಿತೆ ಸುಶೀಲಾಚಾರೆ ದೈವಂ ದಿವೀ

ಶಕ ಕದಂಬಸ್ತುತ ಪಾದಪದ್ಮನರುಹಂ ನಾಥಂ ಯದುಕ್ಷೋಣಿ ಪಾ

ಳಕ ಚೂಡಾಮಣಿ ನಾರಸಿಂಗನೆನಲೇಂ ನೋಂಪುಳ್ಳನೋ ಹುಳ್ಳಪಂ ||

[ಎ.ಕ.೨, ೭೧(೬೪) ೧೧೬೩. ಪು.೩೦. ಶ್ರವಣಬೆಳುಗೊಳ (ಹಾಸನಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು)]. ಇದೇ ಪದ್ಯ ಶ್ರವಣಬೆಳುಗೊಳ ೪೭೬(೩೪೫) ಶಾಸನದಲ್ಲೂ ಪುನರಾವೃತ್ತಿ ಆಗಿದೆ. ಅಲ್ಲದೆ ಇನ್ನೊಂದು ಶಾಸನದಲ್ಲಿ ಇದೇ ವಿಷಯ ಕಂದಪದ್ಯದಲ್ಲಿ ಪಡಿ ಮೂಡಿದೆ.

ವಾಜಿಕುಳ ಕಳ್ಪಭೂಜಂ

ವಾಜಿಕುಳಾಂಭೋಜಲಕ್ಷ್ಮಿ ಹುಳ್ಳಚಮೂಪಂ

ವಾಜಿಕುಳತಿಕನೆಸೆದಂ

ರಾಜ ಸಭಾಯೋಗ್ಯನನುಪಮಂ ವಸುಮತಿಯೊಳು||

[ಎ.ಕ.೭(೧೯೭೯) ೬೩ (೪ ನಾಮಂ ೩೦) ೧೧೬೫. ಲಾಲನಕೆರೆ(ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು) ಪು. ೪೩.ಸಾಲು: ೩೦-೩೧] ಇದೇ ರೀತಿಯಾಗಿ, ಹೊಯ್ಸಳರ ಮತ್ತೊಬ್ಬ ಅಧಿಕಾರಿಯಾದ ಪುಣಿಸಮಯ್ಯನೂ ಸಹ ವಾಜಿವಂಶಜನೆಂದು ತಿಳಿದು ಬರುತ್ತದೆ.

ಎನೆ ನೆಗಳ್ದ ಹುಳ್ಳರಾಜಂ

ಗನುನಯದಿಂದಂಣನೆನಿಸಿ ಸೊಗಯಿಪನೆನಸುಂ

ಮನುಚರಿತ ದುರಿತದೂರಂ

ವಿನಯಪರಂ ಕಂಟಿಮಯ್ಯನನುಪಮತೇಜಂ ||

ಎರದರ್ಗ್ಗಾಸ್ಸೆಸಿ ಬಂದರ್ಗ್ಗೆಡಱಡಸಿದವರ್ಗ್ಗಿಕ್ಕುಪಟ್ಟರ್ಗ್ಗೆ

ಕೆಟ್ಟರ್ಗೆ ರವಿ ಪ್ರಕ್ಯಾತಜಾತಂ ಮಗಳ್ದುದಯ್ಸಿದಂತೆತ್ತಪಂ

ಕೂಡೆ ಲೋಕೋತ್ತರಮಾಗಲು ವಾಜಿವಂಶೋತ್ತಮನಮಳ
ಗುಣಾಳಂಕ್ರಿತಂ ಧರ್ಮರತ್ನಾಕರನುದ್ಭಾಟೋಪಪಂಚಾನನನನು
ಪಮತೇಜೋನಿಧಿ ಕಂಟಿಮಯ್ಯಂ |
[(ಮಹಾಸ್ರಗ್ಧರೆ: ಅಶುದ್ಧ) ಅದೇ:ಪು. ೪೩, ಸಾಲು. ೩೧-೩೪]

ಜನಕನನೂನದಾನಪತಿ ವಾಜಿಕುಳೋತ್ತಮನೊಳ್ಪುವೆತ್ತ ಹೆಂ
ಪಿನಮದುಸೂದನಂ ಜನನಿ ಜಾಹ್ನವಿ ಸದುಗುಣಿ ಮುದ್ದಿಯಕ್ಕನೀ
ಮನಸಿಜ ಮರ್ದ್ಧನಂ ಸುರಗಣಾರ್ಚ್ಚಿತನೀಸ್ವರನಿಷ್ಟದೆಯ್ವವೆಂ
ದನುನಯದಿಂದೆ ಬಂಣಿಪುದು ಧಾರಿಣಿ ಹೆಗ್ಗಡೆ ಕಂಟಿಮಯ್ಯನಂ ||
(ಚಂಪಕ ಮಾಲೆ: ಅಶುದ್ಧ) ಅದೇ ಪು. ೪೩-೪೪ ಸಾಲು. ೩೪-೩೬
ಎತ್ತಿಸಿದಂ ಧರಿತ್ರಿ ಹೊಗಳಲು ಮುದದಿಂ ಸಿವರಂಮ್ಯಗೇಹಮಂ
ತೆತ್ತಸಿದಂ ದಿಶಾವಳದೊಳು ನೆಱೆಕೀರ್ತಿಯನೊಲ್ದು ರಾಗದಿಂ
ಗುತ್ತನ ಚಾರುದತ್ತನೆಣೆಯೆಂಬುದು ಧಾರಣಿ ಕಂಟಿಮಯ್ಯನಂ
ಉತ್ತಮತೇಜನಂ ಸುಚಿಯನೊ (ಳ್) ಗುಣೆಯಂ ಪದಪಿಂ ನಿರಂತರಂ ||
[(ಉತ್ಪಲ ಮಾಲೆ) ಅದೇ. ಪು. ೪೪. ಸಾಲು: ೩೮-೪೦]

ಹುಳ್ಳಮಯ್ಯನ ಕೈಕೆಳಗಿನ ಹೆಗ್ಗಡೆ ಕಂಟಿಮಯ್ಯನು ಅನುನಯದಿಂದ ಅಂಣ ನೋಪಾದಿಯಲ್ಲಿದ್ದನು. ಹುಳ್ಳಮಯ್ಯನಂತೆ ಕಂಟಿಮಯ್ಯನೂ ವಾಜಿಕುಲಜನ್ಯನು. ವಾಜಿ ಕುಳೋತ್ತಮನಾದ ಮದುಸೂದನ (ಜಾಹ್ನವಿ) ಮಗನಾದ ಕಂಟಿಮಯ್ಯನು ಶೈವನಾಗಿದ್ದು ಶಿವಾಲಯವನ್ನು ಕಟ್ಟಿಸಿದನು. ಜಿನಭಕ್ತ ಹುಳ್ಳಮಯ್ಯನೂ ಶಿವಭಕ್ತ ಕಂಟಿಮಯ್ಯನೂ ಅಣ್ಣತಮ್ಮಂದಿರಂತೆ ಬಾಳಿದರೆಂದು ಈ ಶಾಸನ ಮತೀಯ ಸೌಹಾರ್ದವನ್ನು ದಾಖಲಿಸಿದೆ.

ವರ್ಧಮಾನ ಪುರಾಣವನ್ನು ಬರೆದ ಅಚಣ್ಣ ಕವಿಯ ಪೋಷಕನೂ, ಮಹಾಮಂತ್ರಿ ಮತ್ತು ಚಮೂಪನಾಗಿ ಕೀರ್ತಿಶಾಲಿಯಾದವನೂ ಆದ, ವಸುಧೈಕ ಬಾಂಧವ ಬಿರುದಾಂಕಿತ ರೇಚರಸನು (ರೇಚಣ, ರೇಚವಿಭು, ರೇಚಿದಂಡಾಗಿನಾಥ) ಕೂಡ ವಾಜಿವಂಶ ತಿಲಕನಾಗಿದ್ದನು.

ಕುಲಮಂ ಪೇೞ್ವೊಡೆ ವಾಜಿವಂಶ ತಿಲಕಂ ಸನ್ಮಂತ್ರ ಮಂತ್ರಿತ್ವದೊಳ್
ಪಲರುಂ ಜೀಯೆನೆ ದೇವ ಮಂತ್ರಿಯೊಲವಂ ಸಲ್ಲೀಲೆಯಿಂ ತೋಱುವಂ
ಚಲದಿಂದಾಂತರನಿಕ್ಕಿಮೆಟ್ಟಿ ಪಡೆವಂ ಸತ್ಕೀರ್ತಿಯಂ ಧಾತ್ರಿಯೊಳ್
ನಲವಿಂ ರೇಚಣಮಂತ್ರಿಯಾರ್ಗಮಧಿಕಂ ಸಾಹಿತ್ಯ ವಿದ್ಯಾಧರಂ ||

[ಎ.ಕ.೫, ಅರಸೀಕೆರೆ ೬೯.೧೧೭೪] ರೇಚಣ ಚಮೂಪನ ಸಂಬಂಧವಾಗಿ ಅನೇಕ ಮಾಹಿತಿಗಳು ಉಪಲಬ್ಧವಿವೆ. ಶಾಸನಗಳಲ್ಲೂ ಕಾವ್ಯದವಲ್ಲೂ ರೇಚವಿಭುವಿನ ಘನ ವ್ಯಕ್ತಿತ್ವ ಅರಳಿ ನಿಂತಿದೆ; ಎ.ಕ. ೭-೧, ಶಿಕಾರಿಪುರ ೧೧೯,೧೨೩,೧೮೫,೧೯೭, ೨೨೫: ಎ.ಕ. ೫, ಅರಸೀಕೆರೆ ೬೯ ಮತ್ತು ೭೭; ಅಚಣ್ಣ ಕವಿಯ ವರ್ಧಮಾನ ಪುರಾಣಂ (೧೧೯೦); ಮೈಸೂರು ಗೆಜಟಿಯರ್ ಸಂಪುಟ ೨, ಭಾಗ ೨- ಮೊದಲಾದವನ್ನು ಅವಲೋಕಿಸುವುದು. ದೇಸಾಯಿ ಪಾಂಡುರಂಗರಾಯ,'ಶಾಸನ ಪರಿಚಯ' (೧೯೫೬) ಇದರಲ್ಲಿ ಶಾಸನ ಸಂಖ್ಯೆ ೨೨ ನೆಯದು ಕೌಲೂರು ಗ್ರಾಮಕ್ಕೆ ಸೇರಿದ್ದು, ಇದರ ಕಾಲ ಸುಮಾರು ೧೧೭೭-೮೮. ಈ ಶಾಸನದಲ್ಲಿ ಕಳಚುರಿ ಚಕ್ರವರ್ತಿ ಸಂಕಮದೇವನುಮಂ ತತ್ ಪ್ರಧಾನನಪ್ಪ ವಸುಧೈಕ ಬಾಂಧವ ರೇಚಿದೇವನುಮಂ ತತ್ ಚಿತ್ತ ವೃತ್ತಿಯುಮಂ ಸಂಪೂರ್ಣ ವೃತ್ತಿಯುವಂ ಪಡೆದು ಬಂದು ಶ್ರೀಮದನಾದಿಯಗ್ರ ಹಾರ ಕೌಱೂರ ಊರೊಡೆಯರು ಹರಿಹರ ದೇವರ್ಗ್ಗೆ ದಾನಕೊಟ್ಟುದನ್ನು ದಾಖಲಿಸಿದೆ. ಚತುರ್ಭಾಷಾ ಚಕ್ರವರ್ತಿ ಕವಿಕಂದರ್ಪನ ಈ ಶಾಸನದ ಕಾಲ ಕ್ರಿ.ಶ. ೧೧೭೭. ಕೌಲೂರು/ಕೌಱೂರು-ಎಂಬ ಊರು ಈಗಿನ ಕೊಪ್ಪಳ ತಾಲ್ಲೂಕಿನ ದೊಡ್ಡ ಗ್ರಾಮ; ಇದು ಬನ್ನಿಕೊಪ್ಪ ರೈಲ್ವೆ ನಿಲ್ದಾಣದಿಂದ ಅತ್ತಿಮಬ್ಬೆ (೧೯೯೬) ಪುಸ್ತಕದಲ್ಲಿ ಚರ್ಚಿಸಿದ್ದೇನೆ [ಪು. ೪೯] 'ವಸುಧೈಕ ಬಾಂಧವ ರೇಚಣ

ದಂಡಾಧಿನಾಥ'–ಎಂಬ ಲೇಖನದಲ್ಲಿ ಸಮಗ್ರ ಮಾಹಿತಿಯ ವಿವೇಚನೆಯಿದೆ [ನಾಗರಾಜಯ್ಯ, ಹಂಪ.: ಬೆಳ್ಳಿಬಾಗಿನ', (ಸಂ) ಡಿ.ಲಿಂಗಯ್ಯ: ೧೯೯೪: ಪು. ೯೧–೯೯].

ಹುಳ್ಳನು ಲೋಕಂಬಿಕೆಯ ಮಗ, ರೇಚಣನು ನಾಗಾಂಬಿಕೆಯ ಮಗ [ಎ.ಕ.೭, ಶಿಕಾರಿಪುರ ೧೯೭, ೧೧೮೦ ಸಾಲು: ೩೬]. ತೈಲಪನಿಗೂ ಚಾಳುಕ್ಯ ಕುಲಕ್ಕೂ ದಲ್ಲಪನು ಇದ್ದಂತೆ, ಬಿಜ್ಜಳ–ಆಹವಮಲ್ಲರಿಗೂ ಕಳಚೂರ್ಯರಿಗೂ ಈ ರೇಚಣನು ಆಧಾರಸ್ತಂಭ ವೆನಿಸಿದ್ದನು. ಈ ರೇಚಣನ ಚಾರಿತ್ರಿಕ ಸ್ಥಾನಮಾನ ಕುರಿತ ನಿರ್ದೇಶನ ಸಮರ್ಪಕವಾಗಿ ನಡೆದಿಲ್ಲ. ರೇಚರಸನು ಕಳಚೂರ್ಯರ (ಮೂಲತಃ ಕಾಳಾಂಜ ಪುರವರೇಶ್ವರರ) ಆಹವಮಲ್ಲನ (೧೧೮೦–೮೩) ಮಹಾಪ್ರಧಾನನೂ ಬಾಹತ್ತರ ನಿಯೋಗಾಧಿಪತಿಯೂ ದಂಡಾಧಿನಾಥನೂ ಆಗಿದ್ದುದು ಮಾತ್ರವಲ್ಲದೆ, ಅದಕ್ಕೂ ಮೊದಲಿನಿಂದ ಆ ಮನೆತನದ ಆಳ್ವಿಕೆಯಲ್ಲಿ ಮಹತ್ತರ ಪಾತ್ರ ವಹಿಸಿದ್ದನು. ಇಮ್ಮಡಿ ಬಿಜ್ಜಳನಿಗೆ (೧೧೬೨–೬೭) ಸಪ್ತಾಂಗ ಸಂಪತ್ತಿಯನ್ನು ಕ್ರಮದಿಂದ ಪಡೆದುಕೊಟ್ಟವನೇ ರೇಚಣ ದಂಡನಾಯಕ. ಬಿಜ್ಜಳನನ್ನು ಚಕ್ರವರ್ತಿಯೆನಿಸಿ ಸಿಂಹಾಸನದಲ್ಲಿ ಕೂಡಿಸಿದ್ದಲ್ಲದೆ, ಆತನ ಆರೂ ಜನ ಮಕ್ಕಳ ಮಾಣಿಕ್ಯವಾಗಿ ನಿಂತು ಧೈರ್ಯದಿಂದ ಮಾರ್ಗದರ್ಶನ ಮಾಡಿದವನೂ ರೇಚಣನೇ. ವಜ್ರದೇವನು ಆಳದಿದ್ದರೂ, ಸೋವಿದೇವ (೧೧೬೭–೭೬), ಮಲ್ಲಿಕಾರ್ಜುನ (೧೧೭೬), ಸಂಕಮ (೧೧೭೬–೮೦) ಮತ್ತು ಆಹವಮಲ್ಲರ (೧೧೮೩–೮೩) ರಾಜ್ಯಾಡಳಿತದಲ್ಲಿ ರೇಚಣನೇ ಪ್ರಮುಖನಾಗಿದ್ದನು. ಸಿಂಘಣನ (೧೧೮೩–೮೪) ಆಳ್ವಿಕೆಯ ಕಾಲ ಮುಗಿದೊಡನೆ ರೇಚಣನು ಕಲಚೂರಿಗಳ ಆಸ್ಥಾನ ತೊರೆದು, ಅವರನ್ನು ಗೆದ್ದ ಹೊಯ್ಸಲರ ವೀರಬಲ್ಲಾಳ (೧೧೭೩–೧೨೨೦) ರಾಜನಲ್ಲಿ ಮಹಾಮಂತ್ರಿಯಾದನು.

ಅಂಗಜೋಪಮ, ಆರ್ಥಿಕ ಕಲ್ಪತರು, ಪುಣ್ಯಾಕರ, ಭೋಗಪುರಂದರ, ಭೀಕರ ವೈರಿವಿದಾರಣ ಕೇಸರಿ, ಮಿಕ್ಕ ಸುದಾನಿ, ಸತ್ಕಳಾಢ್ಯ, ಜಿನೇಂದ್ರಮತಾಬ್ಜಭಾನು, ಸಾತಿತ್ಯ ವಿದ್ಯಾಧರ, ಚಾರಿತ್ರ ರತ್ನಾಕರ, ಲೋಕೈಕ ಕಳ್ಪದ್ರುಮ ಎಂಬಿತ್ಯಾದಿ ಹತ್ತಾರು ಬಿರುದು ಬಾವಲಿಗಳು ರೇಚಣನಿಗೆ

ಇದ್ದುವು.  ಈ ಪ್ರಶಸ್ತಿಗಳನ್ನೆಲ್ಲ ಹಿಂದೆ ಹಾಕಿ ಮುಂದೆ ನಿಂತದ್ದು ವಸುಧೈಕ ಬಾಂಧವ. ಆಚಣ್ಣಕವಿಗೆ ಆಶ್ರಯ ನೀಡಿ ರೇಚಣನು ವರ್ಧಮಾನ ಪುರಾಣವನ್ನು ಬರೆಸಿದನು ಅಲ್ಲದೆ ರೇಚಣನು ಅರಸೀಕೆರೆಯಲ್ಲಿ ಸಹಸ್ರಕೂಟ ಜಿನಾಲಯವನ್ನು ಕಟ್ಟಿಸಿದನು [ಎ.ಕ.೫, ಅರಸೀಕೆರೆ ೭೭]. ಜಿನನಾಥಪುರ ದಲ್ಲಿ ಶಾಂತಿ ನಾಥ ಜಿನನ ಬಿಂಬವನ್ನು ಮಾಡಿಸಿದನು. [ಎ.ಕ. ೧೧(೧೯೭೩) ೫೨೬ (೩೮೦) ೧೨ ಶ. ಲಕ್ಕುಂಡಿ (ಧಾರವಾಡ ಜಿಲ್ಲೆ, ಗದಗ ತಾಲ್ಲೂಕು)ಪು. ೩೭೪: ಬಾ.ಕ.ಐ. ೩೪ ೧೯೨೬–೨೭; ಎಆರ್ ಎಸ್‌ಐಇ ೧೯೨೬–೨೭, APP. E.No. 34] ಲಕ್ಕುಂಡಿಯ ವಸುಧೈಕ ಜಿನಾಲಯವನ್ನು ಈ ರೇಚಣನೇ ಕಟ್ಟಿಸಿದನೆಂದು ಅಂತರ ಬಾಹ್ಯ ಪ್ರಮಾಣಗಳಿಂದ ಖಚಿತಪಡಿಸಬಹುದು.

ಕಾಳಿಮಯ್ಯನೂ, ಯಕ್ಷರಾಜನೂ, ಹುಳ್ಳನೂ, ರೇಚಣನೂ ಅತ್ತಿಮಬ್ಬೆಯ ಬಂಧುಗಳೆನ್ನಬಹುದು.  ಧಲ್ಲಪನಿಗಿದ್ದ ಕಿರಿಯಮಗನ ಮತ್ತು ನಾಗದೇವನಿಗಿದ್ದ ಕಿರಿಯ ಮಗನ ಸಂತಾನಶ್ರೀಯ ಪರಂಪರೆಗೆ ಸೇರಿದವರು ಕಾಳಿಮಯ್ಯ, ಹುಳ್ಳ, ರೇಚಣರು.  ಇವರೆಲ್ಲರೂ ದಲ್ಲಪ, ನಾಗದೇವ, ಅಣ್ಣಿಗದೇವನಂತೆಯೇ ಸೇನಾಧಿಪತಿಗಳು.  ಅಣ್ಣಿಗದೇವನ ತರುವಾಯ ಕಾಳಿಮಯ್ಯನವರೆಗೆ ವಾಜಿವಂಶದವರು ಚಾಳುಕ್ಯರ ಆಶ್ರಯವನ್ನು ತೊರೆಯಲಿಲ್ಲ.  ವಿಕ್ರಮಾದಿತ್ಯ ೬ ಚಕ್ರಿಯ ಆಡಳಿತಾನಂತರ ಚಾಳುಕ್ಯರ ಒಲವು ಶೈವ ಪರವಾಯಿತು.  ಆಗ ಜೈನಪರವಾದ ವಾಜಿವಂಶದವರು ಅನ್ಯಾನ್ಯ ರಾಜಾಶ್ರಯಕ್ಕೆ ವಲಸೆ ಹೊರಟರು.  ಯಕ್ಷರಾಜನು ಅದಷ್ಟೇ ಉದಯೋನ್ಮುಖವಾಗುತ್ತಿದ್ದ ಹೊಯ್ಸಳರ ಆಸರೆಗೆ ಬಂದನು. ತನ್ನ ವಾಜಿವಂಶದ ನಿಷ್ಠೆ ಪರಾಕ್ರಮಗಳಿಂದ ಸೇವೆಗೈದನು; ಅನಂತರ ತನ್ನ ಬಂಧುವಾದ ಹುಳ್ಳನ ಸಲಹೆ ಸಹಾಯಗಳಿಂದ ಹೊಯ್ಸಳರನ್ನು ಸೇರಿದನು.

ಮಲ್ಲಪ–ಪುನ್ನಮಯ್ಯ, ಅತ್ತಿಮಬ್ಬೆಯರ ಆದರ್ಶ–ಪರಂಪರೆಯನ್ನು ಮುಂದು ವರಿಸಿ ರೇಚಣನು ಜಿನಗೃಹ ಕಟ್ಟಿಸಿ ಜೈನಪುರಾಣವನ್ನು ಬರೆಸಿದನು.

'ಧರ್ಮನಾಥ ಪುರಾಣ' ವೆಂಬ ಚಂಪೂ ಕಾವ್ಯವನ್ನು ರಚಿಸಿದನು ಮಧುರ ಕವಿ (೧೩೮೫) ಸಹ ವಾಜಿ ವಂಶಕ್ಕೆ ಸೇರಿದವನು; ಭಾರದ್ವಾಜ ಗೋತ್ರದವನು. ಮಧುರನು ತನ್ನನ್ನು 'ಭಾರತೀ ಮಾನಸ ಕೇಳಿ ರಾಜಹಂಸಂ ನೆಗಟ್ದನವನಿಯೊಳ್ ವಾಜಿ ವಂಶಾವತಂಸಂ' ಎಂದು ಪರಿಚಯಿಸಿಕೊಂಡಿದ್ದಾನೆ. [ಧರ್ಮನಾಥ ಪುರಾಣಂ, ೧-೭೯: (ಸಂ)ಯಂ.ಸಿ. ಪದ್ಮನಾಭಶರ್ಮ, ಜಿ. ಬ್ರಹ್ಮಪ್ಪ (೧೯೫೫) ಪು. ೧೨]. ಆಚಣ್ಣ ಕವಿಯೂ ಸಹ ಭಾರದ್ವಾಜ ಗೋತ್ರ ಸಂಜಾತನೆಂಬುದು ನೆನಪಾಗುತ್ತದೆ. [ಭಾರದ್ವಾಜ ಪವಿತ್ರಗೋತ್ರ ತಿಳಕಂ: ವರ್ಧಮಾನ ಪುರಾಣಂ, ೧-೨೪: (ಸಂ.) ತ.ಸು. ಶಾಮರಾಯ, ಪ. ನಾಗರಾಜಯ್ಯ (೧೯೭೫) ಪು. ೬.]

### ಅಜೈನ ವಾಜಿವಂಶ

ಇದುವರೆಗಿನ ವಾಜಿವಂಶಜರ ಇತಿವೃತ್ತವನ್ನು ಗಮನಿಸಿ ಈ ಕುಲವು ಶುದ್ಧಾಂಗವಾಗಿ ಒಂದು ಜೈನಮನೆತನವೆಂದು ತೀರ್ಮಾನಿಸುವುದಕ್ಕೆ ಮನಸ್ಸು ಮೂಡುವುದು ಸಹಜ. ಆದರೆ ಶಾಸನಗಳಲ್ಲಿ, ಜೈನೇತರ ಮಹಾಪುರುಷರು ಹಲವರು ಈ ವಾಜಿವಂಶ ಸಂಜಾತರೆಂಬ ವಿವರಗಳೂ ಇವೆ. ಇವುಗಳಲ್ಲಿ ಕೆಲವು ಅಜೈನ ವಾಜಿವಂಶ ತಿಳಕರನ್ನು ಪರಿಚಯಿಸುತ್ತೇನೆ.

ಈ ಸಂಪ್ರಬಂಧದಲ್ಲಿ ಈಗಾಗಲೇ ಪ್ರಸ್ತಾಪಿಸಲಾದ ರೋಣಶಾಸನೋಕ್ತನಾದ ಪಂಪಯ್ಯನನ್ನು ಕುರಿತು ವಿವೇಚಿಸುವಾಗ, ಆತನು ಜೈನ್ ಶಾಖೆಗೆ ಮತ್ತು ದಲ್ಲಪನ ಪೀಳಿಗೆಗೆ ಆದಿಪುರುಷ ಇರಬಹುದೆಂಬ ಸಂದೇಹದ ನೆಲೆಯ ಮಾತುಗಳನ್ನು ಬಳಸಲಾಗಿದೆ. ಏಕೆಂದರೆ ಆತನ ಜಾತಿ-ಧರ್ಮ ಸಂಬಂಧವಾದ ಸೂಚನೆಗಳು ಖಚಿತವಾಗಿಲ್ಲ. ಜೈನ ಶಾಖೆಯ ವಾಜಿವಂಶ ಇರುವಂತೆಯೇ ಶೈವಶಾಖೆಯ ವಾಜಿವಂಶವೂ ಶಾಸನೋಕ್ತವಾಗಿದೆ. ಅವುಗಳಲ್ಲಿ ಪ್ರಾಚೀನವಾದದ್ದು ಮಾಹಾರಾಷ್ಟ್ರದ ನಾಂದೇಡು ಜಿಲ್ಲೆಯ ದೇಗಲೂರು ತಾಲ್ಲೂಕಿಗೆ ಸೇರಿದ ತಡಕಲ್ಲು ಶಾಸನ. ಸಕ್ಕರೆಗೆ -೮೦ ರೊಳಗಣ್ ತಡಕಲ್ಲು ಗ್ರಾಮವನ್ನು ಕ್ರಿ.ಶ. ೧೦೪೯ ರಲ್ಲಿ

ಚಾಳುಕ್ಯ ಚಕ್ರವರ್ತಿ ತ್ರೈಲೋಕ್ಯಮಲ್ಲನು ತನ್ನ ಸೇನಾಧಿಪತಿ ದಂಡನಾಯಕ ನಾಗವರ್ಮಯ್ಯ ನಿಗೆ ವಿವಾಹ ಮಾಡಿ ಧಾರಾಪೂರ್ವಕವಾಗಿ ದಾನ ಕೊಟ್ಟನು. ಆ ನಾಗವರ್ಮಯ್ಯನ ಹಿರಿಯರು ಪ್ರಖ್ಯಾತರು. ಆ ಮಹಾನುಭಾವರ ವಂಶಾವತಾರವೆಂತೆಂದೊಡೆ:

ಸರಸೀರುಹೋದರನುದಾರಾಮಂ
ಬುರುಹದೊಳೊಗೆದಜನ ಕುಲದೊಳೊಗೆದರ್ ವಿಶ್ವಂ
ಭರೆಗೆ ವಶಿಷ್ಠರ್ ಮೈತ್ರಾ
ವರುಣಾರ್ ಕೌಂಡಿಣ್ಯರೆಂಬ ಮುನಿಗಣ ಮುಖ್ಯರ್ || ೭||

ಅವರೊಳ್ಕೌಂಡಿಣ್ಯಗೋತ್ರ ಪ್ರಭರವನಿಪಾಳಾರ್ಚ್ಚಿತರ್ವ್ವೇದವೇದಾಂ
ಗವಿದರ್ಪ್ರಾರಬ್ಧಹೋಮಾನಳಜ ಬಹಳಧೂಮಾವೃತಾಶಾಂತರಾಳ
ಪ್ರವಸ್ವಾಧ್ಯಾಯಶೀಳರ್ಸ್ಥಲೆ ಪಲರವನೀಖ್ಯಾತ ತದ್ವಾಜಿವಂಶಾ
ರ್ಣ್ನವದೊಳ್ ಶೀತಾಂಶುವೋಲ್ಪುಟ್ಟಿದನಭಿನುತನಾದಿತ್ಯನಾದಿತ್ಯತೇಜಂ ||೮||

ಶ್ರೀಗಂ ರಾಜ್ಯವಿಭೂತಿಗಂ ನೆಲೆಯೆನಿಪ್ಪಾತ್ಮೀಯ ಮಾಣಿಕ್ಯ ಭಾಂ
ಡ್ಡಾಗಾರಂ ಮೊದಲಾಗೆ ಮಿಕ್ಕ ಬೆಸನಂ ತ್ರೈಲೋಕ್ಯಮಲ್ಲಂ ಜಯ
ಶ್ರೀಗೇಹಂ ಕುಡೆ ಪೆತ್ತ ಶೌಚಗುಣದಕ್ಷಂ ಸ್ವಾಮಿಭಕ್ತಂ ಯತ
ಶ್ರೀಗಾವಾಸಮೆನಲ್ಕೆ ಸಂದ ನರರಾರ್ ಶ್ರೀ ನಾಗವರ್ಮ್ಮಂಬರಂ || ೧೨ ||

ಎನಗೀತಂ ಯುದ್ಧದೊಳ್ ದಕ್ಷಿಣವಿಜಯಭುಜಾದಣ್ಡಮೆಂದರ್ಕ್ಕಜೆಂದಾ
ಳ್ದನೃಪಂ ತ್ರೈಲೋಕ್ಯಮಲ್ಲಂ ಕುಡೆ ಚಮರರುಹಚ್ಛತ್ರತೂರ್ಯ್ಯಾವಳೀ ನಿ
ಸ್ವನ ನಾನಾ ಕೇತನಾಳಂಕೃತಮನಸಮದಣ್ಡಾಧಿ ನಾಥತ್ವಮಂ ಪೆ

ತ್ರನೆಜೇಯಂ ನಾಗವರ್ಮ್ಮಂ ಸ್ಫುರದಸಿದಳಿತೋಗ್ರಾಸುಹಿರ್ನ್ನಾಗವರ್ಮ್ಮಂ ||೧೩||

[ಈ ಶಾಸನದ ಒಕ್ಕಣೆಯ ನಿರೂಪಣೆಯಲ್ಲಿ ಉದ್ದಕ್ಕೂ ಲಕ್ಕುಂಡಿಯ ಶಾಸನದ ಪಾಠವನ್ನೂ, ದಲ್ಲಪ–ನಾಗದೇವರೊಂದಿಗೆ ಸಮೀಕರಣ ಧ್ವನಿ ಇರುವುದನ್ನೂ ತೌಲನಿಕ ಅಧ್ಯಯನದಿಂದ ಮನಗಾಣಬಹುದು. ದಲ್ಲಪನು ತನ್ನ ಬಲ್ಲಾಳ್ತನದಿಂದ ಅಹವಮಲ್ಲ (ತೈಲಪ) ಭುಜಾದಂಡನೆನಿಸಿದ್ದನು; ಈ ನಾಗವರ್ಮನು ತ್ರೈಳೋಕ್ಯಮಲ್ಲನ ವಿಜಯಭುಜಾ ದಂಡವೆನಿಸಿದ್ದಾನೆ.]

ಕೌಂಡಿಣ್ಯಗೋತ್ರ ಪ್ರಭಾವದವರು ವಾಜಿವಂಶಾವರ್ಣವದಲ್ಲಿ ಹುಟ್ಟಿದರು. ಆದಿತ್ಯನೂ, ಆತನ ಮಗ ಗೋವಿಂದನೂ, ಆತನ ಸೂನು ನಗಾದಿತ್ಯನೂ, ಆತನ ಅನುಜರಾದ ಕಾಳಿದಾಸ, ನಾರಾಯಣ, ಅಯ್ಚಪಾರ್ಯರೂ ಖ್ಯಾತನಾಮರು. ಇವರಲ್ಲಿ ನಾರಾಯಣ ಮತ್ತು ಸಾಯಿಕಬ್ಬೆ ದಂಪತಿಗಳಿಗೆ ನಾಗವರ್ಮ ಮತ್ತು ಮಾದಿರಾಜರು ದಂಡಾಧೀನಾಥನಾಗಿ ಯುದ್ಧಗಳಲ್ಲಿ ತ್ರೈಳೋಕ್ಯಮಲ್ಲನಿಗೆ ದಕ್ಷಿಣ ವಿಜಯ ಭುಜಾದಂಡವೆನಿಸಿದ್ದನು. ವಾಜಿ ವಂಶಾಂಬರ ಹಿಮಕಿರಣನಾದ ನಾಗವರ್ಮನು ಭೃತ ಚಿಂತಾಮಣಿಯಾಗಿದ್ದನು. ಈತನ ಮಗ ನಾರಾಯಣ ೨ ವಾಜಿ ಕುಳತಿಳಕನಾದ ನಾಗವರ್ಮನು, ಮಹಾಪ್ರಚಣ್ಡ ದಣ್ಡನಾಯಕನಾಗಿದ್ದುದಲ್ಲದೆ, ಮಹಾಸಾಮನ್ತಾಧಿ ಪತಿಯೂ ಆಗಿದ್ದನು. ಈತನು ಕಾಳಾಮುಖ ಸೋಮೇಶ್ವರ ಚಕ್ರವರ್ತಿಗೆ ನಾಗವರ್ಮ್ಮನು ಸವಲಕ್ಕೆ (ಸಪಾದಲಕ್ಷ ಕ್ಷಿತಿಪ್ರದೇಶ ೧ ೧/೪ ಲಕ್ಷ ಹಳ್ಳಿಗಳ ವಲಯ) ಮತ್ತು ಸೇವುಣದೇಶಗಳನ್ನು ಸ್ವಾಧೀನಪಡಿಸಿಕೊಟ್ಟನು. ನಾಗವರ್ಮನು ತನ್ನ ತಂದ್ಗೆ ನಾರಾಯಣ ದೇವರನ್ನೂ, ತಾಯಿಗೆ ಆದಿತ್ಯ ದೇವರನ್ನೂ, ಕಿಱಿಯಯ್ಯನಿಗೆ (ಚಿಕ್ಕಪ್ಪ) ಆಯ್ಚೇಶ್ವರ ದೇವರನ್ನೂ, ತನ್ನ ಹೆಸರಲ್ಲಿ ನಾಗೇಶ್ವರ ದೇವರನ್ನೂ, ತನ್ನ ಹೆಂದತಿಯ ಹೆಸರಲ್ಲಿ ಸರಸ್ವತಿ ಮಂಟಪವನ್ನೂ, ಮಗನಿಗೆ ಭೈರವ ದೇವರನ್ನೂ, ತಂಗಿಗೆ ಮಲ್ಲಿಕಾರ್ಜುನ ದೇವರನ್ನೂ, ಬೇರೆ ಬೇರೆ

ದೇವಾಲಯಗಳನ್ನೂ ಮಾಡಿಸಿದನು. ಈತನ ಸಾಹಸವನ್ನು ಶಾಸನ ತುಂಬ ಪರಿಣಾಮಕಾರಿಯಾಗಿ ಕಂಡರಿಸಿದೆ. ಮಾದರಿಯಾಗಿ ಮೂರು ಪದ್ಯಗಳನ್ನು ಉದಾಹರಿಸುತ್ತೇನೆ.

ಕರಮಿದಸಾಧ್ಯವೆಂಬ ಕೊಳನಂ ಭುಜಗರ್ಬ್ಬದೆ ಕೊಂಡನುಗ್ರಸಂ
ಗರಜಯಿ ನಾಗವರ್ಮ್ಮವಿಭು ಸಾಧಿಸಿದಂ ಸವಲಕ್ಕೆ ವಿಂಧ್ಯಮಂ
ಪರಿವರಿದೆಯ್ದಿ ವಿಂಧ್ಯಪತಿಮಲ್ಲನನಾಜಿಯೊಳಾಂತು ಕೊಂದನಾ
ದ್ದುರ್ದ್ಧರಿಪಿದನೊಂದೆ ಕೊಳ್ಳಿಯೊಳೆ ಸೇವುಣದೇಶಮನೇಂ ಪ್ರತಾಪಿಯೋ || ೧೪ ||

ಬಗೆದೊಂ ಪೇಳದೊಡೇನು ವೈರಿನೃಪಸರ್ಬ್ಬಸ್ವಂಗಳು ತಂದು ಚ
ಕ್ರಿಗೆ ಗೊಟ್ಟಂಕದ ನಾಗವರ್ಮ್ಮನಳವಂ ಬೆಟ್ಟಾದವೇಂ ಬೊನ್ನರಾ
ಶಿಗಳೇಂ ಪೇಳವೇ ರತ್ನಭೂಷಣಂಗಳ್ ಪೇಳವೇ ವಾಜಿರಾ
ಜಿಗಳೇಂ ಪೇಳವೇ ಗಂಧಸಿಂಧುರಘಟಾನೀಕಂಗಳೇಂ ಪೇಳವೇ || ೧೬ ||

ಮನಮೊಲ್ದಾಗ್ಗೀರ್ಣಯನಾರಿಂ ಪೊಗಳಿಸನವನೀ ಮಂಡನಂ ವೀರಲಕ್ಷ್ಮೀ
ಸ್ತನಹಾರಂ ವಾಜಿ ವಂಶಾಂಬರ ಹಿಮಕಿರಣಂ ಸತ್ಯರಾಧೇಯನೌದಾ
ರ್ಯ್ಯನಿಧಾನಂ ಭೃತ್ಯ ಚಿಂತಾಮಣಿಯೆನಿಸಿದ ಪೆಂಪಿಂ ಯಶಃ ಶ್ರೀನದೀನ
ರ್ತ್ತನ ನಾನಾ ನಾಟ್ಯರಂಗೀಕೃತ ವಿಬುಧಯಶಃ ಪ್ರಾಂಗಣಂ ನಾಗವರ್ಮ್ಮಂ || ೧೭ ||

**[Inscriptions from Nanded District, No. 3.1047, Tadkhel, Deglur Taluk,pp. 5-11]** ನಾಗದೇವನು ವಾಜಿಕುಳಕ್ಕೆ ಹೊಳೆಯುವ ಸೂರ್ಯ (ತೇಜೋಭಾಸ್ಕರ) ಆಗಿದ್ದನು. ಈ ನಾಗವರ್ಮನು ವಾಜಿವಂಶಾಂಬರಕ್ಕೆ ಚಂದ್ರನಾಗಿದ್ದನು: ಆತ ನನ್ನಿಮಹಾರ್ಣವನು, ಈತ ಸತ್ಯ ರಾಧೇಯನು: ಇಬ್ಬರೂ ಮಹಾಶೂರರು.

ಅದೇ ನಾಂದೇಡ ಜಿಲ್ಲೆಯ ದೇಗಲೂರು ತಾಲ್ಲೂಕು ಬಿಮಾರ ಗ್ರಾಮದ ಶಾಸನದಲ್ಲಿ ಮತ್ತೊಂದು ಈ ವಾಜಿ ವಂಶಕ್ಕೆ ಸೇರಿದ ಕುಟುಂಬದ ಚಿತ್ರಣವಿದೆ. ತಡಕಲ್ಲು ಶಾಸನದಂತೆಯೇ ಈ ಬಿಮಾರದ ಶಾಸನವೂ ಆರಂಭದಲ್ಲಿ ಚಾಳುಕ್ಯರ ವಂಶವೃಕ್ಷವನ್ನು ಕೊಟ್ಟಿದೆ. ಅನಂತರ ಚಾಳುಕ್ಯಾಭರಣ ತ್ರಿಭುವನಮಲ್ಲದೇವ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ಕಟ್ಟಕಡೆಯ ಘಟ್ಟದಲ್ಲಿ ಇದ್ದ ವಾಜಿವಂಶದ ಕುಟುಂಬವನ್ನು ಪರಿಚಯಿಸಿದೆ. ಆ ಕಾಲದ ರೇವಣಯ್ಯನ ಮಗ, ವಾಜಿಕುಳಾಲಂಕಾರ ಎಂದು ಸ್ತುತಿಸಲ್ಪಟ್ಟ ಮತ್ತು ಗೌರವಿಸಿದ ಕಬ್ಬಿಗರ ಮಗನಾದ ರೇವಣಯ್ಯನಾಯ್ಕನು ಉತ್ಕೃಷ್ಟ ವಾಜಿ ವಂಶೋದಯಕ್ಕೆ ದ್ಯುಮಣಿಯೆನಿಸಿದನು. ರೇವಣಯ್ಯನಾಯ್ಕನು ಪವಿತ್ರವಾದ ತೊಟ್ಟ ಮುದ್ರಿಕೆಯ ಪಕ್ಕದ ಕೇವಣದಂತೆ ಇದ್ದನು. ಈತನು ಪ್ರಭುತ್ವದ ಕಲ್ಲಕುಂಬರಿ ಗ್ರಾಮದಲ್ಲಿ ಚಂದ್ರಶೇಖರನಾದ ಈಶ್ವರನನ್ನು ಪ್ರತಿಷ್ಠಿಸಿದನು.

ರೇವಣಯ್ಯನಾಯ್ಕ ಮತ್ತು ನಾಲಿಕಬ್ಬೆ ದಂಪತಿಗಳಿಗೆ ದೇವಪಾರ್ಯ, ಮಧುಸೂದನ, ನಾಗರಾಜ, ರಾಮದೇವ, ಗೋವಿಂದ ಎಂಬ ಅಯ್ವರು ಮಗಂದಿರು.

ಅವರೊಳಗೆ ನಾಗರಾಜಂ
ನವೀನಮನಿವೆನಿಸಿ ಧರ್ಮ್ಮಪರರೆನಿಸಿ ಬುಧಾ
ರ್ಣವ ಚಂದ್ರನೆನಿಸಿ ವಾಜಿ

ಪ್ರವರೋತ್ತಮನೆನಿಸಿ ಧನ್ಯನೆನಿಸಿದನಲ್ತೆ || ೨೯ ||

ರೂಢಿಗೆ ಸಂದ ಧರ್ಮ್ಮಮನೆ ತಂದೆ ಚಿರ ಪ್ರತಿಷ್ಠೆಯಂ
ಮಾಡಿದ ರೇವಣೇಶ್ವರ ನಿವಾಸಮನೊಪ್ಪಿರೆ ಮಾಡಿ ಕೂಡೆ ನಾ
ಡಾಡಿಗಳುಂಬಮಾದದೆನೆ ಪೆರ್ಮ್ಮೆಯನಾರ್ಜ್ಜಿಸಿ ವಾಜಿ ವಂಶದ
ಚ್ಚಾಡುವಿನಂ ಬಸಂಬಡೆದನೆಂಬುದು ಧಾರಿಣಿ ನಾಗರಾಜನ (೦) || ೩೨ ||

ಹೀಗೆ– 'ವಾಜಿವಂಶ ಪ್ರಯುಕ್ತಾಶ್ರಯವಾದ ಖ್ಯಾತಿ ತನ್ನೊಳ್ ನಿಲೆ ಇಳಾ ಭಾಗದೊಳ್ ನೆಗಳ್ದ ನಾಗರಾಜ'ನು ಮಾಡಿಸಿದ ರೇವಣೇಶ್ವರ ದೇವಾಲಯಕ್ಕೆ ನೃಪಾಂಗನೆ ಸುಗ್ಗಲ ದೇವಿಯ ಕ್ರಿ.ಶ. ೧೧೨೨–೨೩ ರಲ್ಲಿ ೧೫ ಮತ್ತರು ನೆಲವಿತ್ತಳು, ಅಮರಾವತೀ ಪುರವರೇಶ್ವರ ಮಹಾಮಂಡಳೇಶ್ವರ ಎಱೆಯಮರಸನು ನಾಗರಹಾಳ ಗ್ರಾಮವನ್ನು ಸರ್ವ್ವನಮಶ್ಯಮಾಗಿ ಬಿಟ್ಟನು.

**[Inscriptions of Nanded District, No. 2,1122-23. Bimara, Deglur Taluk, pp. 38-45].**

ಙ್ಞ್ ಮೇಲ್ಕಂಡ ವಾಜಿ ವಂಶಜರು ಚಾಳುಕ್ಯ ಚಕ್ರವರ್ತಿಗಳಲ್ಲಿ ಅಧಿಕಾರಿಗಳಾಗಿದ್ದ ವರು, ತಮ್ಮ ರಾಜನಿಷ್ಠೆ ಹಾಗೂ ಕ್ಷಾತ್ರೋಚಿತ ಯುದ್ದ ನೈಪುಣ್ಯ ತೋರಿ ದೇಶ ಭಕ್ತಿಯನ್ನು ಪ್ರಕಟಿಸಿದವರು. ಇವರಲ್ಲದೆ ಇನ್ನೂ ಕೆಲವು ವಾಜಿ ವಂಶಜರು ಕಂಡು ಬರುತ್ತಾರೆ. ಅರಸೀಕೆರೆಯ ೭೧ ನೆಯ ಶಾಸನವನ್ನು ಬರೆದಿರುವ ದೇವಪಾರ್ಯನೆಂಬುವನು ಲೋಕಸ್ತುತಿಗೆ ಪಾತ್ರವಾದ ವಾಜಿವಂಶಕ್ಕೆ ಸೇರಿದವನೆಂದು ತಿಳಿದುಬರುತ್ತದೆ:

ಭುವನನುತ ವಾಜಿವಂಶೋ

ದ್ಭವಕರ ವಿಭು ಸೋಮನಾಥ ಪುತ್ರಂ ಪೇೞ್ದಂ
ಕವಿರಾಜಂ ಕಾಶ್ಯಪಗೋ
ತ್ರವರ್ಧನಂ ದೇವಪಾರ್ಯನೀ ಶಾಸನಮಂ ||

[ಎ.ಕ. ೫, ೭೧.೧೧೭೪. ಅರಸೀಕೆರೆ]. ಈತನು ತನ್ನನ್ನು ಕವಿರಾಜನೆಂದು ಕರೆದು ಕೊಂಡಿರುವನಾದರೂ ಈತನ ಕಾವ್ಯಗಳ ವಿಚಾರ ಏನೇನೂ ತಿಳಿಯದು.

ಕಡೂರು ಶಾಸನದ ಕವಿ ನಾಗದೇವನು ತನ್ನನ್ನು ವಾಜಿ ವಂಶದ ಕಾಶ್ಯಪಗೋತ್ರ ವರ್ಧನನೆಂದೂ, ಹರಿಹರ–ಮಾಯಿದೇವಿಗಳ ಪುತ್ರನೆಂದೂ ನಿವೇದಿಸಿಕೊಂಡಿದ್ದಾನೆ:

ಹರಿಹರ ಮಾಯಿದೇವಿಗಳ ಪುತ್ರನನಿಂದಿತ ವಾಜಿವಂಶ ಶೇ
ಖರನಕಳಂಕಕೀರ್ತಿ ಕಲಿಕಾಲ್ ಬೃಹಸ್ಪತಿ ಸೋಮನಾಥ ಶಂ
ಕರನನುಜಂ ಬುಧರ್ ಪೊಗೞೀ ನಿರ್ಮಿಸಿದಂ ಕವಿನಾಗದೇವನೀ
ಸ್ಥಿರತರಮಪ್ಪ ಶಾಸನಮನುತ್ತಮ ಕಾಶ್ಯಪಗೋತ್ರ ವರ್ಧನಂ ||

[ಎ.ಕ.೬, ಕಡೂರು ೯೫ ಕ್ರಿ.ಶ. ೧೨೨೪: ಕರ್ಣಾಟಕ ಕವಿಚರಿತೆ, ಸಂಪುಟ ೧(೧೯೬೩) ಪು. ೪೦೦.] ನಾಗದೇವಕವಿ ಶೈವಸ್ಮಾರ್ತನೆಂದು ತೋರುತ್ತದೆ.

ಇದೇ ರೀತಿ ಇನ್ನೂ ಕೆಲವು ವಾಜಿ ವಂಶೋಲ್ಲೇಖಗಳನ್ನು ಉದಾಹರಿಸಬಹುದು

೧. ಕ್ರಿ.ಶ. ೧೧೭೮ ರಲ್ಲಿ ಮಾಚಿರಾಜ (ಮಾಚಿ ಪ್ರಭು) ನೆಂಬ ದಂಡಾಧಿಕಾರಿ ವಾಜಿ ವಂಶ ಖ್ಯಾತನಾಗಿದ್ದನು.

೨. ಬ್ರಹ್ಮವಂಶೋದ್ಭವನುಂ ವಾಜಿಕುಳಾಂಬರರಾಜ ಚಲದಂಕರಾಮನು ಶ್ರೀಮಾನ್ ನಾಳ್ಪ್ರಭು ದುಗ್ಗತಿಯರೊಡೆಯ ಬ್ರಹ್ಮ ದೇವಯ್ಯ ನಾಕಯರು [ಸೌ.ಇ.ಇ. ೯–೧, ೨೧೫. ೧೧೨೬. ದುಗ್ಗವತ್ತಿ. (ಬಳ್ಳಾರಿಜಿ./ಹರಪನಹಳ್ಳಿತಾ.) ಪು. ೨೧೮].

೩. ಶ್ರೀಮನ್ ಮಹಾ ಪ್ರಧಾನಂ ರಾಯದಂಡಾಧಿಕಾರಿ ಚವುಡಿ ಸೆಟ್ಟಿಯರ ಶ್ರೀಕರಣ ವಾಜಿವಂಸಲಲಾಮ ಹಗರಟ್ಟಗೆಯ ಹರಿಯಣ್ಣಂಗಳ ಮಗಂ ಸಿರಿಪಯ್ಯನು ಧರ್ಮಕಥಾಸಂಗವ್ ಮಾಡಿದ ಸಂಗತಿ ಶಾಸನದಲ್ಲಿದೆ [ಸೌ.ಇ.ಇ. ೧೫, ೧೮೮. ೧೨೫೧. ಸಾಲವಾಡಿಗಿ (ಬಿಜಾಪುರ ಜಿ/ಬಾಗೇವಾಡಿತಾ) ಪು. ೨೩೧. ಸಾಲು: ೨೫–೨೮]

೪. ಹೊಯ್ಸಳ ಇಮ್ಮಡಿ ವೀರನರಸಿಂಹನಲ್ಲಿ ಮಹಾಪ್ರಧಾನನೂ ದಂಡನಾಯಕನೂ ಆಗಿದ್ದ ಶೈವ ಬ್ರಾಹ್ಮಣ ಅಮಿತಯ್ಯನ ವಿಸ್ತಾರವಾದ ಲಕ್ಷ್ಮೀಧರದೇವ ವೀರಲಕ್ಷ್ಮೀ ವಿಳಾಸಾವಾಸ ಪ್ರಧಾನ ಕರಿಕಳಭ ಯೂಥನಾಥ ಶ್ರೀಮದಮೇಶ್ವರದೇವರ ಕೀರ್ತ್ತಿನರ್ತ್ತಕೀ ನರ್ತ್ತನ ವಿಶಾಳ ರಂಗ ಸಕಳಕುಳ ರಾಜಿತ ವಾಜಿವಂಶಚೂಡಾಮಣಿ ವಾಮರಾಜ ಪ್ರಿಯ ತನೂಜಾತ ರೂಪು ರೇಖೆ ಥಾಪನೆ ಬಯ್ಸಿಕೆ ತೊಡೆ ಮಡಕಯ್ದುನಿಯೆಂಬ ಚಡಾಯತಿಕೆ ಗಾಯತಿಕೆ ವಡೆದರೂಢ ವಿದ್ಯಾವಿಳಾಸ. . . . . .[ಸೌ.ಇ.ಇ. ೯–೧, ೩೪೩. ೧೨೨೬. ಬೆಣ್ಣೆಕಲ್ಲು (ಬಳ್ಳಾರಿಜಿ/ಕೂಡ್ಲಿಗಿ ತಾ) ಪು. ೩೬೨– ೬೪]

ತೀರ್ಮಾನಗಳು

ವಾಜಿ ವಂಶದ ಪ್ರಸ್ತಾಪ ಹಲವು ಶಾಸನಗಳಲ್ಲಿದೆ, ಕಾವ್ಯಗಳಲ್ಲಿದೆ, ಕಾವ್ಯಗಳಲ್ಲಿದೆ, ಇವೆಲ್ಲ ಒಂದೇ ಕಾಲಘಟ್ಟದ ಚೌಕಟ್ಟಿಗೆ ನಿಲ್ಲುವುದಿಲ್ಲ. ಇವುಗಳ ಪರಸ್ಪರ ಸಂಬಂಧ ಸ್ಥೂಲವಾಗಿ ತಿಳಿದುಬರುತ್ತದೆ. ಸೂಕ್ಷ್ಮವಾದ ಅಧ್ಯಯನಕ್ಕೆ ಇಳಿದಾಗ ಕೆಲವು ಕಡೆ ಸ್ಪಷ್ಟವಾಗುವುದಿಲ್ಲ. ಈ ವಾಜಿ ವಂಶದಲ್ಲಿ ಕೌಂಡಿನ್ಯಗೋತ್ರ, ಕಾಶ್ಯಪಗೋತ್ರ, ಭಾರದ್ವಾಜಗೋತ್ರ, ಮಾಂಧಾತಗೋತ್ರ– ಎಂಬ ಗೋತ್ರಗಳ ಉಲ್ಲೇಖಗಳಿವೆ. ವಾಜಿ ವಂಶೇತರ ವಂಶಗಳಲ್ಲಿಯೂ ಈ ಗೋತ್ರಗಳಿದ್ದುವು. ಜನ್ಮ

ಕವಿ ತಾನು ಕಮ್ಮೆ ವಂಶದ ಕಾಶ್ಯಪ ಗೋತ್ರದವನೆಂದು ಹೇಳಿಕೊಂಡಿದ್ದಾನೆ. [ಅನಂತನಾಥ ಪುರಾಣಂ, ೧–೫೨: (ಸಂ) ಬಿ.ಬಿ. ಮಹೀಶವಾಡಿ (೧೯೭೫) ಪು. ೧೨.] ಈ ಸಂಪ್ರಬಂಧದ ಪ್ರಾರಂಭದಲ್ಲಿ ವಾಜಿ ವಂಶದೊಳಗೆ ಲೋಕ ವಿಖ್ಯಾತರಾದ ಜೈನ ಮತಾವಲಂಬಿಗಾಳನ್ನು ಪರಿಚಯಿಸಿದೆ. ಬ್ರಾಹ್ಮಣ ಕವಿಗಳಲ್ಲಿ ಒಬ್ಬನೆಂದು ಭಾವಿಸ ಲಾಗಿರುವ ಚಂದ್ರರಾಜನು (ಸು.೧೦೨೫) ವಾಜಿ ಗೋತ್ರಕ್ಕೆ ಸೇರಿದವನು. ಮದನ ತಿಲಕವೆಂಬ ಕಾವ್ಯದಲ್ಲಿ ಚಂದ್ರರಾಜನು ತನ್ನನ್ನು ವಿಪ್ರಕುಲಲಾಮನೆಂದೂ ದ್ವಿಜಾಂಭೋಧಿರಾಜನೆಂದೂ, ಮನುಮುನೀಂದ್ರಾಚಾರ ನೆಂದೂ ಪರಿಚಯಿಸಿ ಕೊಂಡಿದ್ದಾನೆ.

ಶಾಸನಗಳ ಸಹಾಯದಿಂದ ಉಪಲಬ್ಧವಾಗಿರುವ ಇದುವರೆಗಿನ ವಿವರಗಳನ್ನು ಹರಳುಗೊಳಿಸಿ ಕೆಲವು ತೀರ್ಮಾನಗಳಿಗೆ ತಲಪಬಹುದು.

೧. ವಾಜಿವಂಶವು ಮೂಲತಃ ಶೈವ ಸ್ಮಾರ್ತ ಜಾತಿಯಾಗಿದೆ.

೨. ಹತ್ತನೆಯ ಶತಮಾನದ ಆರಂಭದಿಂದ ವಾಜಿ ವಂಶದ ದಾಖಲೆಗಳು ದೊರೆಯುತ್ತವೆ.

೩. ವಾಜಿ ವಂಶದ ಮೂಲ ಸೆಲೆ, ತಲಕಾವೇರಿ ರೋಣದ ಪರಿಸರವೆಂದು ತಿಳಿಯಬಹುದು.

೪. ವೆಂಗಿ ಮಂಡಲ, ಗಂಗವಾಡಿ, ಸಾಂತಳಿಗೆ, ಮಾನ್ಯಖೇಟ, ಮಾಸವಾಡಿ, ರೋಣ, ನಾಂದೇಡು ಜಿಲ್ಲೆ– ಹಿಗೆ ಒಂದು ವಿಶಾಲ ಭೌಗೋಳಿಕ ಹರಹಿನಲ್ಲಿ ವಾಜಿವಂಶದ ಚಿಗುರು ಪಲ್ಲವಿಸಿ ದಾಂಗುಡಿಯಿಟ್ಟಿದೆ.

೫. ರಾಷ್ಟ್ರಕೂಟರು, ಚಾಳುಕ್ಯರು, ಕಲಚುರ್ಯರು, ಹೊಯ್ಸಳನು ಮತ್ತು ವಿಜಯನಗರ ಸಾಮ್ರಾಜ್ಯಗಳವರೆಗೆ ವಾಜಿವಂಶದ ರಾಜಕೀಯ ಪಾತ್ರ ಕಂಡು ಬರುತ್ತದೆ.

೬. ವಾಜಿ ವಂಶದ ಅನೇಕ ಗಣ್ಯಪುರುಷರ ಧಾರ್ಮಿಕ ಚಟುವಟಿಕೆಯೊಂದಿಗೆ ಅವರಿಗಿದ್ದ ಸಾಮಾಜಿಕ ಸ್ಥಾನಮಾನದ ಸ್ವರೂಪವೂ ತಿಳಿದು ಬರುತ್ತದೆ.

೭. ವಾಜಿ ವಂಶಜರು ಅನೇಕ ದೇವಾಲಯ ಕಟ್ಟಿಸಿದ್ದಾರೆ.

೮. ವಾಜಿ ವಂಶದಲ್ಲಿ ಚಮೂಪತಿಗಳೂ, ಮಂತ್ರಿಗಳೂ, ಭಂಡಾರಿಗಳೂ, ಬಾಹತ್ತರನಿಯೋಗ ಅಧಿಪತಿಗಳೂ ಕಂಡು ಬರುತ್ತಾರೆ. ಮತ್ತು ಅವರೆಲ್ಲ ರಣರಂಗದಲ್ಲಿ ಮಹಾ ಸಾಹಸ ತೋರಿದ ವೀರಕಲಿಗಳು; ವಾಜಿವಂಶಜರು ಸಾಮಂತ ಅಥವಾ ಮಾಂಡಲಿಕರಾಗಿ ರಾಜ್ಯ ಆಳಲಿಲ್ಲ.

೯. ವಾಜಿ ವಂಶದವರು ಘನ ವಿದ್ವಾಂಸರೂ ಹೌದು. ಅವರ ಕಲಾಪ್ರೇಮ ಮತ್ತು ಸಾಹಿತ್ಯ ಪ್ರೇಮವನ್ನು ನಿರೂಪಿಸುವ ದಾಖಲೆಗಳಿವೆ. ಅತ್ತಿಮಬ್ಬೆಯ ಎರಡೂ ಕಡೆಯ ಮನೆತನ ಕವಿಗಳಿಗೂ, ಪಂಡಿತರಿಗೂ ತವರು ಮನೆಯಾಗಿತ್ತು.

೧೦. ವಾಜಿ ವಂಶದ ಮಧುರ ಕವಿಯಂತೂ ಕನ್ನಡದ ಒಬ್ಬ ಮಹತ್ವದ ಕವಿಯಾಗಿ ಕಾವ್ಯ, ಶಾಸನ ಮತ್ತು ಗೊಮ್ಮಟ ಸ್ತುತಿ ಅಷ್ಟಕವನ್ನು ಬರೆದಿದ್ದಾನೆ; ಕನ್ನಡ ಸಾಹಿತ್ಯದಲ್ಲಿ ಗಣ್ಯನಾಗಿದ್ದನೆ.

೧೧. ವಾಜಿ ವಂಶದಲ್ಲಿ ಕಾಶ್ಯಪ ಗೋತ್ರ, ಕೌಂಡಿನ್ಯಗೋತ್ರ, ಭಾರದ್ವಾಜ ಗೋತ್ರ, ಹಾರೀತ ಗೋತ್ರ, ಸಾಂಖ್ಯಾಯನ ಗೋತ್ರ ಮತ್ತು ಮಾಧಾಂತ ಗೋತ್ರ–ಎಂಬ ಆರು ಗೋತ್ರಗಳಿದ್ದುವು. ಇವುಗಳಲ್ಲಿ ಪ್ರಸಾರದ ದೃಷ್ಟಿಯಿಂದ ಕೌಂಡಿನ್ಯಗೋತ್ರದವರು ವ್ಯಾಪಕವಾಗಿ ಕಾಣುತ್ತಾರೆ. ಕೌಂಡಿನ್ಯ ಗೋತ್ರದ ಪ್ರಾಚೀನತಮ ಉಲ್ಲೇಖವು ಬನವಾಸಿಯ ಕದಂಬರ ಶಿವಸ್ಕಂದವರ್ಮನ, ಕ್ರಿ.ಶ. ೩–೪ ನೆಯ ಶತಮಾನದ, ಮಳವಳ್ಳಿ (ಪಾಕೃತ) ಶಾಸನದಲ್ಲಿಯೇ ಸಿಗುತ್ತದೆ. **[Corpus of Kadamba Inscriptions (1985) No. 1.3.4 C.A.D. pp.3-7]** ಹೊಯ್ಸಳ ರಾಜ್ಯದ ಪ್ರಸಿದ್ಧ ಸೇನಾನಿಗಳಾದ ಗಂಗರಾಜ (ಎ.ಕ. ೧೧.೮೨ (೭೩) ೧೧೧೮ ಪು.೬೪) ಬೊಪ್ಪದೇವ ಪು. ೩೫೫. ಎ.ಕ.೯

(೧೯೯೦) ೩೮೯(೫ ಬೇ. ೧೨೪) ೧೧೩೩ ಬಸ್ತಿಹಳ್ಳಿ (ಹಾಜಿ) ಬೇ. (ಅದೇ: ೫೩೨ (೩೮೪) ೧೨ ಶ.ಪು. ೩೨೭) ಏಚಿರಾಜ (ಅದೇ:) ಡಾಕರಸ ಮತ್ತು ನಾಕಣದಂಡನಾಯಕ. ಮಱಿಯಾನೆ ದಂಡನಾಯಕ, ಭರತಿಮಯ್ಯ ದಂಡನಾಯಕ [ಎ.ಕ. ೭(೧೯೭೯) ನಾಮಂ ೭೨ (೪ ನಾಮಂ ೩೨) ೧೦೪೮–೧೧೦೩ ಮತ್ತು ೧೧೮೨–೮೩ ಮತ್ತು ಅಳೀಸಂದ್ರ (ಮಂಡ್ಯ ಜಿಲ್ಲೆ/ನಾಮಂತಾ) ಪು. ೫೬–೫೭] ಇವರೆಲ್ಲ ಕೌಂಡಿನ್ಯ ಗೋತ್ರಜರು ಪ್ರಯಾಗ ಮತ್ತು ಕೌಶಾಂಬಿ (ಕೌಸಮದ) ಹತ್ತಿರ ಇರುವ ಪಭೋಸಾ ಎಂಬಲ್ಲಿನ ಎರಡು ಗುಹೆಗಳಲ್ಲಿ ಕ್ರಿ.ಪೂ. ಎರಡನೆಯ ಶತಮಾನದ ಲಿಪಿಯ ಲೇಖವಿದೆ; ಈ ಶಾಸನದಲ್ಲಿ 'ಅಹಿಚ್ಛತ್ರದ ಆಷಾಢಸೇನನು ಕಾಶ್ಯಪೀಯ ಅರ್ಹಂತನಿಗಾಗಿ ಈ ಗುಹೆಗಳನ್ನು ದಾನಮಾಜಿದನು'– ಎಂದಿದೆ. ವರ್ಧಮಾನ ಮಹಾವೀರನು ಕಾಶ್ಯಪಗೋತ್ರದವ ನಾಗಿದ್ದನು. ಮಹಾವೀರನ ಶಿಷ್ಯ ಪರಂಪರೆಯ ಮುನಿಗಳು ಕಾಶ್ಯಪೀಯ ಅರ್ಹಂತರು [ಡಾ.ಹೀರಾ ಲಾಲ್ ಜೈನ್: ೧೯೭೧:೩೮೨]. ಮಹಾವೀರನ ತಂದೆ ಸಿದ್ಧಾರ್ಥನು ಕಾಶ್ಯಪಗೋತ್ರೀಯನು ಮತ್ತು ತಾಯಿ ಪ್ರಿಯಕಾರಿಣಿಯು ವಾಸಿಷ್ಠ ಗೋತ್ರದವಳು, ಈಕೆ ಚೇಟಕರಾಜನ ಮಗಳು [ಡಾ.ಕಮಲಾ ಹಂಪನಾ: ಅನೇಕಾಂತವಾದ : ೧೯೮೨];

ದುರಿತಕುಳಾಂತಕಂ ಚರಮತೀರ್ತ್ಥಕರಂ ವಿಭುವೀರನಾಥನೀ ಧರೆ ತಿಳಿವಂತು ಹೇಯಮಿದಹೆ . . . . ದುಸಮಸ್ತತತ್ವಮಂ ಪರಿವಿಡಿಯಿಂದೆ ಪೇಳ್ದು ಜನಮಂ ವರಮೋಕ್ಷ ಪಥಕ್ಕೆತಿರ್ದ್ದಿ ಬಿತ್ತರಿಸಿದ ಮುಕ್ತಿ ಕಾನ್ತೆಯ ಲತಾಂಗಮನಪ್ಪಿದ ನಿಂದ್ರ ವಂದಿತಂ| ಆ ನೆಗಳ್ದಂತೆ ಕಶ್ಯಪನಿನಾದುದು ಕಾಶ್ಯಪಗೋತ್ರಮೀಜನಂ ಜ್ಞಾನ ವಿಧಾನ ನಾಜಿನನ ಸದ್ಗುಣ ನಾಯಕರಗ್ರಿಮಾವಧಿಜ್ಞಾನಿಗಳಪ್ಪಗೌತಮ ಮುನಿ [ಎ.ಕ. ೮–೨ (೧೯೦೨) ಸೊರಬ. ೨೬೨.೧೦೭೫. ಕುಪ್ಪಟೂರು (ಶಿಜಿ/ಸೊರಬತಾ) ಪು. ೧೧೦. ಸಾಲು: ೩೧–೩೩]. ಈ ರೀತಿಯಲ್ಲಿ ಇಲ್ಲಿ ಬರುವ ಗೋತ್ರಗಳು ವೈದಿಕರಲ್ಲೂ, ಜೈನರಲ್ಲೂ ಪ್ರಾಚೀನ ಕಾಲದಿಂದ ಇವೆ.

೧೨. ವಾಜಿವಂಶವು ಪ್ರಧಾನವಾಗಿ ಮತ್ತು ಮೂಲತಃ ಬ್ರಾಹ್ಮಣ ಮನೆತನ. ಆದರೆ ಅದರಲ್ಲಿ ಎರಡು ಶಾಖೆಗಳಾದವು ; ಒಂದು ಬ್ರಾಹ್ಮಣರಾಗಿಯೇ ಉಳಿದು ಬಂದ ಶೈವಪಂಗಡೆ; ಇನ್ನೊಂದು ಜೈನರಾಗಿ ಮತಾಂತರ ಮಾಡಿದ ಜೈನ ಶಾಖೆ.

೧೩. ಜೈನ ವಾಜಿವಂಶದವರೂ, ಶೈವ ವಾಜಿವಂಶದವರೂ, ಕಲ್ಯಾಣ ಚಾಳುಕ್ಯ ಸಾಮ್ರಾಜ್ಯ ಪ್ರಬಲವಾಗಿ ಉಳಿದು ಬೆಳೆಯಲು ತುಂಬ ಸಹಾಯ ಮಾಡಿದ್ದಾರೆ. ಚಾಳುಕ್ಯ ಸೇನೆಯಲ್ಲಿ ವಾಜಿಕುಲದವರು ಚಮೂಪತಿಗಳಾಗಿ ಮುಂಚೂಣಿಯಲ್ಲಿದ್ದರು.

೧೪. ವಾಜಿವಂಶದಲ್ಲಿ ಕೌಂಡಿನ್ಯ ಗೋತ್ರದವರು ಹತ್ತನೆಯ ಶತಮಾನದ ವೇಳೆಗೇನೆ ಜೈನರಾಗಿ ಪರಿವರ್ತನಗೊಂಡಿದ್ದರು. ರೋಣ ಶಾಸನೋಕ್ತ ನಾದ ಪಂಪಯ್ಯನೂ ಈ ಪ್ರಕ್ರಿಯೆಯನ್ನು ಆರಂಭಿಸಿರಬಹುದು. ಪಂಪಯ್ಯನ ಹೆಸರನ್ನು ನೋಡಿದರೆ, ಕನ್ನಡದ ಆದಿಕವಿ ಪಂಪನ ನೆನಪು ಆಗುವುದು ಸಹಜ.

೧೫. ಪಂಪನ ತಂದೆ ಭೀಮಪ್ಪಯ್ಯನು ಜೈನನಾಗುವ ಮೊದಲು ಶೈವಸ್ಮಾರ್ತ ನಾಗಿದ್ದನು. ಪಂಪನ ಮೂಲ ಹೆಸರು ಪಂಪಯ್ಯ ಎಂದಿದ್ದಿರಬಹುದು. ಪಂಪನ ವತ್ಸ ಗೋತ್ರವೂ ಇದೇ ವಾಜಿ ವಂಶದ ಕುಡಿ ಇದ್ದಿರಬಹುದು; ಪಂಪನ ತಾತ (ತಾಯಿ ಅಬ್ಬಣಬ್ಬೆಯ ತಂದೆ) ಜೋಯಿಸಸಿಂಘನೂ ವಾಜಿವಂಶಜನೇ ಇರಬೇಕು. ಪಂಪನು ಶೈವ ಬ್ರಾಹ್ಮನ ಮೂಲದ ನಾದುದರಿಂದಲೇ ವಿಕ್ರಮಾರ್ಜುನ ವಿಜಯದಲ್ಲಿ ಶಿವನನ್ನು ತನ್ಮಯತೆ ಯಿಂದ ವರ್ಣಿಸಿದ್ದನೆ.

೧೬. ಚಾಳುಕ್ಯರ ವಿಕ್ರಮಾದಿತ್ಯ ೬ ರಾಜನ (೧೦೭೬-೧೧೨೫) ತರುವಾಯ ಜೈನವಾಜಿಕುಲ ಶಾಖೆಗಳವರು ಒಬ್ಬೊಬ್ಬರಾಗಿ ವಲಸೆ (ಗುಳೆ) ಹೋದರು. ಅವರಿಗೆ, ಚಾಳುಕ್ಯರಲ್ಲಿ ತಮಗೆ ನೆರಳು ಸರಿಯುತ್ತಿದೆಯೆಂಬ ಅನುಭವ ಮೂಡಿದುದೆ ಈ ಒಕ್ಕಲು ಹೋಗುವಿಕೆಗೆ ಮುಖ್ಯಕಾರಣ. ಅನ್ಯಾನ್ಯ ಪ್ರಬಲ

ಸುರಕ್ಷಿತ ಆಶ್ರಯಗಳನ್ನು ಅನ್ವೇಷಿಸಿದರು. ಚಾಳುಕ್ಯ ರಾಜಚ್ಛತ್ರದ ಅಡಿಯಲ್ಲೇ ಇದ್ದರು, ಅದರಿಂದ ಬಿಡಿಸಿಕೊಂಡು ಬಲಿಷ್ಠವಾಗುತ್ತಿದ್ದ ಹೊಯ್ಸಳ ಕುಲದ ಮಡಿಲಿಎಗೆ ಬಿದ್ದ ಮೊದಲ ವಾಜಿ ಕುಲಜರು ಜಕ್ಕರಾಜ, ರೇಚಣ ಮೊದಲಾದವರು.

೧೭. ಈ ಜೈನ ವಾಜಿವಂಶವು ಕನ್ನಡ ಸಾಹಿತ್ಯಕ್ಕೂ, ಕರ್ನಾಟಕದ ವಾಸ್ತು ಶಿಲ್ಪಕ್ಕೂ, ರಾಜಕೀಯ ಇತಿಹಾಸಕ್ಕೂ ಮಾಡಿರುವ ಮಹದುಪಕಾರವು ಉಲ್ಲೇಖಾರ್ಹವಾದದ್ದು, ಅವರ ಚರಿತ್ರಾರ್ಹ ಸಾಧನೆಗಳನ್ನು ಅತಿ ಸಂಕ್ಷೇಪವಾಗಿ ಹೀಗೆ ಹೇಳಬಹುದು.

೧. ಮಲ್ಲಪಯ್ಯ–ಪುನ್ನಮಯ್ಯ ಸೋದರರು ಪೊನ್ನಕವಿಯಿಂದ ಶಾಂತಿ ಪುರಾಣ ಕಾವ್ಯವನ್ನು ಬರೆಸಿದರು.

೨. ದಾನ ಚಿಂತಾಮಣಿ, ಕವಿವರ ಕಾಮಧೇನು ಅತ್ತಿಮಬ್ಬೆಯು ತನ್ನ ತಂದೆ ಮತ್ತು ಚಿಕ್ಕಪ್ಪ ಬರೆಸಿದ ಪೊನ್ನನ ಶಾಂತಿಪುರಾಣದ ಒಂದು ಸಾವಿರ ಓಲೆಗರಿ ಪ್ರತಿಗಳನ್ನು ಮಾಡಿಸಿ ಉಷಅವಾಗಿ ಹಂಚಿ ಶಾಸ್ತ್ರದಾನ ಮಾಡಿದಳು.

೩. ಅತ್ತಿಮಬ್ಬೆ ಮತ್ತು ಅಣ್ಣಿಗದೇವ, ತಾಯಿ–ಮಗ ಸೇರಿ ರನ್ನಕವಿಗೆ ಆಶ್ರಯ ನೀಡಿ ಅಜಿತ ಪುರಾಣ ಕಾವ್ಯವನ್ನು ಬರೆಸಿದರು.

೪. ಅಣ್ಣಿಗದೇವನು ರನ್ನನಿಂದ ಲಕ್ಕುಂಡಿಯ ಶಾಸನವನ್ನು ಬರೆಸಿದನು.

೫. ಅತ್ತಿಮಬ್ಬೆ ೧೫೦೧ ಜಿನಗೃಹಗಳನ್ನೂ, ೧೫೦೦ಜಿನಬಿಂಬಗಳನ್ನೂ, ಮಂದಾಸನ ಜಯಘಂಟೆ ಮಣಿ ತೋರಣಗಳನ್ನೂ ಮಾಡಿಸಿದಳು.

೬. ಅತ್ತಿಮಬ್ಬೆಯು ಕವಿಗಳಿಗೇ ಅಲ್ಲದೆ ಕಥಕರಿಗೆ, ಗಾಯಕರಿಗೆ, ವಾದಕರಿಗೆ, ನಗ್ನರಿಗೆ, ಭಗ್ನರಿಗೆ, ಅನಾಥರಿಗೆ, ಶಿಷ್ಟರಿಗೆ, ನಟರಿಗೆ– ಹೀಗೆ ನಾನಾ ವೃತ್ತಿಕಲಾವಿದರಿಗೆ ಉದಾರ ಆಶ್ರಯ ನೀಡಿ, ಕಲಾವಿದರ ಬಾಳಿಗೆ ಅಭಿಲಷಿತ–ದಾನ–ವಿನೋದೆ ಎಂದೆನಿಸಿದಳು.

೭. ಕನ್ನಡನಾಡಿನ ಪ್ರಥಮ ಅಧಿಕೃತ ವೀರವನಿತೆ ಅತ್ತಿಮಬ್ಬೆ; ಯುದ್ಧದಲ್ಲಿ ಭಾಗವಹಿಸಿ ಶತ್ರುಸೈನ್ಯವನ್ನು ಸೋಲಿಸಿ ತನ್ನ ಕಡೆಯ ಭಟರನ್ನು ಕಾಪಾಡಿಸಿ ಸಾಹಸಿ ಅತ್ತಿಮಬ್ಬೆ.

೮. ದಲ್ಲಪಯ್ಯ, ನಾಗದೇವ, ಅಣ್ಣಿಗದೇವ–ಕರ್ನಾಟಕದ ಪ್ರಸಿದ್ಧ ಚಾಳುಕ್ಯ ಚಕ್ರಾಧಿಪತ್ಯಕ್ಕೆ ಸುಸ್ಥಿರವಾದ ಅಸ್ತಿಭಾರ ಹಾಕಿದರು.

೯. ದಂಡನಾಯಕ ಕಾಳಿಮಯ್ಯನು ಜಿನಾಲಯ ಕಟ್ಟಿಸಿದನು.

೧೦. ದಣ್ಡನಾಯಕ ರೇಚಣನು ಜಿನಗೃಹಗಳನ್ನು ಕಟ್ಟಿಸಿದನು; ಆಚಣ್ಣಕವಿಗೆ ನೆರವು ನೀಡಿ ವರ್ಧಮಾನ ಪುರಾಣ ಕಾವ್ಯವನ್ನು ಬರೆಸಿದನು; ಜೈನ ಧಮಕ್ಕೆ ರೇಚಣನು ಮರುಹುಟ್ಟು ಕೊಟ್ಟನು.

೧೧. ಭಂಡಾರಿ ಹುಳ್ಳನು ಹಳೆಯ ಜಿನಾಲಯಗಳನ್ನು ಜೀರ್ಣೋದ್ಧಾರ ಮಾಡಿದ್ದಲ್ಲದೆ ಹೊಸ ಬಸದಿಗಳನ್ನು ಕಟ್ಟಿಸಿದನು.

೧೨. ವೈದಿಕ ವಾಜಿವಂಶದವರಲ್ಲಿ ಪ್ರಮುಖರು ನೀಡಿದ ಕೊಡುಗೆಯೂ ಗಣನೀಯ ಪ್ರಮಾಣದಲ್ಲಿದೆ.

೧. ತೈಲಪ–ಇರಿವಬೆಡಂಗ ಸತ್ಯಾಶ್ರಯ ಚಕ್ರವರ್ತಿಗಳಿಗೆ ದಲ್ಲಪ, ನಾಗದೇವ, ಅಣ್ಣಿಗದೇವ ನೀಡಿದ ಭುಜಬಲ ಚರಿತ್ರೆಯಲ್ಲಿ ಪ್ರಾಮುಖ್ಯಪಡೆದಿದೆ. ವೈದಿಕ ವಾಜಿಕುಲಜರಾದ ಮಾದಿರಾಜ (ಮಾಧವ) ಮತ್ತು ನಾಗವರ್ಮರು ತ್ರೈಲೋಕ್ಯಮಲ್ಲ ಸೋಮೇಶ್ವರನ ಅಧಿಕಾರಿಗಳಾಗಿ ಆನೆಬಲ–ಸಿಂಹಬಲ ನೀಡಿದರು. ನಾಗವರ್ಮನಂತೂ ಚಾಳುಕ್ಯರಾಜ್ಯ ವಿಭೂತಿಗೆ ನೆಲೆಯಾಗಿದ್ದನು:

ಎನಗೀತಂ ಯುದ್ಧದೊಳ್ ದಕ್ಷಿಣವಿಜಯ ಭುಜಾದಣ್ಡಮಂದರ್ಕ್ಕಜಿಂದಾ
ಳ್ದನೃಪಂ ತ್ರೈಲೋಕ್ಯಮಲ್ಲಂ ಕುಡೆ ಚಮರರುಹಚ್ಛತ್ರತೊರ್ಯ್ಯಾವಳೀ ನಿ
ಸ್ವನ ನಾನಾ ಕೇತನಾಳಂಕೃತಮನಸಮ ದಣ್ಡಾಧಿನಾಥತ್ವಮಂ ಪೆ

ತ್ರನಜೇಯಂ ನಾಗವರ್ಮಂ ಸ್ಫುರದಸಿದಳಿತೋಗ್ರಾಸುಹಿರ್ನಾಗವರ್ಮ್ಮ (೦) ||

ಆ ನಾಗದೇವನು ತೈಲಪನಿಗೆ ಅನೇಕ ವಿಜಯಗಳನ್ನು ತಂದುಕೊಟ್ಟನು; ಈ ನಾಗವರ್ಮನು ತ್ರೈಲೊಕ್ಯಮಲ್ಲನಿಗೆ ನಾನಾ ಗೆಲುವುಗಳ ಸರಮಾಲೆ ಹಾಕಿದನು; ಅವುಗಳಲ್ಲಿ ಸವಲಕ್ಕೆಯನ್ನು (ಪಂಪನ ಆಶ್ರಯದಾತರು ಆಳಿದ ಸಪಾದಲಕ್ಷಕ್ಷಿತಿ ಪ್ರದೇಶ) ಗೆದ್ದುದು ಪ್ರಮುಖವೆನಿಸಿದೆ.

೨. ನಾಗವರ್ಮನು ಬಂಧುಜನ ಚಿಂತಾಮಣಿ, ಈತ ತನ್ನ ತಂದೆ, ತಾಯಿ ಚಿಕ್ಕಪ್ಪ, ಮಡದಿ ಹಾಗೂ ತಂಗಿಯರ ಹೆಸರಲ್ಲಿ, ತನ್ನ ಹೆಸರಲ್ಲಿ ನಾನಾ ದೇಗುಲಗಳನ್ನು ಮಾಡಿಸಿದನು.

೩. ಇದೇ ನಾಗವರ್ಮನು ಘಳಿಗೆ ಬಾಗಿಲ್ವಾಡ ಸಂಧ್ಯಾಮಠ ಗಣಪತೀ ಭಗವತೀ ಸಪ್ತಮಾತೃಕ್ಕೆ ನಂದಿನಾಗರ–ಸಮಸ್ತ ದೇವತಾ ಪ್ರತಿಷ್ಠೆ ಮಾಡಿಸಿದನು. ಅಲ್ಲದೆ ದೇವರ ತ್ರಿಕಾಲ ಪೂಜೆ, ತಪೋಧನರ ವಿದ್ಯಾರ್ಥಿ ಮಾಣಿಗಳ ಆಹಾರದನಕ್ಕೆ ಪರಿವಾರದ ಜೀವಿತಕ್ಕೆ ಐವತ್ತು ಮತ್ತರು ಭೂಮಿಯಿತ್ತನು.

೪. ನಾಗರಾಜನು ರೇವಣೇಶ್ವರ ದೇವರಿಗೆ ರಾಣಿ ಸುಗ್ಗಲದೇವಿಯರಿಂದ ೧೫ ಮತ್ತರು ದಾನ ಕೊಡಿಸಿದನಲ್ಲದೆ ತಾನೂ ಅನೇಕ ಬಗೆಯ ದಾನಗಳನ್ನು ನೀಡಿದನು.

೫. ನಾಗರಾಜನ ತಂದೆ ರೇವಣಯ್ಯ ನಾಯಕನು ರೇವಣೇಶ್ವರ ದೇವಾಲಯವನ್ನು ಕಟ್ಟಿಸಿದನು.

## ಸಮಾರೋಪ

ವಾಜಿವಂಶದ ಕೌಂಡಿನ್ಯಗೋತ್ರ ಶಾಖೆಯವರು ಜೈನರಾಗಿ ಧರ್ಮಾಂತರ ಮಾಡಿದ ಹಿನ್ನೆಲೆಯಲ್ಲಿ ಇಲ್ಲಿ ಉಲ್ಲೇಖಿಸಬೇಕಾದ ಇನ್ನೊಂದು ಮಾತಿದೆ. ಅದೆಂದರೆ ಹುಳ್ಳನೇ ಅಲ್ಲದೆ ಒಂದೇ ಮನೆತನದಲ್ಲಿ ಹುಟ್ಟಿಬೆಳೆದ ಕೆಲವು ಧೀರರು ಹೊಯ್ಸಳರ ಆಧಿಪತ್ಯದಲ್ಲಿ ಸೇನಾನಿಗಳಾಗಿ

ಶೋಭಿಸಿದರು. ಹಾಗೆ ಪರಾಕ್ರಮವನ್ನು ಮೆರೆದ ನಿಷ್ಠಾವಂತ ಜೈನ ಸೇನಾಪತಿಗಳಲ್ಲಿ ಕೌಂಡಿನ್ಯ ಕೋತ್ರೋದ್ಭವರೂ ಇದ್ದಾರೆ: 'ಇಂತು ಪೊಗಳ್ತೆಗೆ ನೆಲೆಯಾದ ಕೌಂಡಿಲ್ಯಗೋತ್ರದ ಡಾಕರಸ ದಂಡನಾಯಕನ ಏಚವೆ ದಣ್ಣಾಯಕಿತಿಯ ಮಕ್ಕಳು ನಾಕಣ ದಂಡನಾಯಕನುಂ ಮಱಿಯಾನೆ ದಂಡನಾಯ ಕನುಂ ಅವರ ಮಕ್ಕಳು ಮಾಚಣದಂಡನಾಯಕನ್. . . ' ಎಂದು ಮುಂತಾಗಿ ನಾಲ್ಕೈದು ತಲೆಮಾರಿನ ತಂದೆ ಮೊಮ್ಮಗ ಮರಿಮಗ ಆದಿಯಾಗಿ ಹೊಯ್ಸಳ ದಂಡನಾಯಕರ ದೊಡ್ಡ ಯಾದಿಯಿದೆ. [ಎ.ಕ. ೭(೧೯೭೯) ೭೨ (೪ ನಾಮಂ ೩೨ ೧೦೪೮, ೧೧೦೩, ೧೧೮೨–೮೩, ಅಳೀಸಂದ್ರ (ಮಂಡ್ಯ ಜಿಲ್ಲೆ, ನಗಮಂಗಲ ತಾಲ್ಲೂಕು ಪು. ೫೩–೬೦)]. ಪ್ರಾಯಃ ಇವರೆಲ್ಲರೂ ವಾಜಿವಂಶಜರು.

ತೈಲಪನ ಮಗನಾದ ಇರಿವಬೆಡಂಗ ಸತ್ಯಾಶ್ರಯನ ಕಾಲಕ್ಕೆ ಸೇರಿದ, ಅನಾಥ ದೇವಾಲಯವೊಂದರ ಗರ್ಭಗೃಹದಲ್ಲಿರುವ ಒಂದು ಕಂಬದ ಮೇಲಿನ ಪುಟ್ಟಶಾಸನ ದಲ್ಲಿರುವ ಒಕ್ಕಣೆ: ಅಯ್ಯನವೊಳಲು ಎಂಬ ಗ್ರಾಮದ ಹೊಲ ಮತ್ತು ಕೆರೆಯನ್ನು ವಾಜಿಕುಲದ ಕೆಸನಮಯ್ಯನಿಗೆ ಪನ್ನಸವಾಗಿ (ಸಂಸ್ಕೃತ: ಪಂಚಾಶತ್: ತೆರಿಗೆ ವಿನಾಯಿತಿ ಭೂಮಿ) ರಾಜನ ಅಂಗರಕ್ಷಕ ಮತ್ತು ತಂತ್ರಪಾಲನಾದ ಅರಸಪಯ್ಯನು ಕೊಟ್ಟನು. ಶಾಸನ ಹಾಗೂ ದೇವಾಲಯದ ಕಾಲ, ಸ್ಥಳ, ಸಂನಿವೇಶ, ಕೊಡುಗೆ–ಇವನ್ನು ಗಮನಿಸಿದರೆ ವಾಜಿಕುಲದ ಈ ಕೆಸನಮಯ್ಯನು (ಅತ್ತಿಮಬ್ಬೆಯ ಪತಿಯಾದ) ನಾಗದೇವನ ಅಥವಾ ಆತನ ಮಗನಾದ ಅಣ್ಣಿಗದೇವನ ತಮ್ಮನಿದ್ದಿರ ಬಹುದೆಂದೂ, ಈ ಪಾಳುದೇಗುಲ ಒಂದು ಕಾಲದ ಸುಸ್ಥಿರ ಬಸದಿಯಾಗಿದ್ದಿರ ಬಹುದೆಂದೂ ಭಾವನೆ ಮೂಡಿತ್ತದೆ; ಆದರೆ ಇಂಥ ತೀರ್ಮಾನಗಳಿಗೆ ಅಗತ್ಯವಾದ ಖಚಿತ ಆಧಾರಗಳಿಲ್ಲ [ಎಆರ್ಐಇ ೧೯೫೮. ನಂ. ೧೦೦೭. ಪುಣ್ಯವೋಲು (ಆಂಧ್ರ: ವಾರಂಗಲ್ ಜಿಲ್ಲೆ/ತಾ) ಪು. ೪].

ತ್ರಿಭುವನಮಲ್ಲ ವಿಕ್ರಮಾದಿತ್ಯ ರಾಜನ ಆಳಿಕೆಗೆ ಸೇರಿದ ಶಸನವೊಂದರಲ್ಲಿ ದುರ್ಗರಾಜನೆಂಬಾತನ ಪ್ರಸ್ತಾಪ ಈ ಸಂಪ್ರಬಂಧದ ಜಿಜ್ಞಾಸೆಯ ಕಕ್ಷೆಗೆ ಪ್ರಸ್ತುತವಾಗಿದೆ.

ವಾಜಿಕುಳ ಸಾಂಖ್ಯಾಯನ ಗೋತ್ರದ ಪಂಪರಾಜನ ಮಗ ದುರ್ಗರಾಜನು ಮೂಲಸ್ಥಾನ ದುರ್ಗೇಶ್ವರ ದೇವರಿಗೆ 'ಮಟಕ್ಕಮಲ್ಲಿಯ ವಿದ್ಯಾದಾನಕ್ಕಂ' ದಾನವಿತ್ತನು. ಏಚರಾಜನ ಮಗ ದುರ್ಗಸಿಂಹ, ದುರ್ಗಸಿಂಹನ ಮಗ ಪಂಪರಾಜ, ಪಂಪರಾಜನ ಮಗನು ದುರ್ಗರಾಜ [ಸೌ.ಇ.ಇ. ೯-೧, ೧೬೦, ೧೮೯೧-೯೨, ಕೊಳ್ಗಲ್ಲು (ಬಳ್ಳಾರಿ ಜಿಲ್ಲೆ. ಶಿರಗುಪ್ಪ ತಾಲ್ಲೂಕು) ಪು. ೧೪೭-೪೮]. ಇನ್ನೊಂದು ಶಾಸನದಲ್ಲಿ ಸಂಧಿವಿಗ್ರಹಿ ಪದ್ಮರಸನ ಪ್ರಸ್ತಾಪವಿದೆ: ಸಕಳಕಳಾಬ್ರಹ್ಮಂ ಶಾಬ್ದಿಕ ತಿಳಕಂ ಬ್ರಹ್ಮಕವಿ ಚೂಡಾಮಣಿ ವಾಜಿಕುಳ ನಭಸ್ಥಳ ರವಿ ಕೌಶಿಕ ಗೋತ್ರಂ ಪವಿತ್ರಂ ಸಂಧಿ ವಿಗ್ರಹಿ ಪದ್ಮಂ ಸಂಧಿವಿಗ್ರಹಿ ಪದ್ಮರಸಂ ಶಿವಪಾದಶೇಖರಂ [ಸೌ.ಇ.ಇ. ೯-೧, ೫೦. ೧೦೦೫. ಯಲಿ ಸಿರೂರ್ (ಧಾಜಿ./ಗದಗ ತಾ.) ಪು. ೩೭ ಸಾಲು: ೨-೩].

ಅಯ್ನೂರ್ವ್ವರು ಮಹಾಜನರ ಪ್ರಮುಖನೂ, ಹಾರೀತ ಗೋತ್ರದವನೂ ಆದ ಈಶ್ವರ ಘಳಿಸಾಸನಿಗೆ ತೈಲಪ || ರಾಜನು (೯೩೭-೯೭) ಮಣಿಗವಳ್ಳಿಯನ್ನು ನೀಡಿದನು. ಅನಂತರ ಇದೇ ಪರಂಪರೆಯಲ್ಲಿ ಬಂದ ಮಾದಿರಾಜನೂ (ಮಾಧವ) ಮಣಿಗವಳ್ಳಿಯ ಮಹಾಜನರ ಪ್ರಧಾನನಾದನು. ಮುಂದೆ ವಾಜಿಕುಲದ ಪರಮಭಕ್ತಾನಾಗಿದ್ದು, ಪಾಶುಪತ ಕಾಳಾಮುಖ ಪಂಥದ ಕಲಿದೇವೇಶ್ವರ ದೇವಾಲಯವನ್ನು ಕಟ್ಟಿಸಿದನು. ಚಾಳುಕ್ಯಚಕ್ರಿ ಜಗದೇಕಮಲ್ಲನ ಅಧಿಕಾರಿಯಾದ ಬಮ್ಮಣಯ್ಯನು ೧೧೪೨ ರಲ್ಲಿ ಈ ಕಲಿದೇವರಿಗೆ ದತ್ತಿಯಿತ್ತನು. ೧೧೬೧ ರಲ್ಲಿ, ಕಲಚುರಿ ಬಿಜ್ಜಳನು ಆಳುತ್ತಿರುವಾಗ ಬಣಂಜುಗಳು ದಾನ ನೀಡಿದರು [ಎ.ಇ.೫, ಪು. ೯, ಮನಗೋಳಿ ೧೧೬೧]. ಈ ಮನಗೋಳಿ ಶಾಸನೋಕ್ತನಾದ ಬಸವರಸನು ಪ್ರಸಿದ್ಧ ಬಸವೇಶ್ವರನಿಗಿಂತ ಭಿನ್ನವಾದ ವ್ಯಕ್ತಿ. ಬಸವೇಶ್ವರನು (ಬಸವಣ್ಣ) ಕಮ್ಮೆಕುಲಜನೆಂಬುದು ಹರಿಹರ ಕವಿಯ ಹೇಳಿಕೆ. ಕಾಶ್ಯಪ ಕುಲದ ಬಸವಣ್ಣನ ಪ್ರಸ್ತಾಪ ಬೇರೆ ಶಾಸನಗಳಲ್ಲುಂಟು [ಎ.ಕ. ೭, ಶಿಕಾರಿಪುರ ೧೧೭.೧೧೧೮].

ವಾಜಿವಂಶಜರಲ್ಲಿ ನಾಲ್ಕು ದೊಡ್ಡ ಪ್ರತಿಷ್ಠಿತ ಕುಟುಂಬಗಳ ವಂಶವೃಕ್ಷವನ್ನು ಅನುಬಂಧವಾಗಿ ಕೊಟ್ಟಿದ್ದೇನೆ. ಆದರೆ ತೀರ ಪ್ರಮುಖರಾದ ವಾಜಿವಂಶ ಸಂಭೂತರು ಇವರು:

೧. ಪಂಪಯ್ಯ: ಕ್ರಿ.ಶ. ೯೪೨; ರೋಣ ಶಸನೋಕ್ತ

೨. ದಲ್ಲಪಯ: ೯೬೫; ಲಕ್ಕುಂಡಿ ಶಸನೋಕ್ತ

೩. ನಾಗದೇವ: ೯೮೦; ಅತ್ತಿಮಬ್ಬೆಯ ಪತಿ

೪. ಅಣ್ಣಿಗದೇವ: ೧೦೦೭; ನಾಗದೇವ ಮತ್ತು ಅತ್ತಿಮಬ್ಬೆಯರ ಮಗ

೫. ಚಂದ್ರರಾಜ: ೧೦೨೫; ಮದನ ತಿಲಕ ಕಾವ್ಯದ ಕವಿ

೬. ನಾಗವರ್ಮ: ೧೦೪೯; ತಡಕಲ್ಲು ಶಾಸನೋಕ್ತ

೭. ಕಾಳಿಮಯ್ಯ: ೧೦೭೧; ತಡಕಲ್ಲು ಶಾಸನೋಕ್ತ.

೮. ಮಾಚಿರಾಜ (ಪ್ರಭುಮಾಚಿ): ೧೦೭೯; ಎ.ಕ. ೮-೨ ಸಾಗರ. ೧೦೯

೯. ನಾಗರಾಜ: ೧೧೨೩-೨೩; ಬಿಮರಾ ಶಾಸನೋಕ್ತ

೧೦. ಹುಳ್ಳಮಯ್ಯ: ೧೧೬೩; ಶ್ರವಣಬೆಳುಗೊಳ ಶಾಸನೋಕ್ತ

೧೧. ದೇವಪಯ್ಯ: ೧೧೭೪; ಶಾಸನಕವಿ

೧೨. ರೇಚಣ (ರೇಚರಸ): ೧೧೮೦: ಶಾಸನೋಕ್ತ, ಕಾವ್ಯೋಕ್ತ

೧೩. ಮಧುರಕವಿ: ೧೩೮೫; ಚಂಪೂಕವಿ, ಶಾಸನಕವಿ

ಈ ಸಂಪ್ರಂಬಧವನ್ನು ಮುಗಿಸುವ ಮೊದಲು ವಾಜಿವಂಶದ ನಿಷ್ಪತ್ತಿ ಮತ್ತು ಶಬ್ದಾರ್ಥ ಕುರಿತು ಪರಾಮರ್ಶಿಸಬಹುದು.

೧. ಸಂಸ್ಕೃತ ಉಪಾಧ್ಯಾಯ ಎಂಬ ಶಬ್ದದ ತದ್ಭವ ರೂಪವಾಗಿ ಪ್ರಾಕೃತದ ಮೂಲಕ ಇದು ಬೆಳೆದು ಬಂದಿರಬಹುದು; ಉಪಾಧ್ಯಾಯ (ಸಂಸ್ಕೃತ) ಉವಜ್ಝಾಯ (ಪ್ರಾಕೃತ) ಉವಜ- ಓಜ-ವಾಜ ಆಗಿದೆ. ವಾಜ ಎಂದರೆ ಉಪಾಧ್ಯಾಯ ಎಂದಷ್ಟೆ ವಾಚ್ಯಾರ್ಥವಲ್ಲ; ವಿದ್ವಾಂಸ ಬಲ್ಲಿದ ಎಂಬರ್ಥವೂ ಉಂಟು. ವಾಜರು

ಇರುವ ವಂಶವೇ ವಾಜಿ ವಂಶಜ ರೆಂದು ತಿಳಿಯಬಹುದು. ಉಪಾಧ್ಯಾಯರು ಎಂಬುದು ಮೂಲಾರ್ಥದಲ್ಲಿ ವಿದ್ಯೆಯನ್ನು ಬೋಧಿಸುವವರು ಎಂದಿದ್ದರು, ಜೈನರಲ್ಲಿ ಅದು ದೇವರ ಪೂಜಾಕಾರ್ಯ ಮಾಡುವ ವೃತ್ತಿಯವರಿಗೆ ಅನ್ವಯವಾಗಿದೆ. ಉತ್ತರ ಕರ್ನಾಟಕದ ಜೈನ ಸಮಾಜದಲ್ಲಿ ಆರ್ಚಕರು (ಪೂಜಾರರು) ಎಂಬರ್ಥದಲ್ಲಿ ಉಪಾಧ್ಯೆ, ಉಪಾದ್ರಿ ಎಂದು ಬಳಸುತ್ತಾರೆ. ವಿಶ್ವವಿಖ್ಯಾತ ವಿದ್ವಾಂಸರಾದ ಡಾ|| ಆ.ನೇ. ಉಪಾಧ್ಯ ಅವರೂ ಸಹ ಈ ರೀತಿ ಉಪಾಧ್ಯೆ ಮನೆತನಕ್ಕೆ ಸೇರಿದವರು. ದಕ್ಷಿಣ ಕನ್ನಡ ಜಿಲ್ಲೆಯ ಜೈನ ಸಮಾಜದಲ್ಲಿ ಅರ್ಚಕರನ್ನು 'ಇಂದ್ರರು' ಎಂದು ಕರೆಯುತ್ತಾರೆ. ಹಳೆಯ ಮೈಸೂರು ಭಾಗದ ಜೈನ ಸಮಾಜದಲ್ಲಿ ಪುರೋಹಿತರು ಎಂಬ ಶಬ್ದ ಉಪಯೋಗದಲ್ಲಿದೆ. ವಾಜಿವಂಶವೂ ಮೂಲತಃ ಇಂತಹ ಒಂದು ಪೂಜಾದಿಗಳಿಗೆ ನೆರವಾಗುತ್ತಿದ್ದ ಉಪಾಧ್ಯಯ ಮನೆತನವಿರಬಹುದು. ಆದರೂ ಈ ಬಗ್ಗೆ ಇನ್ನೂ ಚರ್ಚೆಗೆ ಅವಕಶವಿರುವುದರಿಂದ ಇದೇ ಕಡೆಯ ಮಾತಾಗಲಾರದು.

೨. ಇನ್ನೊಂದು ಸಂಭಾವ್ಯ ನಿಷ್ಪತ್ತಿ: ವಾಜಿ ಎಂಬುದು ಅಶ್ವ (ಕುದುರೆ) ಸಂಬಂಧವಾದ ಅರ್ಥವನ್ನೂ ಹೊಂದಿದೆ. ಕುದುರೆಗಳನ್ನು ಹೊಂದಿದ್ದು ಯುದ್ಧಗಳಲ್ಲಿ ಭಾಗವಹಿಸುವ ಮನೆತನ ಎಂಬರ್ಥದಲ್ಲಿ 'ವಾಜಿ–ವಂಶ' ಶಬ್ದವು ಈ ಕುಲಕ್ಕೆ ಅನ್ವಯಗೊಂಡು ಪ್ರಚಲಿತವಾಗಿದ್ದಿರಬಹುದು.

೩. ಮೇಲಿನ ಎರಡು ನಿಷ್ಪತ್ತಿಗಳಿಗಿಂತ ಹೆಚ್ಚು ಸಂಭವನೀಯವೆನಿಸುವ, ಪ್ರಾಯಃ ಸಮಂಜಸವಾದ ನಿಷ್ಪತ್ತಿ ಇನ್ನೊಂದು ಇದೆ. ವಾಜಪೇಯ (ವಾಜಸನೀಯ) ಎಂಬ ಯಜ್ಞ–ಯಾಗಾದಿಗಳನ್ನು ಮಾಡಿದ ಹಿರಿಯರಿಂದ ಬಂದ ಮನೆತನವಾಗಿ ಅದು 'ವಾಜಿಕುಲ' ಎಂದು ಹೆಸರು ಪಡೆದಿರಬಹುದು. ಇದೇ ಸರಿಯಾದ ನಿಷ್ಪತ್ತಿ ಮೂಲವೆಂದು ಖಚಿತವಾಗಿ ಹೇಳುವುದಕ್ಕೆ ಕಾರಣವೆಂದರೆ, ಈ ವಾಜಿವಂಶದ ಪ್ರಾಚೀನ ದಾಖಲೆಗಳು ಅವರ ವೈದಿಕತ್ವ ಮತ್ತು ಯಜ್ಞಯಾಗಿದೆಗಳ

ಆಚರಣೆಯನ್ನು ದೃಢಪಡಿಸುತ್ತವೆ.  ವಾಜಪೇಯ ಯಾಗದ ಪ್ರಸ್ತಾಪವಂತೂ ೧೬ ನೆಯ ಶತಮಾನದವರೆಗೂ ಶಾಸನಗಳಲ್ಲಿ ಉಲ್ಲೇಖವಾಗಿದೆ:

೧. ಎ.ಕ. ೭(೧೯೭೯) ನಾಮಂ ೧೩೪ (೧೪ ನಾಮಂ ೧೩೮) ೧೫೧೨ ದೊಡ್ಡಜಟಕ (ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು) ಪು. ೧೩೩

೨. ಎ.ಕ. ೯(೧೯೯೦) ಬೇ೧೭೨ (೫ ಬೇ ೭೯) ೧೫೧೨ ಬೇಲೂರು (ಹಾ.ಜಿ.) ಪು. ೧೪೬.

ವಾಜಿವಂಶದ, ವಾಜಿವಂಶದ ಇನ್ನೂ ಹತ್ತಾರು ಶಾಸನಗಳು ಉಪಲಬ್ಧವಾಗಿವೆ.

ಅವೆಲ್ಲದರ ಪ್ರಸ್ತಾಪ ಮತ್ತು ಚರ್ಚೆ ಈ ಸಂಪ್ರಬಂಧದ ಚೌಕಟ್ಟಿನ ಕಕ್ಷೆಗೆ ಮೀರಿದ್ದು ಮತ್ತು ಹೊರತು.  ವಾಜಿಕುಲ ಕುಲಜರೆಲ್ಲರ ಪಟ್ಟಿ ಕೊಡುವುದು ನನ್ನ ಉದ್ದೇಶವಾಗಿಲ್ಲ.  ಒಂದು ಬಗೆಯ ಅಂತಸ್ಸಂಬಂಧವಿದ್ದು ಒಂದು ನಿರ್ದಿಷ್ಟ ಆಡಳಿತ ವ್ಯಾಪ್ತಿಯಲ್ಲಿ ಹುಟ್ಟಿಬೆಳೆದು ಕರಗಿಹೋದ ಪ್ರಮುಖ ವಂಶವಾಹಿನಿಯ ನಿರಂತರ ಧಾರೆಯ ಸ್ವರೂಪವನ್ನೂ, ಕರ್ನಾಟಕದ ಸಾಹಿತ್ಯ-ಸಂಸ್ಕೃತಿಯ ಸಂದರ್ಭ ದಲ್ಲಿ ಅದರ ಸಾರ್ಥಕತೆಯ ಆಯಾಮಗಳನ್ನೂ ಈ ಸಂಪ್ರಬಂಧದಲ್ಲಿ ವಿವೇಚಿಸಿದ್ದೇನೆ.

ಕರ್ನಾಟಕದ ಚರಿತ್ರೆಯಲ್ಲಿ ಈ ಬಗೆಯ ಸಣ್ಣಪುಟ್ಟ ವಂಶಗಳು ಕೂಡ ಹೇಗೆ ಗಣನೀಯ ಪಾತ್ರವನ್ನು ನಿವಹಿಸಿವೆ ಎಂಬುದು ಇನ್ನಷ್ಟು ವಿಸ್ತಾರವಾದ ಅಧ್ಯಯನಕ್ಕೆ ದಾರಿ ತೆರೆಯುತ್ತದೆಂಬುದಕ್ಕೆ ಇದೊಂದು ತೋರುಬೆರಳು.

## ಗಾವರವಾಡ ಶಾಸನದ ಆಯಾಮಗಳು

### ೧. ಪೀಠಿಕೆ

ಗಾವರ (ರಿ) ವಾಡವು, ಧಾರವಾಡ ಜಿಲ್ಲೆಯ ಗದಗು ತಾಲ್ಲೂಕಿನಲ್ಲಿರುವ ಒಂದು ಹಳ್ಳಿ, ಇಲ್ಲಿಯ ನಾರಾಯಣಗುಡಿ ಮುಂದೆ ಅರಸಿಬಾಗಲಿಗೆ ದಕ್ಷಿಣದ ಕಡೆ ಇದ್ದ ಒಂದು ಕಲ್ಲಿನ ಮೇಲಿನ ಶಾಸನ ತುಂಬ ಮಹತ್ವದು, ಈ ಕಲ್ಲು ಚಪ್ಪಡಿ ಹಾಸನದ ಮೇಲುಗಡೆ ಚಿತ್ರಗಳಿವೆ. ಈ ಚಿತ್ರಪಟ್ಟಿಕೆಯ ನಟ್ಟನಡುವೆ ಪದ್ಮಾಸನದಲ್ಲಿ ಕುಳಿತ ಆತ್ಮಧ್ಯಾನನಿರತ ಜಿನನ ಉಬ್ಬು ಶಿಲ್ಪವಿದೆ. ಬಲಕ್ಕೆ ಕತ್ತಿಯೂ ಎಡಕ್ಕೆ ಹಸು–ಕರುವೂ ಇವೆ. ಇವೆರಡಕ್ಕೂ ಸ್ವಲ್ಪ ಮೇಲೆ ಎಡಕ್ಕೆ ಸೂರ್ಯನೂ, ಬಲಕ್ಕೆ ಚಂದ್ರನೂ ಕಾಣುತ್ತಾರೆ. ಈ ಚಿತ್ರಗಳ ಕೆಳಭಾಗದಲ್ಲಿ ಶಾಸನವನ್ನು ಕೆತ್ತಲಾಗಿದೆ.

ಶಾಸನಪಾಠದ ಒಕ್ಕಣೆಯ ಕೆತ್ತನೆಯೂ ಎರಡು ಹಂತದಲ್ಲಿ ನಡೆದಿದೆ. ೫ ಅಡಿ ೧/೨ ಅಂಗುಲ ಎತ್ತರವೂ, ೨ ಅಡಿ ೧ ३/೪ ಅಂಗುಲ ಅಗಲವೂ ಇರುವುದು ಒಂದು ಹಂತ [ಪಂಕ್ತಿ: ೧ ರಿಂದ ೯೨]; ಅಷ್ಟೇ ಅಗಲ ಮತ್ತು ಮೂರು ಅಂಗುಲ ಎತ್ತರ ಇರುವುದು ಇನ್ನೊಂದು ಹಂತ [ಪಂಕ್ತಿ: ೯೩ ರಿಂದ ೯೫]. ಒಬ್ಬನೇ ಕಂಡರಣೆಕಾರನ ಕಂಡರಣೆಯೆಂದು ಲಿಪಿ ಸ್ವರೂಪ ರಚನೆ ವಿನ್ಯಾಸದಿಂದ ಹೇಳಬಹುದು. ಶಾಸನದ ತೇದಿಯು ಶಕ ಸಂವತ್ ೯೯೩ ಮತ್ತು ೯೯೪, ಅಂದರೆ ಕ್ರಿ.ಶ. ೧೦೭೧–೭೨ ಕ್ಕೆ ಸೇರಿದ್ದಾಗಿದೆ.

ಆದರೆ ಇದೊಂದು ಪ್ರತಿಶಾಸನ. ಮೂಲ ಶಾಸನದ ಈ ಮರುಪ್ರತಿಯನ್ನು ಕ್ರಿ.ಶ. ಸುಮಾರು ೧೧೫೫ ರಲ್ಲಿ ಮಾಡಲಾಗಿರಬೇಕೆಂದು ಸಂಪಾದಕರು ಭಾವಿಸಿದ್ದಾರೆ. ಆದರೆ ಪ್ರಸ್ತುತ ಶಾಸನವನ್ನು ಸುಮಾರು ೧೧೬೫–೭೦ ರ ಅವಧಿಯಲ್ಲಿ ಪ್ರತಿಯೆತ್ತಿರ ಬಹುದೆಂಬುದು ನನ್ನ ಅಭಿಪ್ರಾಯ; ಇದಕ್ಕೆ ತಕ್ಕ ಕಾರಣವನ್ನು ಯಥಾವಕಾಶ ಪ್ರಸ್ತಾಪಿಸಿ ಸೊಸೈಟಿಯಲ್ಲಿನ ಹತ್ತನೆಯ

ಸಂಪುಟ (ಫೋಲಿಯೊ ೧೩೭ಎ) ದಲ್ಲಿ ಸೇರ್ಪಡೆ ಆಗಿರುವ ಈ ಶಾಸನದ ಒಕ್ಕಣೆಯನ್ನು ಪ್ರತಿಕಾರರಿಂದ ತರಿಸಿಕೊಂಡು ಎಲ್.ಡಿ. ಬಾರ್ನೆಟರು ಇದರ ತಾಂತ್ರಿಕ ಮಾಹಿತಿ ಸಹಿತ ಎಪಿಗ್ರಾಫಿಯ ಇಂಡಿಕದಲ್ಲಿ ಆಂಗ್ಲಭಾಷಾಲಿಪ್ಯಂತರದೊಂದಿಗೆ ಪ್ರಕಟಿಸಿದರು [ಎ.ಇ. ೧೫. ೨೩. ೧೦೭೧-೭೨. ಪು. ೩೩೭-೪೮]

೨. ಭಾಷಿಕ ಲಕ್ಷಣಗಳು

೧೨ ನೆಯ ಶತಮಾನದ ಕನ್ನಡಲಿಪಿಯಲ್ಲಿ ಕೆತ್ತಲಾಗಿರುವ, ಆದರೆ ಮುಖ್ಯ ಶಾಸನ ಭಾಗದ ಒಕ್ಕಣೆಯು ಹನ್ನೊಂದನೆಯ ಶತಮಾನಕ್ಕೆ ಸೇರಿರುವ ಈ ಶಾಸನವು ಪೂರ್ತಿಯಾಗಿ ಹಳೆಗನ್ನಡ ಭಾಷೆಯಲ್ಲಿದೆ. ಸಾದ್ಯಂತವಾಗಿ ಜೈನಶಾಸನವಾಗಿರುವ ಈ ಶಾಸನವು, ಕಲ್ಯಾಣ ಚಾಳುಕ್ಯರ ಚಕ್ರವರ್ತಿ ಭುವನೈಕಮಲ್ಲ ಇಮ್ಮಡಿ ಸೋಮೇಶ್ವರನ ಆಳಿಕೆಯಲ್ಲಿ ರಚಿತವಾಗಿದೆ. ಈ ಕನ್ನಡ ಶಾಸನದಲ್ಲಿ (ಆರಂಭದ್ದೊಂದು ಹಾಗೂ ಕಡೆಯ ಶಾಪಾಶಯ ಭಾಗದಲ್ಲಿ ಬರುವ ಒಂದು) ಎರಡು ಸಂಸ್ಕೃತ ಪದ್ಯಗಳಿವೆ. ಶಾಸನಾರಂಭದಲ್ಲಿರುವ ಅನುಷ್ಟುಭ್ ಶ್ಲೋಕವು ಅಕಳಂಕಾಚಾರ್ಯ ವಿರಚಿತ ಸುಪ್ರಸಿದ್ಧ ಜೈನ ಪ್ರಾರ್ಥನಾ ಪದ್ಯವಾಗಿದೆ. ಶಾಸನಾರಂಭದಲ್ಲಿರುವ ಅನುಷ್ಟುಭ್ ಶ್ಲೋಕವು ಅಕಳಂಕಾಚಾರ್ಯವಿರಚಿತ ಸುಪ್ರಸಿದ್ಧ ಜೈನ ಪ್ರಾರ್ಥನಾ ಪದ್ಯವಾಗಿದೆ. ಶಾಸನದ ಸಾಲು ೮೯-೯೦ ರಲ್ಲಿರುವ ವರ್ಧತಾಂ ಜಿನಶಾಸನಂ ಎಂಬುದೂ ಸಂಸ್ಕೃತ ವಾಕ್ಯವೇಷ್ಟನವಾಗಿದೆ. ಇಷ್ಟರ ಹೊರತು, ಉಳಿದಂತೆ ಇಡೀ ಶಾಸನ ಹಳೆಗನ್ನಡದಲ್ಲಿದೆ.

ಟಿಕಾರವನ್ನು ಕೆಲವು ಕಡೆ ಸರಿಯಾಗಿ ಬಳಸಲಾಗಿದೆ:

ನೆತಟ್ಟಿ (ಸಾಲು: ೯), ಬಿಟ್ಟು (೩೯). ಕೆಲವುಕಡೆ ಟಿಕಾರವು ಳಕಾರ ದಲ್ಲಿ ವಿಲೀನಗೊಂಡಿರುವ ರೂಪಗಳಿವೆ: ತುಳಿಲ್(೯), ಪೊಗಳ್ (೩೩), ನೆಗಳ್ (೧೩-೧೪, ೧೮, ೩೩), ಬಾಳ್ತೆ (೩೩), ಅಳಿ (೩೦,೯೧) ಇತ್ಯಾದಿ. ಪಕಾರವು ಎರಡು ಕಡೆ ಹಕಾರವಾಗಿದೆ: ಹೆಗ್ಗಡೆ (೫೬-

೫೭), ಹೆಸರ್(೯೪). ಹೀಗೆಯೇ ಇದು ವ್ಯಕ್ತಿನಾಮದಲ್ಲೂ ಬಂದಿದೆ: ಹೆಬ್ಬೆಯ ದೇವಿಸೆಟ್ಟಿ. ಕೆಲವು ಕಡೆ ಅಕಾರಾದಿಯ ಶಬ್ದಗಳ ಆದಿಯಲ್ಲಿ ಯಕಾರಾಗಮ ಕಂಡು ಬರುತ್ತದೆ: ಯಲ್ಲಿಯ (೫೧) ಯಾದಿನಾಥ(೫೭) ಯಾಚಾರ್ಯ್ಯ (೫೮) ಯಱುವಣಮ್ (೫೯) ಯಷ್ಟವಿಧ (೮೬) ಯದು (೯೫). ಶಬ್ದಾರ್ಥಜಿಜ್ಞಾಸೆಗೆ ಗ್ರಾಸವಾಗಬಲ್ಲ ಕೆಲವು ವಿಶಿಷ್ಟ ಶಬ್ದಗಳೂ ಸೇರ್ಪಡೆಯಾಗಿವೆ.

೩. ಕಲ್ಯಾಣಿ ಚಾಲುಕ್ಯರ ಕಾಲದ ಕೆಲವು ವಿಶಿಷ್ಟ ವ್ಯಕ್ತಿಗಳ, ಸಾಧನೆಗಳು, ಧಾರ್ಮಿಕ ವರಿಷ್ಠರ, ಯುದ್ಧಗಳು, ಸಾಂಸ್ಕೃತಿಕ ಸ್ಥಿತ್ಯಂತರಗಳ ಅಂತರಂಗವನ್ನು ತೆರೆದು ಪಾರದರ್ಶಕವಾಗಿ ಬಿಚ್ಚಿಡುವ ಒಂದು ಮೌಲಿಕ ಶಾಸನವಿದು. ಇದರ ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಹಿತ್ಯಕ, ಆಡಳಿತಾತ್ಮಕ ಆಯಾಮಗಳನ್ನು ಸವಿವರವಾಗಿ ಪರಾಮರ್ಶೆ ಮಾಡಲು ಅವಕಾಶಗಳಿವೆ.

ಪ್ರಧಾನವಾಗಿ ಇದೊಂದು ದತ್ತಿಶಾಸನ. ಅಷ್ಟು ಮಾತ್ರವಲ್ಲದೆ ಮತ್ತೆ ಮತ್ತೆ ಒಂದೇ ಜೈನ ದೇವಾಲಯಕ್ಕೆ ಮೇಲಿಂದ ಮೇಲೆ ದತ್ತಿಕೊಡಲಾಗಿದೆ. ಹೀಗೆ ಪುನರ್ದತ್ತಿಗಳ ಪರಂಪರೆಯನ್ನು, ಅದರದ ಚಾರಿತ್ರಿಕ ಹಿನ್ನೆಲೆ ಸಹಿತ ಮಂಡಿಸಲಾಗಿದೆ. ಅಣ್ಣಿಗಱೆಯ ಗಂಗ ಪೆರ್ಮಾಡಿ ಬಸದಿಗೆ ಗಂಗರ ಇಮ್ಮಡಿ ಬೂತಕ (೨೯–೩೦), ಅವನ ಮಗ ಇಮ್ಮಡಿ ಮಾರಸಿಂಹ, ತರುವಾಯ ತ್ರೈಲೋಕ್ಯಮಲ್ಲ ಸೋಮೇಶ್ವರ, ಅನಂತರ ಅವನ ಮಗ ಭುವನೈಕಮಲ್ಲ ಇಮ್ಮಡಿ ಸೋಮೇಶ್ವರ ಮತ್ತು ಇವನ ಆದೇಶದಿಂದ ಮಹಾಮಂಡಲೇಶ್ವರನಾದ ಲಕ್ಷ್ಮರಸ (೧೫–೧೬, ೩೨), ಈತನ ಸಾಮಂತನೂ ಮಯೂರ ಪುರವರಾಧೀಶನೂ ಆದ ಕತ್ತಲೆಕುಲದ ಕಾಟರಸ (೪೪–೪೭), ಮತ್ತೆ ಅಣ್ಣಿಗೆರೆಯ ಬಸದಿಗೆ ನಡೆದುಕೊಳ್ಳುವ ಹಳ್ಳಿಗಳ ಮೂವತ್ತು ಮಂದಿ ಶ್ರಾವಕರು [೫೭–೬೩], ಅದಾದ ಮೇಲೆ ಮಹಾಪ್ರಧಾನ ವಸುಧೈಕ ಬಾಂಧವನೆನಿಸಿದ ರೇಚಿದೇವ ದಂಡನಾಥ–ಹೀಗೆ ನಿರಂತರವಾಗಿ ಇನ್ನೂರು ವರ್ಷದ ದತ್ತಿಗಳ ದಾಖಲೆ ಈ ಶಾಸನದಲ್ಲಿದೆ.

ಈ ರೀತಿಯಲ್ಲಿ, ಇನ್ನೂ ಹಲವು ವಿಧಗಳಲ್ಲಿ ಪ್ರಾಮುಖ್ಯ ಪಡೆದಿರುವುದನ್ನು ಆಧಾರಗಳೊಂದಿಗೆ ಚರ್ಚಿಸುವುದಕ್ಕೆ ಮೊದಲು ಶಾಸನವನ್ನು ಪೂರ್ತಿಯಾಗಿ, ಯಥಾವತ್ತಾದ ಪಾಠದೊಂದಿಗೆ ಉದಾಹರಿಸಲಾಗಿದೆ:

೪. ಶಾಸನ ಪಾಠ

೧. ಶ್ರೀಮತ್ಪರಮಗಂಭೀರ ಸ್ಯಾದ್ವಾದಾಮೋಘಲಾಂಛನಂ |
ಜೀಯಾತ್ರೈಲೋಕ್ಯನಾಥಸ್ಯ ಶಾಸನಂ ಜಿನಶಾಸನಂ ||

೨. ಸ್ವಸ್ತಿ ಸಮಸ್ತ ಭುವನಾಶ್ರಯಂ ಶ್ರೀ ಪ್ರಿಥ್ವೀವಲ್ಲಭಂ ಮಹಾರಾಜಾಧಿರಾಜಂ ಪರಮೇಶ್ವರ ಪರಮ ಭಾಟ್ಟಾರಕಂ ಸ

೩. ತ್ಯಾಶ್ರಯಕುಳ ತಿಳಕಂ ಚಾಳುಕ್ಯಾಭರಣಂ ಶ್ರೀಮದ್ ಭುವನೈಕಮಲ್ಲದೇವರ ವಿಜಯರಾಜ್ಯ ಮುತ್ತರೋತ್ತರಾಭಿಬ್ರಿದ್ಧಿ ಪ್ರವರ್ಧಮಾನಮಾಚಂ

೪. ದ್ರಾರ್ಕ್ಕ ತಾರಂ ಸಲುತ್ತಮಿರೆ| ತತ್ಪಾದ ಪದ್ಮೋಪಜೀವಿ ಸಮಧಿಗತ ಪಂಚ ಮಹಾಶಬ್ಧಮಾಹಮಣ್ಡಲೇಶ್ವರನುದಾರ ಮಹೇಶ್ವರಂ ಚಲಕೆ ಬಲುಗಣ್ಡಂ [ಶೌರ್ಯ್ಯ ಮಾರ್ತಣ್ಡಂ]ಪತಿಗೇ.

೫. ಕ ದಾಡಂ ಸಂಗ್ರಾಮ ಗರುಡಂ ಮನುಜ ಮಾಂಧಾತಂ ಕೀರ್ತ್ತಿ ವಿಖ್ಯಾತಂ ಗೋತ್ರ ಮಾಣಿಕ್ಯಂ ವಿವೇಕ ಚಾಣಾಕ್ಯಂ ಪರನಾರೀ ಸಹೋದರಂ ವೀರ ವ್ರಿಕೋದರಂ ಕೋ

೬. ದಣ್ಡ ಪಾರ್ತ್ಥಂ ಸೌಜನ್ಯ ತೀರ್ತ್ಥಂ ಮಂಡಳೀಕ ಕಂಠೀರವಂ ಪರಚಕ್ರಭೈರವಂ ರಾಯದಂಡ ಗೋಪಾಲಂ ಮಲೆಯ ಮಂಡಳೀಕ ಮ್ರಿಗ ಶಾರ್ದೂಲಂ ಶ್ರೀಮದ್ ಭುವ

೭. ನೈಕಮಲ್ಲದೇವ ಪಾದ ಪಂಕಜ ಭ್ರಮರಂ ಶ್ರೀಮನ್ಮಹಾಮಣ್ಡಲೇಶ್ವರಂ ಲಕ್ಷ್ಮರಸರು ಬೆಳ್ವೊಲ ಮೂನುಱುಮಂ ಪುಲಿಗೆಱೆ ಮೂನೂಱುಮಂ ತೆರಡಱು ನೂಱು

೮. ಮಂ ದುಷ್ಟ ನಿಗ್ರಹ ಶಿಷ್ಟ ಪ್ರತಿಪಾಲನೆಯಿಂ ಪ್ರತಿಪಾಳಿಸುತ್ತಮಿರೆ ವ್ರ || ಅಣುಗಾಳ್ ಕಾರ್ಯ್ಯದ ಶೌರ್ಯ್ಯದಾಳ್ ವಿಜಯದಾಳ್ ಚಾಳುಕ್ಯ ರಾಜ್ಯಕ್ಕೆ ಕಾರ

೯. ಣಮಾದಾಳ್ ತುಳಿಲಾಳ್ತನಕ್ಕೆ ನೆಱಿದಾಳ್ ಕಟ್ಟಾಯದಾಳ್ ಮಿಕ್ಕ ಮನ್ನಣೆಯಾಳ್ ಮಾನ್ಯನದಾಳ್ ನೆಗೞ್ತೆ ವಡೆದಾಳ್ ಮೇಳದಾಳ್ ರಣದಾಳ್+ಆಳ್ದನನ

೧೦. ಚ್ಚುವಾವೆಡೆಯೊಬಳಂ ವಿಶ್ವಾಸದಾಳ್ ಲಕ್ಷ್ಮಣಂ | ಕಲಿತನಮಿಲ್ಲ ಚಾಗಿಗೆ ವದಾನ್ಯತೆ ಮೆಯ್ಗಲಿಗಿಲ್ಲ ಚಾಗಿ ಮೆಯ್ಗಲಿಯೆನಿಪಂಗೆ ಶೌಚಗುಣಮಿ

೧೧. ಲ್ಲ ಕರಂ ಕಲಿ ಚಾಗಿ ಶೌಚಿಗಂ ನಿಲೆ ನುಡಿವೋಜೆಯಿಲ್ಲ ಕಲಿ ಚಾಗಿ ಮಹಾಶುಚಿ ಸತ್ಯನಾದಿ ಮಂಡಲಿಕರೊಳೀತನೆನ್ದು ಪೊಗಳ್ಗುಂ ಬುಧಮಣ್ಡ

೧೨. ಳಿ ಲಕ್ಷ್ಮ ಭೂಪನ (೦) | ಕುದುರೆಯ ಮೇಲೆ ಬಿಲ್ ಪರಸು ತೀರಿಗೆ ಸೂಲಿಗೆ ಪಿಂಡಿವಾಳಮೆತ್ತಿದ ಕರವಾಳವಾರ್ದ್ದಿಡುವ ಕರ್ಕ್ಕಡೆ ಪಾಱುವ ಚಕ್ರಮೆನ್ದೊಡೆನ್ತೊ

೧೩. ದ ಱುವರೆನ್ತು ಪಾಯಿಸುವರೆನ್ತು ತಱುಂಬುವರೆನ್ತು ನಿಲ್ಪರೆನ್ತೊಡಱು ವರೆನ್ತು ಲಕ್ಷಣನೊಳಾನ್ತು ಬುದ್ರ್ದುಂಕುವರನ್ಯ ಭೂಭುಜರ್ | ಎನೆನೆ

೧೪. ಗಳ್ದ ಲಕ್ಷಿ ಭೂಪತಿ | ಜನಪತಿ ಭುವನೈಕಮಲ್ಲ ದೇವಾ ದೇಶಂ | ತನಗೆ ಸೆದಿರೆ ಮಾಡಿಸಿದಂ | ಜಿನಶಾಸನ ವಿಧ್ಧಿಯಂ ಪ್ರವರ್ದ್ಧನಮಾಗಲು || ಆಚೈತ್ಯಾಲ

೧೫. ಯದ ಪೂರ್ಬ್ಬಾವತಾರ ಮೆನ್ತೆನೆ | ಕಂ || ಶ್ರೀವಸುಧೇಶನ ಬಾವಂ | ರೇವಕ ನಿರ್ಮ್ಮಡಿಯ ವಲ್ಲಭಂ ಬೂತುಗ ನಾ | ತ್ಮಾವಗತ ಸಕಳಶಾಸ್ತ್ರನಿ | ಳಾ ವಿಶ್ರುತ ಕೀರ್ತ್ತಿ

೧೬. ಗಂಗಮಣ್ಡಲನಾಥ ||ವ್ರಿ || ರೂಡಿಗೆ ರೂಡಿವೆತ್ತೆಸೆದ ಬೆಳ್ವಲದೇಶಮನಾಳ್ದ ಗಂಗಪೆ | ರ್ಮ್ಮಾಡಿಗಳಿಂದ ಮಣ್ಣಿಗೆಱೆ ನಾಳ್ಕೆಱೆ ವಟ್ಟೆನಿ.

೧೭. ಸಿತ್ತುನಾಡ ನಾ| ಡಾಡಿಗಳುಂಬಮೆಂಬಿನೆಗಮಾ ಪುರದೊಳು ಜಯದುತ್ತ ರಂಗಪೆ | ರ್ಮ್ಮಾಡಿಯಿನಾಯ್ತು ಬೂತುಗ ನರೇನ್ದ್ರನಿನಲ್ಲಿ ಜಿ

೧೮. ನೇಂದ್ರ ಮಂದಿರ (೦) || ಟ್ರ || ಸಂಗತಮಾಗೆ ಮಾಡಿ ತಳವ್ರಿತ್ತಿಯನಲ್ಲಿಗೆ ಮೂಡಗೇರಿ ಗುಮ್ಮುಂಗೊಳನಾದಿಯಾಗೆ ನೆಗಳ್ದಿಟ್ಟಗೆ ಗಾವರಿವಾಡಮೆಂಬ ಬಾಡಂಗಳ ಶಾಸನಂ ಬೆರಸು ಸರ್ವ್ವನಮಸ್ಕಮಿವೆಂದು ಬಿಟ್ಟುಕೊಟ್ಟಂ ಗುಣಕೀರ್ತ್ತಿ ಪಣ್ಡಿತರ್ಗ್ಗೆ ಭಕ್ತಿ

೨೦. ಯಿನುತ್ತಮ ದಾನ ಶಕ್ತಿಯಿಂ || ಕಂ || ಉದಿತೋದಿತಮೆನೆ ವಿಭವಾಸ್ಪದ ಮೆನೆ ಭುವನಯ್ಯವಂದ್ಯಯೆನೆ ಸಂಚಳಮಾಗದೆ ಗಂಗಾ

೨೧. ನ್ವಯಮುಳ್ಳಿನಮಿದು ಸರ್ವ್ವ ನಮಸ್ಯವಾಗಿ ನಡೆಯುತ್ತಮಿರಲು || ವ್ರಿ ||

೨೨. ಪರಮಶ್ರೀ ಶಾಸನಕ್ಕೆ ಮೊದಲಾದೀ ಮೂಲಸಂಘಂ ನಿರನ್ತರ ಮೊಪ್ಪುತ್ತಿರೆ ನನ್ದಿ ಸಂಘವೆಸರಿಂದಾದನ್ವಯಂ ಪೆಂಪುವೆತ್ತಿರೆ ಸನ್ದರ್ವ್ವಳಗಾಲಿ ಮುಖ್ಯಗಣದೊಳು ಗಂಗಾನ್ವಯಕ್ಕಿ

೨೩. ನ್ನಿವರ್ಗ್ಗುರುಗಳ್ ತಾಮೆನೆ ವರ್ದ್ಧಮಾನ ಮುನಿನಾಥರ್ಧಾರಿಣೀ ಚಕ್ರದೊಳ್ ಶ್ರೀ ನಾಥ ಜ್ಜ್ವರ್ಲನ ಮಾಗ್ಗೋತ್ತಮ ರೆನಿಸಿ ತಪಃ ಖ್ಯಾತಿಯಂ

೨೪. ತಾಳ್ದಿದ ಸ್ಸರ್ವಜ್ಞಾನ್ನಾತ್ಮರ್ವ್ವರ್ದ್ಧ ಮಾನ ಪ್ರವರರವರ ಶಿಷ್ಯರ್ಮ್ಮಹಾ ವಾದಿಗಳ್ ವಿದ್ಯಾನನ್ದ ಸ್ವಾಮಿಗಳ್ ತನ್ಮುನಿಪತಿಗನುಜತ್ರ್ವಾರ್ಕ್ಕಿಕಾ

೨೫. ಕ್ಕಾಭಿಧಾ ನಾಧೀನರ್ಮ್ಮಣಿಕ್ಯ ನನ್ದಿ ವ್ರತಿಪತಿಗಳವರ್ಸ್ವಾಸನೋದಾತ್ತ ಹಸ್ತರ್ | ತದಪತ್ಯಗ್ಗುರ್ಣ ಕೀರ್ತ್ತಿ ಪಣ್ಡಿತರವರ್ತ್ತಚ್ಛಾಸ

೨೬. ನ ಖ್ಯಾತಿ ಕೋವಿದರಾ ಸೂರಿಗಳಾತ್ಮಜರ್ವ್ವಿಮಳ ಚನ್ದ್ರರ್ತ್ತಪದಾಂ ಭೋಜ ಷಟ್ಟದರುದ್ಯದ್ಗುಣ ಚನ್ದ್ರರನ್ತವರ ಶಿಷ್ಯರ್ ನೋಡಿ ಶಾಸ್ತ್ರಾ

೨೭. ರ್ತ್ಥ ದೊಳ್ವಿದಿತರಾ ಗಣ್ಡವಿಮುಕ್ತರಿನ್ನಭಯನನ್ದ್ಯಾಚಾರ್ಯ್ಯ ರಾರ್ಯೋತ್ತ ಮರ್ || ವ್ರಿ || ಪೊಲೆ ಚೋಳಂ ನೆಲೆಗೆತ್ತು ತನ್ನ ಕುಳ

೨೮. ಧರ್ಮ್ಮಚಾರ್ ಮಂ ಬಿಟ್ಟು ಬೆಳ್ವಲ ದೇಶಕ್ಕಡಿಯಿಟ್ಟು ದೇವಗ್ರಿಹ ಸಂದೋಹಂಗಳಂ ಸುಟ್ಟು ಕಯ್ಯಲೆ ಪಾಪಂ ಬೆಳೆದತ್ತೆ

೨೯. ನಲ್ಕೆ ಧುರದೊಳು ತ್ರೈಳೋಕ್ಯ ಮಲ್ಲಂಗೆ ಪಂದಲೆಯಂ ಕೊಟ್ಟಸುವಂ ಬಿಸುಟ್ಟು ನಿಜವಂಶೋಚ್ಛತ್ರಿಯಂ ಮಾಡಿದ (೦) || ಕ || ಶ್ರೀ ಪೆರ್ಮ್ಮಾ

೩೦. ನಡಿ ಮಾಡಿಸಿದೀ ಪರಮ ಜಿನಾಲಯಂಗಳಂ ಪೊಲೆವಟ್ಟಿರ್ದ್ದ ಪಾಣ್ಡ್ಯ ಚೋಳನೆಂಬ ಮಹಾಪಾತಕ ತಿವುಳನಳಿದಧೋಗತಿಗಿಳಿ

೩೧. ದ (೦) || ವ್ರಿ || ಬಳಿಕೀ ಬೆಳ್ವಲ ದೇಶಮಂ ಪಡೆದ ದಂಡಾಧೀಶ ಸಾಮನ್ತ ಮಂಡಳಿಕರ್ ಧರ್ಮ್ಮದ ಬಟ್ಟೆಗೆಟು ನಡೆಯುತ್ತಿರ್ದ್ದಲ್ಲಿ ತಜ್ಞಾನಂ ಮನಂ

೩೨. ಗೊಳೆ ಕಾಳೀಯ ಗುಣೇತರಂ ಕೃತಯುಗಾಚಾರಾನ್ವಿತಂ ಲಕ್ಷ್ಮ ಮಂಡಳಿಕಂ ನಿರ್ಮ್ಮಳ ಧರ್ಮ್ಮವತ್ಸಳೆಯ ನಷ್ಟೋದ್ಧಾರಮಂ ಮಾಡಿ

೩೩. ದಂ || ವೃ || ಈ ನೆಲೆದೊಳು ನೆಗಳ್ತೆಯ ಪೊಗಳ್ತೆಯ ಬಾಳ್ತೆಯ ಪುಣ್ಯ ತೀರ್ತ್ಥ ಸನ್ನಾನದೊಳಿನ್ನವಿಲ್ಲೆನಿಸಿ ಸಂದುದು ದಕ್ಷಿಣ ಗಂಗೆ ತುಂಗಭ

೩೪. ದ್ರಾನದಿ ತನ್ನದೀ ತಟದೊಳೊಪ್ಪುವ ಕಕ್ಕರಗೊಣ್ಡಮೆಂಬಧಿಷ್ಠಾನ ದೊಳುರ್ವ್ವರಾಧಿಪತಿ ಚಕ್ರಧರಂ ನೆಲಸಿರ್ದ್ದ ಬೀಡಿನೊಳ್ ||

೩೫. || ವ್ರಿ || ಶಕ ಕಾಳಂ ಗುಣಲಬ್ಧಿರ್ಮ್ಮಂಧರಗಣ ನಾ ವಿಖ್ಯಾತ ಮಾಗಲ್ ವಿರೋಧ ಕ್ರಿದಾಬ್ದಂ ಬರೆ ಚೈತ್ರಮಾಗೆ ವಿಶ್ವತ್ಸಂಕ್ರಾನ್ತಿಯೊಳ್ ಪು

೩೬. ಷ್ಯ ತಾರಕೆ ಪೂರ್ಣ್ಣಾಂಗಿರಮಾಗೆ ಚಕ್ರಧರ ದತ್ತಾದೇಶದಿಂ ದೇಶಪಾಲಕ ಚೂಡಾಮಣಿ ಧರ್ಮ್ಮವತ್ಸಳೆಯ ನತ್ಯುತ್ಸಾಹದಿಂ

೩೭. ಮಾಡಿದ (೦) || ಕ || ತ್ರಿಭುವನ ಚನ್ದ್ರ ಮುನೀನ್ದ್ರರನಭಿವಂದಿಸಿ ಭಕ್ತಯಿಂದೆ ಕಾಲ್ಗಚ್ಚಿ ಜಗತ್ಪ್ರಭುವಿನ ಬೆಸದಿಂ ಲಕ್ಷ್ಮಣ ವಿಭು

೩೮. ಕೊಟ್ಟಂ ಹಸ್ತಧಾರೆಯಿಂ ಶಾಸನಮ (೦) || ವೃ || ಎರಡತುನೂಱ ಬಾಡದೊಳಗೀ ಜಿನಗೇಹವೆ ಪೂಜ್ಯಮೆಂದದಕ್ಕರಸರ ಕಾ

೩೯. ಣ್ಕೆ ಬಿಟ್ಟುಬಿಯಮುಂ ಬಳಂ ಉಣ್ಬಳಿ ದಾಯಮಾದಿಯಾಗೆರಡಱುವತ್ತು ಪೊನ್ನಱುವಣಂ ಸಮಕಟ್ಟೆನೆ ಮಾಡಿ ಶಾಸನಂ

೪೦. ಬರೆಯಿಸಿ ಕೊಟ್ಟ ಧರ್ಮ್ಮ ಗುಣಮಂ ಮೆಱೆದಂ ನೃಪಮೇರು ಲಕ್ಷ್ಮಣ (೦) || ವ್ರ || ಜಿನನಾಥಾವಾಸಮಂ ವಿಶ್ವರಿತು ನಿಭಮಂ ಕಷ್ಟ

೪೧. ಕಾಲೇಯ ದುರ್ಬ್ಭಾವನೆಯಿಂ ಚಾಂಡಾಳ ಚೋಳಂ ಸುಡಿಸಿ ಕಿಡಿಸೆ ವಿಚ್ಛಿತ್ತಿಯಾಗಿರ್ದ್ದುದೇಂ ನೆಟ್ಟನೆ ನಷ್ಟೋದ್ಧಾರಮಂ ಶಾಶ್ವತಯ

೪೨. ತಿಶಯ ಮಾಯ್ತೆಂಬಿನಂ ಮಾಡಿ ತಚ್ಛಾಸನಮಾಚಂದ್ರಾರ್ಕ್ಕತಾರಂನಿಲೆ ನಿಲಿಸಿದನೇಂ ಧನ್ಯನೋ ಲಕ್ಷ್ಮಭೂಪಂ || ಕ || ಅರಸರ್ಗ್ಗೆ ಸೇಸೆಯೆನ್ದ

೪೩. ರಸರ ಕಾಣಿಕೆಯೆನ್ದು ದಾಯಧರ್ಮ್ಮದ ತೆಱೆಯೆನ್ದಱುವಣದಿಂದಗ್ಗಳಮೆನ್ದರೆ ವೀಸ ಮನಿಕ್ಕಿ ಕೊಂಡವರ್ಚ್ಚಂಡಾಳರು ||

೪೪. ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಸಾಮನ್ತ ಭುಜ ಬಳೋಪಾರ್ಜ್ಜಿತ ವಿಜಯಲಕ್ಷ್ಮೀಕಾಂತಂ ಸಮಸ್ತಾರಿ ವಿಜಯ.

೪೫. ದಕ್ಷದಕ್ಷಿಣ ದೋರ್ದಣ್ಡಂ ಕತ್ತಲೆ ಕುಲ ಕಮಳ ಮಾರ್ತ್ತಣ್ಡಂ ಮಯೂರಾವತೀ ಪುರವರಾಧೀಶ್ವರಂ ಜ್ವಾಲಿನೀಲಬ್ಧವರ ಪ್ರಸಾದ ಕ

೪೬. ರ್ಪ್ಪೂರವರ್ಷಂ ಜಿನಧರ್ಮ್ಮ ನಿರ್ಮ್ಮಳಂ ನೆಱೆ ಕಾ ಟಿಮಂ ಕಕಾಱನಾಮಾದಿ ಸಮಸ್ತ ಪ್ರಶತಿ ಸಹಿತಂ ಶ್ರೀಮನ್ಮಹಾಸಾಮನ್ತ ಬೆ

೪೭. ಳ್ವಲಾಧಿಪತಿ ಭುಜಬಳ ಕಾಟರಸರು || ಕ || ಜಗಮೆಲ್ಲಂ ದೇಸೆಗೆ ಕಯ್ಯುಗಿಗೆಮ ಕೊಟ್ಟಱೆಯನೊನ್ದು ಕಾಗಿಣೆಯುಮ

೪೮. ನಾ ಗಗನದೊಳಿರ್ಪ್ಪಾದಿತ್ಯಂ ಬಗೆದುದನಿತ್ತಪನೆ ಬೆಳ್ವಲಾದಿತ್ಯನವೊಲು || ಕ || ಇನ್ತೆನಿಸಿದ ಬೆಳ್ವಲಾದಿತ್ಯಂ ಶಕವರ್ಷ ೯೯೪ ನೆ

೪೯. ಯ ಪರಿಭಾವಿ ಸಂವತ್ಸರದ ಪುಷ್ಯ ಶುದ್ಧ ಪಂಚಮಿ ಬ್ರಿಹಸ್ಪತಿ ವಾರದಂದಣ್ಣಿಗೆಱೆಯ ಗಂಗ ಪೆರ್ಮ್ಮಾಡಿಯ ಬಸ

೫೦. ದಿಯ ದಾನಸಾಲೆಗಲ್ಲಿಗಾಳ್ವ ಗಾವರಿವಾಡದ ತಮ್ಮ ಸಿವಟದ ಮತ್ತ ರಯ್ವತ್ತುಮನಣ್ಣಿಗೆಱೆಯೊಳು ಕ್ರಯವಿಕ್ರಮ

೫೧. ದಿಂ ಯಲ್ಲಿಯಾಚಾರ್ಯ್ಯರು ತ್ರಿಭುವನ ಚಂದ್ರ ಪಂಡಿತರ ಕಾಲಂ ಕರ್ಚ್ಚಿಧಾರಾಪೂರ್ವ್ವಕಂ ಮಾಡಿಬಿಟ್ಟು ಕೊಟ್ಟರು |

೫೨. ಸ್ವಸ್ತಿ ಸಮಸ್ತ ವಿನಮದಮರ ಮಕುಟತಟ ಘಟಿತ ಶೋಣ ಮಾಣಿಕ್ಯ ಮೌಕ್ತಿಕ ಮಯೂಖ ಕುಂಕುಮ ಮಳಯಜಾಭ್ಯರ್ಚ್ಚಿ

೫೩. ತ ಶ್ರೀಮದರ್ಹತ್ಪರಮೇಶ್ವರ ಪ್ರಣೀತ ಪರಮಾಗಮ ವಿಶಾರದ ಮನವರತ ಪರಮಾಗಮೋಪದೇಶ ಪ್ರಸಂಗರುಮಪ್ಪ ಶ್ರೀಮದ್ ಉ

೫೪. ದಯಚಂದ್ರ ಸೈದ್ಧಾಂತ ದೇವರ ದಿವ್ಯಶ್ರೀ ಪಾದ ಪದ್ಮಾರಾಧಕರುಂ ಶ್ರೀಮದ್ ಬಳಾತ್ಕಾರ ಗಣಾಂಬುಜ ಸರೋವರರಾಜಹಂಸರುಮಪ್ಪಶ್ರೀ

೫೫. ಮತ್ ಸಕಳ ಚಂದ್ರದೇವರು ಶ್ರೀಮದ್ರಾಜಧಾನಿ ಬಟ್ಟಣ ಮಣ್ಣಿಗೆಱೆಯ ಮಹಾಸ್ಥಾನಂ ಶ್ರೀಮದ್ ಗಂಗಪೆರ್ಮ್ಮಾಢಿಯ ಬಸ

೫೬. ದಿಗಾಳ್ವ ಗ್ರಾಮಾದಿ ವಾಡದಲು ಯಾಚಾರ್ಯ್ಯರುಂ ಚವುಂಡಗಾವುಂಡ ಮುಖ್ಯವಾಗಿ ಹೆಗ್ಗಡೆ ಸಹಿತ ಮೂವತ್ತು ಮನುಷ್ಯ

೫೭. ದೇವ ಪುತ್ರರ್ಗ್ಗೆ ಕೊಟ್ಟವ್ರಿತ್ತಿಯಕ್ರಮ | ಚಂಡವ್ವೆಯ ಮಗಂ ಕೇತಗಾವುಂಡ ಯಾಚಾರ್ಯ್ಯರ್ಗ್ಗೆ ಪಾದ ಪೂಜೆಯಂ ಕೊಟ್ಟು

೫೮. ರಿಯರ್ಗ್ಗೆ ಬೆಸಕೆಯ್ದುಂಬ ವ್ರಿತ್ತಿ ಮತ್ತರ್ಪ್ಪ ನ್ನೆರಡುಂ ಕೇತಗಾವುಂಡ ಯಾಚಾರ್ಯ್ಯರ್ಗ್ಗೆ ಪಾದ ಪೂಜೆಯಂ ಕೊಟ್ಟು

೫೯. ತಮ್ಮ ಸೇನಗಣದ ಬಸದಿಗೆ ಹೂಲಿಗೊಳದ ಸೀಮೆವಿಡಿದು ಕುಳುಪಳ್ಳದಿಂ ಪಡುವಲು ಮತ್ತರೆಂಟುಯಯಱುವಣಂ ಗದ್ಯಾಣಂ

೬೦. ನಾಲ್ಕಱಿಂದಧಿಕ ಕೊಂಡವರ್ಚ್ಚಾಂಡಾಳರು || ಎಮ್ಮೆಯ ಕೇತಿ ಸೆಟ್ಟಿಯ ಸಾಮ್ಯಕ್ಕೆ ಮತ್ತರೆಂಟು ಮನೆವೊಂದು ಭೋಗವಾಡಗೆ ಗದ್ಯಾಣಂನಾ

೬೧. ಲ್ಕು ಕಣಬಿಯ ಸೆಟ್ಟಿಯ ಬಮ್ಮಿ ಸೆಟ್ಟಿಯ ಸಾಮ್ಯಕ್ಕೆ ಮತ್ತರೆಂಟು ಮನೆವೊಂದು ಭೋಗವಾಡಗೆ ಗದ್ಯಾಣಂ ನಾಲ್ಕು ಕತ್ತೆ

೬೨. ಯ ದಾರಿ ಸೆಟ್ಟಿಯ ಸಾಮ್ಯಕ್ಕೆ ಮತ್ತರೆಂಟು ಮನೆವೊಂದು ಭೋಗವಾಡಗೆ ಗದ್ಯಾಣಂ ನಾಲ್ಕು ಹೆಬ್ಬೆಯ ದೇವಿ ಸೆಟ್ಟಿಯ

೬೩. ಯ ಸಾಮ್ಯಕ್ಕೆ ಮತ್ತರೆಂಟು ಮನೆವೊಂದು ಭೋಗವಾಡಗೆಗದ್ಯಾಣಂ ನಾಲ್ಕು ಗೂಳಿಯ ಚೌಡಿ ಸೆಟ್ಟಿಯ ಸಾಮ್ಯಕ್ಕೆ ಮತ್ತ

೬೪. ರೆಂಟು ಮನೆವೊಂದು ಬೋಗವಾಡಗೆ ಗದ್ಯಾಣಂ ನಾಲ್ಕು ರುಡ್ಡಲಿಯ ಸಂಕಿ ಸೆಟ್ಟಿಯ ಸಾಮ್ಯಕ್ಕೆ ಮತ್ತರೆಂಟು ಮನೆ

೬೫. ವೊಂದು ಭೋಗ ವಾಡಗೆ ಗದ್ಯಾಣಂ ನಾಲ್ಕು ಕಂದಲ ಮಲ್ಲಿ ಸೆಟ್ಟಿಯ ಸಾಮ್ಯಕ್ಕೆ ಮತ್ತರೆಂಟು ಮನೆವೊಂದು ಭೋಗವಾಡಗೆ ಗದ್ಯಾಣಂ

೬೬. ನಾಲ್ಕು | ಮಲ್ಲವ್ವೆಯ ಪುತ್ರರು ಚಂದಿ ಸೆಟ್ಟಿಯ ಸಾಮ್ಯಕ್ಕೆ ಮತ್ತರೆಂಟು ಮನೆವೊಂದು ಭೋಗವಾಡಗೆ ಗದ್ಯಾಣಂ ನಾಲ್ಕು ಮಾಧ

೬೭. ವ ಸೆಟ್ಟಿಯ ಸಾಮ್ಯಕ್ಕೆ ಮತ್ತರೆಂಟು ಮನೆವೊಂದು ಭೋಗವಾಡಗೆ ಗದ್ಯಾಣಂ ನಾಲ್ಕು ಬಯ್ಸರ ಬೊಪ್ಪಿ ಸೆಟ್ಟಿಯ ಸಾಮ್ಯ

೬೮. ಕ್ಕೆ ಮತ್ತರೆಂಟು ಮನೆವೊಂದು ಭೋಗವಾಡಗೆ ಗದ್ಯಾಣಂ ನಾಲ್ಕು ನೇಮಿಸೆಟ್ಟಿಯ ಸಾಮ್ಯಕ್ಕೆ ಮತ್ತರೆಂಟು ಮನೆವೊಂದು

೬೯. ಭೋಗವಾಡಗೆ ಗದ್ಯಾಣಂ ನಾಲ್ಕು ಗೊರವರ ಬಮ್ಮಿ ಸೆಟ್ಟಿಯ ಸಾಮ್ಯಕ್ಕೆ ಮತ್ತರೆಂಟು ಮನೆವೊಂದು ಭೋಗವಾಡಗೆ ಗದ್ಯಾಣಂ ನಾಲ್ಕು

೭೦. ಮಯಿಲಿ ಸೆಟ್ಟಿಯ ಸಾಮ್ಯಕ್ಕೆ ಮತ್ತರೆಂಟು ಮನೆವೊಂದು ಭೋಗ ವಾಡಗೆ ಗದ್ಯಾಣಂ ನಾಲ್ಕು ಗೊರವರ ಬೋಸಿ ಸೆಟ್ಟಿಯ ಸಾಮ್ಯಕ್ಕೆ ಮತ್ತ

೭೧. ರೆಂಟು ಮನೆವೊಂದು ಭೋಗವಾಡಗೆ ಗದ್ಯಾಣ್ ನಾಲ್ಕು ಚಂದಿ ಸೆಟ್ಟಿಯ ಸಾಮ್ಯಕ್ಕೆ ಮತ್ತರೆಂಟು ಮನೆವೊಂದು ಭೋಗವಾಡಗೆ ಗದ್ಯಾ

೭೨. ಣಂ ನಾಲ್ಕು ಎಮ್ಮೆಯರ ಚವುಡಿ ಸೆಟ್ಟಿಯ ಸಾಮ್ಯಕ್ಕೆ ಮತ್ತರೆಂಟು ಮನೆವೊಂದು ಭೋಗವಾಡಗೆ ಗದ್ಯಾಣಂ ನಾಲ್ಕು ಹೊಯ್ಸರ ಚವು

೭೩. ಡಿ ಸೆಟ್ಟಿಯ ಸಾಮ್ಯಕ್ಕೆ ಮತ್ತರೆಂಟು ಮನೆವೊಂದು ಭೊಗವಾಡಗೆ ಗದ್ಯಾಣಂ ನಾಲ್ಕು ಕೆಲ್ಲರ ಗೊರವಿ ಸೆಟ್ಟಿಯ ಸಾಮ್ಯಕ್ಕೆ ಮ

೭೪. ತ್ತರೆಂಟು ಮನೆವೊಂದು ಭೋಗವಾಡಗೆ ಗದ್ಯಾಣಂ ನಾಲ್ಕು ತಾಳ ಬಮ್ಮಿ ಸೆಟ್ಟಿಯ ಸಾಮ್ಯಕ್ಕೆ ಮತ್ತರೆಂಟು ಮನೆವೊಂದು ಭೋಗ

೭೫. ವಾಡಗೆ ಗದ್ಯಾಣಂ ನಾಲ್ಕು ಕಡಬರ ದೇವಿ ಸೆಟ್ಟಿಯ ಸಾಮ್ಯಕ್ಕೆ ಮತ್ತರೆಂಟು ಮನೆವೊಂದು ಭೋಗವಾಡಗೆ ಗದ್ಯಾಣಂ ನಾಲ್ಕು ಮಂ

೭೬. ಚಲ ಬೋಸಿ ಸೆಟ್ಟಿಯ ಸಾಮ್ಯಕ್ಕೆಮತ್ತರೆಂಟು ಮನೆವೊಂದು ಭೋಗವಾಡಗೆ ಗದ್ಯಾಣಂ ನಾಲ್ಕು ಬೆಣೆಲ ಮಲ್ಲಿಸೆಟ್ಟಿಯ ಸಾಮ್ಯ.

೭೭. ಕ್ಕೆ ಮತ್ತರೆಂಟುಮನೆವೊಂದು ಭೋಗವಾಡಗೆ ಗದ್ಯಾಣಂ ನಾಲ್ಕು ಬೆಣ್ಣೆಯ ನಾಳಿ ಸೆಟ್ಟಿಯ ಸಾಮ್ಯಕ್ಕೆ ಮತ್ತರೆಂಟು

೭೮. ಮನೆವೊಂದು ಭೊಗವಾಡಗೆ ಗದ್ಯಾಣಂ ನಾಲ್ಕು ದೊಡ್ಡರ ಕೇತಿ ಸೆಟ್ಟಿಯ ಸಾಮ್ಯಕ್ಕೆ ಮತ್ತರೆಂಟು ಮನೆವೊಂದು ಮತ್ತರೆಂಟು

೭೯. ಡಗೆ ಗದ್ಯಾಣಂ ನಾಲ್ಕು ಮಂಜಡಿಯ ಯೇಚಿ ಸೆಟ್ಟಿಯ ಸಾಮ್ಯಕ್ಕೆ ಮತ್ತರೆಂಟು ಮನೆವೊಂದು ಭೋಗವಾಡಗೆ ಗದ್ಯಾಣಂ

೮೦. ನಾಲ್ಕು ಗಂಡಿ ಸೆಟ್ಟಿಯ ಸಾಮ್ಯಕ್ಕೆ ಮತ್ತರೆಂಟು ಮನೆವೊಂದು ಭೋಗವಾಡಗೆ ಗದ್ಯಾಣಂ ನಾಲ್ಕು ಮುರಿಯರ ಕಲಿ ಸೆ

೮೧. ಟ್ಟಿಯ ಸಾಮ್ಯಕ್ಕೆ ಮತ್ತರೆಂಟು ಮನೆವೊಂದು ಭೋಗವಾಡಗೆ ಗದ್ಯಾಣಂ ನಾಲ್ಕು ಬಯಿಸರ ಬಸವಿ ಸೆಟ್ಟಿಯ ಸಾಮ್ಯಕ್ಕೆ ಮತ್ತ

೮೨. ರೆಂಟು ಮನೆವೊಂದು ಭೋಗವಾಡಗೆ ಗದ್ಯಾಣಂ ನಾಲ್ಕು ನೂತಿ ಸೆಟ್ಟಿಯ ಸಾಮ್ಯಕ್ಕೆ ಮತ್ತರೆಂಟು ಮನೆವೊಂದು ಭೊಗವಾಡಗೆ ಗದ್ಯಾಣಂ

೮೩. ನಾಲ್ಕು ಚಿಕ್ಕಿ ಸೆಟ್ಟಿಯ ಸಾಮ್ಯಕ್ಕೆ ಮತ್ತರೆಂಟು ಮನೆವೊಂದು ಭೋಗವಾಡಗೆ ಗದ್ಯಾಣಂ ನಾಲ್ಕು ಯಿಂತೀ ದೇವ ಪುತ್ರಿಕರೊಳಗೆ ಯಾವ

೮೪. ನೊರ್ವ್ವನ್ ಧರ್ಮ್ಮಕ್ಕಂ ಯಾಚಾರ್ಯ್ಯಗ್ಗಂ ವಿರೋಧಿಯಾಗಿ ರಾಜಗಾಮಿತ್ವಂ ಮಾಡಿದನಪ್ಪಡೆ ವ್ರಿತಿಚ್ಛೇದ ಸಮಯ ಬಾಹ್ಯ

೮೫. ಸ್ವಸ್ತಿ ಸಮಸ್ತ ಪ್ರಶಸ್ತಿ ಶ್ರೀಮಾನ್ ಮಹಾಪ್ರಧಾನಂ ವಸುಧೈಕ ಬಾಧವಂ ಶ್ರೀರೇಚದೇವ ದಂಡನಾಥ ಬಟ್ಟಕೆಱೆ

೮೬. ಯ ಶ್ರೀ ಕಲಿದೇವಿ ಸ್ವಾಮಿ ಜಿನಶ್ರೀಪಾದಾರ್ಚ್ಚನೆಗೆ ಕರ್ಪ್ಪೂರ ಕುಂಕುಮ ಶ್ರೀಗಂಧ ಸಹಿತ ಯಷ್ಟವಿಧಾರ್ಚ್ಚನೆಗೆ

೮೭. ರಿಹಾರವಾಗಿ ಪ್ರತಿಪಾಲಿಪರು || ದಕ್ಷಿಣ ಐಯಾವೊಳೆಯುಮಪ್ಪ ಗ್ರಾಮದಿ ವಾಡಕ್ಕೆ ಶ್ರೀಗಂಗ ಪೆರ್ಮ್ಮಾಡಿ

೮೮. ಯ ಬಸದಿಯ ಪುರದ ಮರ್ಯ್ಯಾದೆಯ ಘಳೆ ಮೂವತ್ತೆಂಟು ಗೇಣು ಹಸ್ತ ಬೆಂಗಳ್ಳದಂಗೆ ವ್ರಿತ್ತಿ ಸಲ್ಲದು | ವರ್ದ್ಧತಾಮ ಜಿನಶಾ

೮೯. ಸನ (೦) ||

೯೦. ಗಂಗಾಸಾಗರ ಯಮುನಾ ಸಂಗಮದೊಳು ಬಾಣರಾಸಿಗಯೆಯೆಂಬೀತೀರ್ತ್ಥಂ ಗಳೊಳಾತ್ಮ ಕುಳ ದ್ವಿಜ ಪುಂಗ ವಗೋಕುಲ ಮನಳಿದಕಿಂಕಿದನಳಿ

೯೧. ದರು || ಸ್ವದತ್ತಾಂ ಪರದತ್ತಾಂ ವಾಯೋಹರೇತ ವಸುಂಧರಾಂ ಷಷ್ಟಿರ್ವ್ವರ್ಷ ಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿ ||

೯೨. ಯಾಚಾರ್ಯ್ಯ ಯೆಕ್ಕಟಿಗನಾಗಿ ಬೆಸಕೆಯ್ದುಂಬ ಟ್ರಿತ್ತಿ ಕುಱಿಬರ ಕತೆ . . . . . . . .

೯೩. ನ್ದು || ಯಾಚಾಯ್ಯರು ಚವುಡ ಗವುಡನ ಹೆಸರಿಟ್ಟುದಕ್ಕೆ ಮೂಗನಾದ ರನ. . . . .

೯೪. ಳದ ಸೀಮೆಯಲು ವ್ರಿತ್ತಿ ಮತ್ತರು ವೊಂದು ಯದು ಹೊಲಗೆಜ್ ||

೫. ಚಾರಿತ್ರಿಕ ಸಂಗತಿಗಳು ಮತ್ತು ವ್ಯಕ್ತಿಗಳು.

ಈ ಶಾಸನದ ಒಡಲಲ್ಲಿ ಹಲವಾರು ರಾಜಕೀಯ ಮಹತ್ವದ ಅಂಶಗಳು ಹೆಣೆದು ಕುಳಿತಿವೆ. ಈ ಶಾಸನ ನೆಯ್ಗೆಯಲ್ಲಿರುವ ಹಾಸು ಹೊಕ್ಕುಗಳನ್ನು ಬಿಡಿಸಿ ನೋಡಿದಾಗಲೇ ಅದರೊಳಗಿರುವ ಎಳೆಗಳು ಸರಿಯಾಗಿ ಕಾಣುವುದು. ಮೊದಲ ಓದಿಗೆ ಈ ಶಾಸನ ಕಲ್ಯಾಣಿ ಚಾಳುಕ್ಯರ ಕಾಲದ್ದು ಎಂಬುದು ನಿಚ್ಚಳವಾಗಿ ಕಾಣುತ್ತದೆ. ಶಾಸನ ಪಾಠದಲ್ಲಿರುವ ಪ್ರತಿಯೊಂದು ಸಾಲನ್ನೂ ಕೆದಕಿ–ಬೆದಕಿ ಅದರೊಳಗಿನ ಹೂರಣವನ್ನು ಹರಡಿಟ್ಟಂತೆ ಶಬ್ದಗಳ ಮರೆಯ ನಿದಾನ ಬೆಳಗುತ್ತದೆ.

ಈ ಶಾಸನ ಕವಿ ತನ್ನ ಹಲವು ಶಕ್ತಿ ಚಾತುರ್ಯಗಳನ್ನು ಇಲ್ಲಿ ತೋರಿದ್ದಾನೆ. ಶಾಸನಕವಿಯ ಸೃಷ್ಟಿಶಕ್ತಿಯನ್ನು ಇತರ ಮುಖಗಳನ್ನು ಕ್ರಮೇಣ ಪರಿಚಯಿಸಿಕೊಳ್ಳ ಬಹುದು. ಈ ಹಂತದಲ್ಲಿ ಆತನ ಚಾರಿತ್ರಿಕ ಪ್ರಜ್ಞೆಯನ್ನು ವಿಶ್ಲೇಷಿಸುವುದು ಮುಖ್ಯ ಪ್ರಯತ್ನ. ಇದರಲ್ಲಿಯೂ ಕವಿ ಹಿನ್ನೆಲೆ ತಂತ್ರವನ್ನು ಅಳವಡಿಸಿದ್ದಾನೆ. ಜಿನಸ್ತುತಿಯ ತರುವಾಯ ಈ ಶಾಸನದ ಮುಖ್ಯ ಭಾಗ ಅಂದರೆ ಮೂಲ ಶಾಸನ ರಚನೆಯಾದಾಗ ಆಳುತ್ತಿದ್ದ ಭುವನೈಕ ಮಲ್ಲದೇವನನ್ನು [೧೦೬೮–೭೬] ಕೇವಲ ಹೆಸರಿಸಿ, ಕೂಡಲೆ ಆತನ ಆಸರೆಯಲ್ಲಿ ಆಡಳಿತ ಮಾಡುತ್ತಿದ್ದ ಲಷ್ಮನೃಪನನ್ನು ಪ್ರಶಸ್ತಿಗಳ ಸರಮಾಲೆತೊಡಿಸಿ ಉಜ್ವಲವಾಗಿ ವರ್ಣಿಸಿದೆ (೪–೧೪) ಈ ಹತ್ತು ಸಾಲುಗಳಲ್ಲಿ ಲಕ್ಷ್ಮಭೂಪತಿಯ ವ್ಯಕ್ತಿತ್ವದ ಛಾಪು ಸಜೀವವಾಗಿ ಮೂಡಿದೆ.

ಎನೆನೆಗಳ್ದ ಲಕ್ಷ್ಮ ಭೂಪತಿ
ಜನಪತಿ ಭುವನೈಕಮಲ್ಲದೇವಾದೇಶಂ
ತನಗೆಸೆದಿರೆ ಮಾಡಿಸಿದಂ

ಜಿನಶಾಸನ ವೃದ್ಧಿಯಂ ಪ್ರವರ್ಧನಮಾಗಲು ||

ಎಂಬುದಾಗಿ, ಲಕ್ಷ್ಮಭೂಪತಿಯು ಜನಪತಿಯಾದ ಭುವನೈಕಮಲ್ಲದೇವನ ಅಪ್ಪಣೆಯಂತ ಜೈನಧರ್ಮವು ವೃದ್ಧಿಗೊಂಡು ಪ್ರವರ್ದಮಾನಸ್ಥಿಗೆ ಬರುವಂತೆ ನೆರವಿಗೆ ನಿಂತನೆಂದು ಹೇಳಲಾಗಿದೆ. ಅಲ್ಲಿಂದ ಲಕ್ಷ್ಮರಸನನ್ನು ಕೈಬಿಟ್ಟು, ಅಣ್ಣಿಗೆರೆಯ ಬಸದಿಯ ಗತಿ ಇತಿಹಾಸವನ್ನು ಪುನರಭಿನಯಿಸಿದ ರೀತಿಯಲ್ಲಿ ನಿರೂಪಿಸ ತೊಡಗುತ್ತದೆ ಈ ಶಾಸನ.